ಮಹಿಳಾ ವಿಶೇಷ ಸಂಚಿಕೆ–೨೦೧೮

ಹೊಸ ಮನುಷ್ಯ

ಸಮಾಜವಾದಿ ಮಾಸಿಕ

ಮಾರ್ಚ್, ೨೦೧೮ ಸಂಪುಟ: ೭ ಸಂಚಿಕೆ: ೧

ಸಂಪಾದಕ : ಡಿ.ಎಸ್.ನಾಗಭೂಷಣ

ಚಂದಾ ರೂ. ೧೫೦/- (ಫೆಬ್ರುವರಿಯಿಂದ ಸೆಪ್ಟಂಬರ್ ೨೦೧೮ರವರೆಗೆ)) ಬೆಲೆ: ಬಿಡಿ ಪ್ರತಿ: ರೂ. ೨೦/- ಪುಟ: ೨೪

ವಿಳಾಸ: ಎಚ್.ಐ.ಜಿ–೫, 'ನುಡಿ', ಕಲ್ಲಳ್ಳಿ ಬಡಾವಣೆ, ವಿನೋಬ ನಗರ, ಶಿವಮೊಗ್ಗ–೫೭೭ ೨೦೪

ದೂ: ೦೮೧೮೨–೨೪೮೫೭೪ ಸಂಚಾರಿ: ೯೪೪೯೨ ೪೨೨೮೪ *ಈ ಮೇಲ್:* dsnagabhushana@gmail.com

ಸಂಪಾದಕರ ಟಿಪ್ಪಣಿಗಳು

ಪ್ರಿಯ ಓದುಗರೇ,

ಪ್ರತಿ ವರ್ಷದಂತೆ ಈ ವರ್ಷವೂ ನಮ್ಮ ಈ ಮಾರ್ಚ್ ಸಂಚಿಕೆಯನ್ನು 'ಮಹಿಳಾ ವಿಶೇಷ ಸಂಚಿಕೆ'ಯಾಗಿ ರೂಪಿಸಿ ನಿಮ್ಮ ಮುಂದಿಡುತ್ತಿದ್ದೇವೆ. ಸ್ತ್ರೀತ್ವದ ಅನನ್ಯತೆಯನ್ನು ಹಲವು ನೆಲೆಗಳಿಂದ ಶೋಧಿಸುವ ಪ್ರಯತ್ನ ಮಾಡಿರುವ ಈ ಸಂಚಿಕೆಯಲ್ಲಿ ಸಮಾಜವಾದಿ ಆಶಯಗಳುಳ್ಳ, ಅಂದರೆ ನಮ್ಮ ಪತ್ರಿಕೆಯ ಓದುಗರೂ ಆದ ಕನ್ನಡದ ಬಹುಪಾಲು ಲೇಖಕಿಯರು ಇಲ್ಲಿ ಬರೆದಿದ್ದಾರೆ. ಮಾರ್ಚ್ ೨೩ ಲೋಹಿಯಾ ಜನ್ಮದಿನವೂ ಆದುದರಿಂದ ಅವರನ್ನು ಕುರಿತ ವಿಶ್ಲೇಷಣಾತ್ಮಕ ಲೇಖನವೊಂದರ ಪೀಠಿಕಾ ಭಾಗವನ್ನೂ ಈ ಸಂಚಿಕೆಯಲ್ಲಿ ಪ್ರಕಟಿಸಿದ್ದೇವೆ. ಓದಿ ಬರೆಯಿರಿ.

*** ***

ಕರ್ನಾಟಕ ವಿಧಾನಸಭೆಯ ಕೊನೆಯ ಅಧಿವೇಶನ ಮುಕ್ತಾಯಗೊಂಡಿದ್ದು, ಜನತೆ ಪ್ರಸಕ್ತ ಕಾಂಗ್ರೆಸ್ ಸರ್ಕಾರದ ಆಡಳಿತದ ಬಗ್ಗೆ ಇನ್ನು ಎರಡು ತಿಂಗಳುಗಳಿಗೂ ಕಡಿಮೆ ಅವಧಿಯಲ್ಲಿ ತನ್ನ ತೀರ್ಪು ನೀಡಲು ಸಜ್ಜಾಗುತ್ತಿದೆ. ಆದರೆ ತೀರ್ಪು ನೀಡುವುದು ಈ ಬಾರಿ ಸುಲಭದ ಕೆಲಸವಾಗಿಲ್ಲ. ಏಕೆಂದರೆ ಅದರ ಮುಂದೆ ಇರುವ ಆಯ್ಕೆ ತುಂಬ ಸಂಕೀರ್ಣವಾಗಿದೆ. ಕಾಂಗ್ರೆಸ್ ಕಳೆದ ಐದು ವರ್ಷಗಳಲ್ಲಿ ಮಾಡಿರಬಹುದಾದ ತಪ್ಪುಗಳಿಗೆ ಅದಕ್ಕೆ ತಿರಸ್ಕಾರದ ಶಿಕ್ಷೆ ನೀಡಬಯಸುವ ಮತದಾರನಿಗೆ ತನ್ನ ಮುಂದಿರುವ ಆಯ್ಕೆಗಳನ್ನು ನೋಡಿದರೆ ಗೊಂದಲ–ಗಾಬರಿ ಉಂಟಾಗುವಂತಿದೆ. ಕೆಲವು ತಿಂಗಳುಗಳ ಹಿಂದಷ್ಟೇ ಇನ್ನೂ ಸಾಕಷ್ಟು ಪ್ರಭಾವಶಾಲಿಯಾಗಿ ಕಾಣುತ್ತಿದ್ದ ನರೇಂದ್ರ ಮೋದಿ ನಾಯಕತ್ವದ ಕಾರಣದಿಂದಾಗಿ ಜನತೆಯ ನಿರ್ಣಾಯಕ ಆಶೀರ್ವಾದ ಪಡೆಯುವ ಸಾಧ್ಯತೆಗಳನ್ನು ಪಡೆದಿದ್ದ ಭಾರತೀಯ ಜನತಾ ಪಕ್ಷ ಈಗ ಹಲವು ಕಾರಣಗಳಿಂದಾಗಿ–ಮುಖ್ಯವಾಗಿ, ಮುಂಗಡ ಪತ್ರದಲ್ಲಿ ಕಂಡ ಅನಿರ್ದಿಷ್ಟ ಆರ್ಥಿಕ ನೀತಿ ಮತ್ತು ಪ್ರಧಾನಿಯವರ ಕಣ್ಣಾಸರೆಯಲ್ಲೇ ನಡೆದಂತೆ ತೋರುವ ದೊಡ್ಡ ಬ್ಯಾಂಕ್ ಹಗರಣ ಹಾಗೂ ಆಪಾದಿತ ವಿದೇಶಕ್ಕೆ ಪರಾರಿಯಾಗಿರುವುದು–ಮೋದಿಯವರ ಬಿಂಬ ಸಾಕಷ್ಟು ಮಸುಕಾಗಿದ್ದು, ಆ ಸಾಧ್ಯತೆ ಕ್ಷೀಣಿಸಿದೆ. ಇನ್ನು ಜಾತ್ಯತೀತ ಜನತಾ ಪಕ್ಷ ಅಲ್ಲಲ್ಲಿ ವ್ಯಕ್ತಿ ನಿಷ್ಠ ಮತ್ತು ನಿರ್ದಿಷ್ಟ ಜಾತಿ ನಿಷ್ಠ ಬೆಂಬಲದ ಮೇಲೇ ಜೀವಂತವಾಗಿದ್ದು, ಅದಕ್ಕೆ ನೆಪ ಮಾತ್ರಕ್ಕೂ ಯಾವುದೇ ತಾತ್ವಿಕ ಬೆನ್ನೆಲುಬೇ ಇಲ್ಲವಾಗಿ ಅವಕಾಶವಾದಿ ರಾಜಕಾರಣದ ದೊಡ್ಡ ಚರಿತ್ರೆಯೇ ಅದರ ಹಿಂದೆ ಇರುವುದರಿಂದಾಗಿ ಅದು ಜನತೆಯಿಂದ ಏಕಾಂಗಿಯಾಗಿ ಆಡಳಿತದ ಆದೇಶ ಪಡೆಯುವುದು ಅಸಾಧ್ಯ. ಹೀಗಾಗಿ ಎದುರಾಳಿಗಳ ದೌರ್ಬಲ್ಯಗಳನ್ನೇ ನಂಬಿ ಕಾಂಗ್ರೆಸ್ ಜಯದ ಆಸೆ–ವಿಶ್ವಾಸಗಳಲ್ಲಿದ್ದಂತಿದೆ. ಬಿಜೆಪಿ ವಿರೋಧವನ್ನೇ ತಮ್ಮ ತಾತ್ವಿಕತೆಯನ್ನಾಗಿ ರೂಢಿಸಿಕೊಂಡಂತೆ ತೋರುತ್ತಿರುವ 'ಪ್ರಗತಿಪರ'ರೆಂದು ತಮ್ಮನ್ನು ತಾವೇ ನಂಬಿಸಿಕೊಂಡಿರುವ ರಾಜ್ಯದ ಕೆಲವು ತುಂಡು ರಾಜಕೀಯ ಗುಂಪುಗಳು ಕಾಂಗ್ರೆಸ್‌ನ ಗೆಲುವಿಗಾಗಿ ಭೂಮಿಕೆ ಸಿದ್ಧಪಡಿಸುತ್ತಿರುವಂತಿವೆ. ಆದರೆ ಪ್ರಶ್ನೆ : ಕರ್ನಾಟಕದ ಜನತೆ ಈ ಆಯ್ಕೆಗಿಂತ ಉತ್ತಮ ಆಯ್ಕೆಗೆ ಅರ್ಹವಿಲ್ಲವೆ? ಅಥವಾ ಇದನ್ನು ಇನ್ನಷ್ಟು ವಿಸ್ತೃತಗೊಳಿಸಿ ಕೇಳುವುದಾದರೆ, ನಾವು ಈಗ ಕಾಣುತ್ತಿರುವದಕ್ಕಿಂತ ಉತ್ತಮ ರಾಜಕಾರಣಕ್ಕೆ, ಅಂದರೆ ಅದರಲ್ಲಿ ಭಾಗವಹಿಸಲು ಅರ್ಹರಾಗಿಲ್ಲವೆ?

ಕೆಂಗಲ್ ಹನುಮಂತಯ್ಯ, ಎಸ್. ನಿಜಲಿಂಗಪ್ಪ, ವೀರೇಂದ್ರ ಪಾಟೀಲ್, ದೇವರಾಜ ಅರಸು, ರಾಮಕೃಷ್ಣ ಹೆಗಡೆ ಇವರ ಸಣ್ಣ ಪುಟ್ಟ ದೌರ್ಬಲ್ಯಗಳು ಮತ್ತು ಪರಸ್ಪರರ ಮಧ್ಯದ ರಾಜಕೀಯ ವ್ಯತ್ಯಾಸಗಳು ಏನೇ ಇದ್ದರೂ ಇವರೆಲ್ಲ ರಾಜ್ಯ ರಾಜಕಾರಣಕ್ಕೆ ಒಂದು ಘನತೆ–ಗೌರವ ಒದಗಿಸಿ ಅವನ್ನು ಕಾಪಾಡಿದವರು. ಕಾಪಾಡಲು ಅಸಾಧ್ಯವೆನಿಸಿದಾಗ ಹಿನ್ನೆಲೆಗೆ ಸರಿದು ಹೋದವರು. ಜೊತೆಗೆ ಗೋಪಾಲಗೌಡರಂತಹ ಸಹಜ ಜನನಾಯಕನನ್ನು ನೋಡಿದ ರಾಜ್ಯವಿದು. ಇವರೊಂದಿಗೆ ಇಂದಿನ ವಿವಿಧ ಪಕ್ಷಗಳ ನಾಯಕರನ್ನು, ಭಾಷೆ, ವರ್ತನೆ ಮತ್ತು ರಾಜಕಾರಣದ ಉದ್ದೇಶ ಕುರಿತ ಅವರ ನಂಬಿಕೆಗಳ ಜೊತೆ ಹೋಲಿಸಿ ನೋಡಿದರೆ ಸಾಕು, ನಾವೆಂತಹ ಅವನತಿಯ ಹಾದಿಯಲ್ಲಿದ್ದೇವೆ ಎಂಬುದು ಗೊತ್ತಾಗುತ್ತದೆ. ಈ ಅವನತಿಯ ಸಂಕಟಗಳೇಕೆ ರಾಜ್ಯದ ಜನತೆಯನ್ನು ತನ್ನ ಸತ್ವಪರಂಪರೆಗೆ ತಕ್ಕ ಒಂದು ಪರ್ಯಾಯ ರಾಜಕೀಯ ಮಾರ್ಗವನ್ನು ಕಂಡುಕೊಳ್ಳಲು ಪ್ರೇರೇಪಿಸಲಿಲ್ಲ ಎಂದು ಆಶ್ಚರ್ಯವಾಗುತ್ತದೆ. ಭಾಜಪ ತನ್ನ ಹುಟ್ಟಿನ ದೋಷಗಳಿಂದಾಗಿಯೇ ಬದಲಾಗದ ಪಕ್ಷವಾಗಿರುವ ಖಂಡನೆಗೆ ಒಳಗಾಗಿದ್ದರೆ ಕಾಂಗ್ರೆಸ್ ತನ್ನ ಹಿರಿತನದ ಮೌಢ್ಯಕ್ಕೆ ಸಿಕ್ಕಿ ಬದಲಾಗದ ಪಕ್ಷವಾಗಿ ನಮ್ಮ ಮುಂದೆ ಇಂದು ಕಾಣಿಸುತ್ತಿದೆ. ಸಿದ್ಧರಾಮಯ್ಯ –ಯಡ್ಯೂರಪ್ಪ–ರಾಹುಲ್–ಮೋದಿ ಇಂದು ಚುನಾವಣಾ ರಂಗದಲ್ಲಿ ಎಬ್ಬಿಸುತ್ತಿರುವ ಮಾತಿನ ಧೂಳು ರಾಜಕಾರಣದ ಉದ್ದೇಶಗಳನ್ನೇ ವಿಕ್ಷಿಪ್ತಗೊಳಿಸಿ ಹಾಳುಗೆಡಹುವಂತಿವೆಯಲ್ಲವೆ? ಇಂತಹ ಅಸಹಾಯಕ ಸಂದರ್ಭದಲ್ಲಿ ಕರ್ನಾಟಕದ ಯೋಚಿಸಬಲ್ಲ ಮನಸ್ಸುಗಳು ಏನು ಮಾಡಬಹುದು?



ಈಗ ನಮ್ಮ ಪತ್ರಿಕೆಯನ್ನು ಓದಲಾರಂಭಿಸಿರುವ ನಟ ಪ್ರಕಾಶ್ ರೈ ಅವರು ನನ್ನೊಂದಿಗೆ ಮಾತನಾಡುತ್ತಾ ತಮ್ಮ ಆಲೋಚನೆಗಳನ್ನು ನನ್ನೊಂದಿಗೆ ಹಂಚಿಕೊಂಡರು. ಅವರ ಪ್ರಕಾರ ಇಂದಿನ ಸಂದರ್ಭದಲ್ಲಿ ತಾವು ತುರ್ತಾಗಿ ಒಂದು ರಾಜಕೀಯ ಪರ್ಯಾಯದ ಅಡಿಗಲ್ಲನ್ನಾದರೂ ಹಾಕಬೇಕಿದೆ. ಆದರೆ ಈ ಅಡಿಗಲ್ಲನ್ನು ಹಾಕಬಯಸುವವರು ಸ್ವತಃ ಚುನಾವಣಾ ರಾಜಕೀಯದಿಂದ ದೂರವಿರಬೇಕಾಗುತ್ತದೆ. ಅವರು ತಾವು ಕಟ್ಟಬಯಸಿರುವ ಪರ್ಯಾಯ ರಾಜಕೀಯ ಶಕ್ತಿಯ ಮೇಲೂ ಕಟ್ಟುನಿಟ್ಟಿನ ನಿಗಾ ಇಡಲು ಸಾಧ್ಯವಾಗುವ ಹಾಗೆ ಶಾಶ್ವತ ವಿರೋಧ ಪಕ್ಷವಾಗಿ ಉಳಿಯಬೇಕು. ಈ ಸಂಬಂಧವಾಗಿ ಅವರು ಲಂಕೇಶ್‌ರ ಮಾರ್ಗದ ಪ್ರಸ್ತಾಪ ಮಾಡಿದರು. ಆದರೆ ಲಂಕೇಶ್ ಈ ದಾರಿಯಲ್ಲಿ ಎಡವಿದ್ದೂ ಉಂಟು ಮತ್ತು ಇದರ ಪರಿಣಾಮಗಳೂ ನಮಗೆ ನೆನಪಿರಬೇಕೆಂದು ನಾನು ಸೂಚಿಸಿದೆ. ಜೊತೆಗೆ ಇನ್ನೊಂದು ಮಾತೂ ಹೇಳಿದೆ: ನಮಗೆ ಸಮಯ ತುಂಬ ಕಡಿಮೆ ಇರುವುದರಿಂದ ನಾವು ಮಾಡಹೊರಟಿರುವ ಕೆಲಸದಲ್ಲಿ ಜನಕ್ಕೆ ನಂಬಿಕೆ ಬರುವಂತೆ ಗಟ್ಟಿಯಾಗಿ ಕೆಲಸ ಆರಂಭಿಸಬೇಕಿದೆ. ನನ್ನ ಈ ಮಾತುಗಳಿಗೆ ಅವರ ಸಹಮತವಿದ್ದಂತಿತ್ತು.

ಪ್ರಕಾಶ್ ನಾನು ಗಮನಿಸಿದಂತೆ ಎಲ್ಲ ಪ್ರತಿಭಾವಂತರಂತೆ ಸ್ವಲ್ಪ ತಿಕ್ಕಲು ಮನುಷ್ಯ. ಆ ತಿಕ್ಕಲು ಒಂದು ಕೇಂದ್ರದೆಡೆಗೆ ಧಾವಿಸುವ 'ಶಕ್ತಿ'ಯಾಗಿ ಪರಿವರ್ತಿತವಾಗುವುದಾದರೆ ಅದರಿಂದ ಕರ್ನಾಟಕಕ್ಕೆ ಒಳ್ಳೆಯದೇ ಆಗುತ್ತದೆ. ಎಂಬುದು ನನ್ನ ನಂಬಿಕೆ. ಈ ನಂಬಿಕೆ ಇರುವವರೆಲ್ಲರೂ ಇಂದು ಅವರೊಂದಿಗೆ ಕೈಜೋಡಿಸಬೇಕಿದೆ.

–ಸಂಪಾದಕ

ಮಾರ್ಚ್ ೨೩, ಲೋಹಿಯಾ ಜನ್ಮ ದಿನ

ಲೋಹಿಯಾ ನೆನಪು

ಇಂದೇಕೆ ನಾವೇಕೆ ಲೋಹಿಯಾರನ್ನು ನೆನಪಿಸಿಕೊಳ್ಳಬೇಕು?

–ನ್ಯಾ. ಸುದರ್ಶನ ರೆಡ್ಡಿ

ಸಮಾಜವಾದಿ ಚಿಂತಕ ಮತ್ತು ನಾಯಕ ಡಾ. ರಾಮಮನೋಹರ ಲೋಹಿಯಾ ಅವರ ನೆನಪು ಅವರು ನಮ್ಮನ್ನಗಲಿ ಹೋದ ಈ ಐವತ್ತು ವರ್ಷಗಳ ನಂತರವೂ ಏಕೆ ಪ್ರಸ್ತುತವಾಗುತ್ತದೆ ಎಂಬುದನ್ನು ನಮ್ಮ ಸರ್ವೋನ್ನತ ನ್ಯಾಯಾಲಯದ ನಿವೃತ್ತ ನ್ಯಾಯಮೂರ್ತಿಗಾದ ನ್ಯಾ. ಸುದರ್ಶನ ರೆಡ್ಡಿಯವರು ತಮ್ಮ ಲೋಹಿಯಾ ಸ್ಮರಣಾರ್ಥ ಉಪನ್ಯಾಸದ ಪೀಠಿಕಾ ಭಾಗದಲ್ಲಿ ನಿರೂಪಿಸಿದ್ದಾರೆ. ಇದರ ಉಳಿದ ಭಾಗವನ್ನು ಮುಂದಿನ ಸಂಚಿಕೆಯಲ್ಲಿ ಪ್ರಕಟಿಸಲಾಗುವುದು.–ಸಂ.




ಮೊಟ್ಟ ಮೊದಲಿಗೆ ನನಗೆ ಹೇಳಬೇಕೆನಿಸಿರುವುದು ಏನೆಂದರೆ ಡಾ. ರಾಮಮನೋಹರ ಲೋಹಿಯಾರ ನೆನಪಿನಾರ್ಥ ಒಂದು ಸಂಕ್ಷಿಪ್ತ ಭಾಷಣವನ್ನು ಮಾಡುವ ಜವಾಬ್ದಾರಿಯನ್ನು ಅತ್ಯಂತ ವಿನಮ್ರತೆಯಿಂದಲೇ ಸ್ವೀಕರಿಸಿದ್ದೇನೆ.ಈ ನಮ್ರತೆಯಿಂದ ಮಾತ್ರ ನಮ್ಮ ಆಧುನಿಕ ಭಾರತದ ನಿರ್ಮಾಣಕ್ಕೆ ಬೇಕಾದಂಥ ಮೌಲ್ಯಯುತ ಅಸ್ತಿವಾರವನ್ನು ಹಾಕಿಕೊಟ್ಟವರಲ್ಲಿ ಒಬ್ಬರಾದ ಲೋಹಿಯಾರನ್ನು ಸಮೀಪಿಸಲು, ಅರ್ಥೈಸಿಕೊಳ್ಳಲು ಸಾಧ್ಯ ಎಂದು ತಿಳಿದಿದ್ದೇನೆ. ಅಷ್ಟಕ್ಕೂ ಲೋಹಿಯಾರಂಥ ಒಬ್ಬ ಮಹಾನ್ ವ್ಯಕ್ತಿಯ ಜೀವನ ಮತ್ತು ಸಾಧನೆಗಳನ್ನು ಒಂದು ಕೋಶದಲ್ಲಿ ಹಿಡಿದಿಡುವ ಸಾಹಸ ಮಾಡುವುದು ಮಹಾ ದುಸ್ತರದ ಕೆಲಸವೇ ಸರಿ. ಅವರು ತಮ್ಮ ಜೀವಿತಾವಧಿಯಲ್ಲಿ ಅಗಾಧವಾಗಿ ಬರೆದರು.ಯುರೋಪ್‌ನಲ್ಲಿ ವಿದ್ಯಾರ್ಥಿಯಾಗಿದ್ದಾಗ ಕೇವಲ ತನ್ನ ಇಪ್ಪತ್ತರ ಆಜುಬಾಜಿನ ಹರಯದಲ್ಲಿ ಜಿನೀವದಲ್ಲಿನ ರಾಷ್ಟ್ರ ಸಂಘದ (ಲೀಗ್ ಆಫ್ ನೇಷನ್ಸ್) ಸಮಾವೇಶದಲ್ಲಿ ಭಾರತವನ್ನು ಪ್ರತಿನಿಧಿಸಿದ ಬಿಕಾನೇರಿನ ಮಹಾರಾಜನು ಬ್ರಿಟಿಷ್ ಆಡಳಿತವನ್ನು ಹೊಗಳತೊಡಗಿದಾಗ ಅದರ ವಿರುದ್ಧ ಪ್ರತಿಭಟನೆಯ ಸಾರಥ್ಯವನ್ನು ವಹಿಸಿಕೊಂಡರು. ಅಖಿಲ ಭಾರತ ಕಾಂಗ್ರೆಸ್ ಕಮಿಟಿಯಲ್ಲಿ ವಿದೇಶಾಂಗ ವ್ಯವಹಾರಗಳ ಇಲಾಖೆಯನ್ನು ಸ್ಥಾಪಿಸಿದರು. ಕಾಂಗ್ರೆಸ್ ಸಮಾಜವಾದಿ ಪಕ್ಷದ ಸ್ಥಾಪನೆಗೆ ಅಡಿಪಾಯವನ್ನು ಹಾಕಿದರು. ಬ್ರಿಟಿಷರಿಂದ ಅನೇಕ ಬಾರಿ ಬಂಧನಕ್ಕೊಳಗಾಗಿ ಸಾಕಷ್ಟು ಚಿತ್ರವಿಚಿತ್ರ ಹಿಂಸೆಯನ್ನು ಅನುಭವಿಸಿದರು. ಸ್ವತಂತ್ರ ಭಾರತದಲ್ಲಿ ಸಮಾಜವಾದಿ ಪಕ್ಷವನ್ನು ಸ್ಥಾಪಿಸಿ ಒಂದು ಮಾನವೀಯ ಸಮಾಜವಾದಿ ಚಳುವಳಿಯನ್ನು ಹುಟ್ಟು ಹಾಕಿದರು. ಯಾರು ತನ್ನ ಜೀವನಪರ್ಯಂತ ಅತ್ಯಂತ ಪ್ರಾಮಾಣಿಕತೆಯಿಂದ ತನ್ನ ಆತ್ಮಸಾಕ್ಷಿಗೆ ಒಂದಿಷ್ಟೂ ಚ್ಯುತಿ ಬಾರದಂತೆ ಬಿಡುವಿಲ್ಲದೆ, ದಣಿವರಿಯದೆ ಬಡವ–ಶ್ರೀಮಂತರ ನಡುವಿನ ಕಂದಕವನ್ನು ಮುಚ್ಚಲು, ಜಾತಿ ಮತ್ತು ಲಿಂಗ ಅಸಮಾನತೆ ಎಂಬ ಜೋಡಿ ಪಿಡುಗುಗಳನ್ನು ತೊಡೆದು ಹಾಕಲು, ಬೃಹತ್ ಗಾತ್ರದ ಯಂತ್ರಗಳ ಅಪಾಯದ ಬಗ್ಗೆ– ಅದು ಸಾಮಾಜಿಕವಾಗಿ ಮತ್ತು ಪರಿಸರದ ದೃಷ್ಟಿಯಿಂದಲೂ ಬೀರುವ ದುಷ್ಪರಿಣಾಮಗಳಿಂದಾಗಿ–ಎಚ್ಚರಿಸಿದರೋ; ಎಲ್ಲಕ್ಕಿಂತ ಮಿಗಿಲಾಗಿ ಎಲ್ಲೆಡೆಯೂ ಏಕರೀತಿಯಾಗಿ ಕಂಡುಬರುವ, ಅನೇಕ ಸ್ತರದ, ಅಸಮಾನತೆಯಿಂದಾಗಿ ತಲೆತಲಾಂತರದಿಂದ ಮುಂದುವರೆದುಕೊಂಡು ಬರುತ್ತಿರುವಂಥ ಕೆಲವರಿಂದ ಹಲವರ ಶೋಷಣೆ, ದೌರ್ಜನ್ಯಗಳು ಮತ್ತು ಇದರಿಂದಾಗಿ ನಿರಂತರವಾಗಿ ಉರುಳುತ್ತಿರುವ ಹಿಂಸೆ ಮತ್ತು ದಮನದ ಚಕ್ರ – ಇವೆಲ್ಲವುಗಳ ವಿರುದ್ಧ ಹೋರಾಟವನ್ನು ರೂಪಿಸಿದರೋ, ಜನರ ಅಂತಃಸಾಕ್ಷಿಯನ್ನು ಜಾಗೃತಗೊಳಿಸಿದರೋ ಅಂತಹ ವ್ಯಕ್ತಿಯ ಜೀವನ ದರ್ಶನವನ್ನು, ಅವರ ಮನಸ್ಸನ್ನ ಮತ್ತು ವ್ಯಕ್ತಿತ್ವಧ ಸಮಗ್ರತೆಯನ್ನ ಅರ್ಥಮಾಡಿಕೊಳ್ಳುವ ಪರಿಯಾದರು ಎಂತು?

ಡಾ. ಲೋಹಿಯಾರ ಬಗ್ಗೆ ನಾನು ಯೋಚಿಸಿದಾಗಲೆಲ್ಲಾ ಅವರ ಬಗೆಗೆ ಪ್ರಚಲಿತವಿರುವ ಮತ್ತು ಇಂದಿನ ಕಾಲಕ್ಕೆ ಅತ್ಯಂತ ಸಮಂಜಸವಿರುವ ಒಂದು ದೃಷ್ಟಾಂತ ನೆನಪಿಗೆ ಬರುತ್ತದೆ. ಸ್ವಾತಂತ್ರೋತ್ತರ ಭಾರತದಲ್ಲಿ ಅವರು ಸ್ಪರ್ಧಿಸಿದ ಒಂದು ಚುನಾವಣೆಯ ಪ್ರಚಾರದ ಸಮಯದಲ್ಲಿ ಒಂದು ಸಮುದಾಯದ ಜನರು ಅವರನ್ನು ತಮಗೆ ಸೇರಿದ ಒಂದು ಪೂಜಾಸ್ಥಳದಲ್ಲಿ ಭಾಷಣವನ್ನು ಮಾಡಬೇಕೆಂದೂ ಹಾಗೆ ಮಾಡಿದರೆ ಆ ಸಮುದಾಯದ ಜನರ ಹೆಚ್ಚು ಮತಗಳು ಅವರಿಗೇ ಸಂದಾಯವಾಗುತ್ತದೆ ಎಂದೂ ಅರಿಕೆ ಮಾಡಿದರು. ಆದರೆ ಲೋಹಿಯಾರವರು ಈ ಪ್ರಸ್ತಾವನೆಯನ್ನು ಒಡನೆಯೆ ನಿರಾಕರಿಸಿದರು. ಆ ಚುನಾವಣೆಯಲ್ಲಿ ಅವರು ಬಹಳ ಕಡಿಮೆ ಅಂತರದಲ್ಲಿ ಸೋತರು. ಆದರೆ ಲೋಹಿಯಾರವರ ನಿರಾಕರಣೆಯು, ಮನುಷ್ಯನ ಅಸ್ತಿತ್ವದ ಆಳದ ಆಧ್ಯಾತ್ಮಿಕ ತಿಳಿವಿಗೆ ಸಂಬಂಧಪಟ್ಟ ಒಂದು ಪೂಜಾ ಸ್ಥಳವನ್ನು ತನ್ನ ಚುನಾವಣಾ ಪ್ರಚಾರ ಮತ್ತು ಲಾಭಕ್ಕಾಗಿ ಬಳಸಬಾರದೆಂಬ ಗಟ್ಟಿಯಾದ ಮೌಲ್ಯದ ಆಧಾರದಲ್ಲಿ ಸ್ಫುರಿಸಿತ್ತು. ತೀವ್ರ ಸ್ವತಂತ್ರ ಮನೋಭಾವನೆಯ, ತಮ್ಮ ಕ್ರಿಯೆಗಳಲ್ಲಿ ನೈತಿಕತೆಯ ಕಾಳಜಿಗಳೊಂದಿಗೆ ಎಂದೂ ರಾಜಿಮಾಡಿಕೊಳ್ಳದ, ಸಾಮಾಜಿಕ ನ್ಯಾಯದ ಚೌಕಟ್ಟಿನಲ್ಲೆ ವಿಶಾಲ ಸಮಾಜದ ಸಮಗ್ರ ಒಳಿತಿನ ಅನ್ವೇಷಣೆಯನ್ನೇ ಸದಾ ಆದ್ಯತೆಯ ವಿಷಯವನ್ನಾಗಿಸಿಕೊಂಡಿದ್ದ ಡಾ. ಲೋಹಿಯಾರವರು ಎಂದೆಂದಿಗೂ ಶ್ರೇಷ್ಠ ವಿದ್ವಾಂಸರೂ, ಸುಸಂಸ್ಕೃತರೂ, ಉದಾರವಾದಿಯೂ ಮತ್ತು ಉನ್ನತ ನೈತಿಕ ಪ್ರಜ್ಞೆಯುಳ್ಳ ವ್ಯಕ್ತಿಯೂ ಆಗಿದ್ದರು. ಭಾರತ ಇಂದು ಫ್ಯಾಸಿಸ್ಟ್ ರಾಜಕಾರಣದತ್ತ ಹೊರಳುತ್ತಿದೆ ಅಥವಾ ಅಂತಹ ರಾಜಕಾರಣವಾಗಿ ರೂಪುಗೊಳ್ಳುವ ಎಲ್ಲಾ ಚಹರೆಗಳನ್ನು ಪ್ರಕಟಪಡಿಸುತ್ತಿದೆ ಎಂಬ ಗುಮಾನಿಗಳು ಕೇಳಿ ಬರುತ್ತಿದೆ. ಇದನ್ನು ಸಮರ್ಥಿಸುವಂತಹ ರಾಜಕೀಯ ನಡೆಗಳನ್ನೂ ಕಾಣುತ್ತಿದ್ದೇವೆ. ಧರ್ಮ ನಿರಪೇಕ್ಷತೆಯ ಬದಿಗೆ ಸರಿಸುತ್ತಾ, ಆಡಳಿತ ಮತ್ತು ನ್ಯಾಯದಾನದಲ್ಲಿ ತೊಡಗಿರುವಂಥ ಸಂಸ್ಥೆಗಳನ್ನು ರಾಜಿಗೊಳಪಡಿಸಲಾಗುತ್ತಿದೆ. ಪತ್ರಕರ್ತರ ಕೊಲೆಗಳಾಗುತ್ತಿವೆ. ಮತ್ತು ಸಂವಿಧಾನದ ಪರವಾಗಿ ಧ್ವನಿ ಎತ್ತಿದವರಿಗೆ ಬಹಿರಂಗ ಬೆದರಿಕೆಗಳನ್ನು ಹಾಕಲಾಗುತ್ತಿದೆ. ಇಂಥ ಸಂದಿಗ್ಧ ಮತ್ತು ವಿಷಮ ಗಳಿಗೆಯಲ್ಲಿ ಲೋಹಿಯಾರಂತಹ ಮಹಾನ್ ವ್ಯಕ್ತಿಯನ್ನು ಸ್ಮರಿಸಿಕೊಳ್ಳುತ್ತಾ ಹೀಗೆ ಕೇಳಿಕೊಳ್ಳಲಾಗದೆ ಇರಲಾಗುವುದಿಲ್ಲ.

ಆದರೆ ಡಾ.ಲೋಹಿಯಾರವರನ್ನು ಕೇವಲ ಅವರ ಕೆಚ್ಚೆದೆಯ ಮತ್ತು ಅವಧೂತನೆನಿಸುವಂತ ಭಾಷಣಗಳಿಗೆ ಮಾತ್ರ ಸೀಮಿತಗೊಳಿಸಿ ಸ್ಮರಿಸಿಕೊಳ್ಳಬಾರದೆಂದು ನಾನಿಲ್ಲಿ ಕಳಕಳಿಯಿಂದ ಸೂಚಿಸಬಯಸುತ್ತೇನೆ. ಏಕೆಂದರೆ ಈಗ ಎಲ್ಲೆಡೆಯೂ ಕಳೆದಾರು ದಶಕಗಳಿಂದ ಇಲ್ಲಿ 'ಏನೂ ಸಂಭವಿಸಿಯೇ ಇಲ್ಲ' ಎಂಬ ವಾದವು ಕೇಳಿಬರುತ್ತಿದ್ದು, ಅಂತಿಮವಾಗಿ ಎಲ್ಲವನ್ನೂ ಈಡೇರಿಸುವ ಒಬ್ಬ ನಾಯಕನು ಉದಯಿಸಿದ್ದಾನೆಂಬ ಆಲೋಚನಾರಹಿತ ಮಾತುಗಳು ಎಲ್ಲೆಡೆಯೂ ವ್ಯಾಪಿಸುತ್ತಿದ್ದು ಈ ಕಾಲವು ಎಲ್ಲಾ ರೀತಿಯಿಂದಲೂ ಅತ್ಯಂತ ಪ್ರಕ್ಷುಬ್ದಮಯವೂ ಮತ್ತು ಕಳವಳಕಾರಿಯೂ ಆಗಿದೆ. ಇಂಥ ಸಮಯದಲ್ಲೇ ನಾವು ಇತಿಹಾಸದ ಮಹಾ ವ್ಯಕ್ತಿಗಳ ಜೀವನ ಮತ್ತು ಸಾಧನೆಗಳಿಂದ, ಅವರು ಪ್ರತಿಪಾದಿಸಿದ ತತ್ವಗಳ ದರ್ಶನಗಳಿಂದ ಸ್ಫೂರ್ತಿಯನ್ನು, ಆಧಾರಗಳನ್ನು ಪಡೆದುಕೊಂಡು ನಮ್ಮ ಮುಂದಿನ ಕಾರ್ಯಗಳನ್ನ ರೂಪಿಸಿಕೊಳ್ಳ ಬೇಕಾಗಿದೆ. ಆದರೆ ಅಂತಹವರ ದರ್ಶನ ಮತ್ತು ಕಾಣ್ಕೆಗಳಿಂದ ಪಡೆದಂಥ ಸ್ಫೂರ್ತಿ ಮತ್ತು ಚೈತನ್ಯಗಳ ಬಾಳಿಕೆಯನ್ನು ಹೆಚ್ಚಿಸಿಕೊಳ್ಳಬೇಕಾದರೆ, ನಾವು ಅವರ ಮೂಲ ತತ್ವಗಳನ್ನು ವಿಶ್ಲೇಷಾತ್ಮಕವಾಗಿ ಗ್ರಹಿಸಿ ಅದನ್ನು ನಮ್ಮ ಕಾಲಕ್ಕೆ ಅನ್ವಯಿಸಿಕೊಳ್ಳುವುದರ ಮೂಲಕವೂ, ಅಗತ್ಯವಿದ್ದಲ್ಲಿ ಒಂದಿಷ್ಟು ಮಾರ್ಪಾಡು ಮಾಡಿಕೊಂಡು ಇಲ್ಲವೇ ಹೊಸ ಹೊಸ ಜ್ಞಾನಗಳ ಬೆಳಕಲ್ಲಿ ಆ ತತ್ವಗಳನ್ನು ವಿಸ್ತರಿಸಿಕೊಂಡೊ, ಇಲ್ಲವೇ ನಮ್ಮ ಪ್ರಜಾತಂತ್ರ ಮತ್ತು ಸಾಂವಿಧಾನಿಕ ರಚನೆಗಳು ಎದುರಿಸಿದಂಥ ಸಾಂಸ್ಥಿಕ ಆಘಾತಗಳು ಮತ್ತು ಅನುಭವಗಳನ್ನು ಪರಿಶೀಲಿಸಿಕೊಳ್ಳುತ್ತ ಸಾಗಬೇಕು.

(ಕನ್ನಡಾನುವಾದ : ಬಿ.ವಿ. ಸುರೇಂದ್ರ)

(ಮುಂದುವರೆಯುವುದು)



ಮಹಿಳಾ ಪುಟಗಳಿಗೆ ನಾಂದಿ ಹಾಡು!



ಮಾರ್ಚ್ ಎಂದರೆ ಮಹಿಳಾ ಮಾಸ! ಇದರ ಪ್ರಯುಕ್ತ ನಾವು ಪ್ರಕಟಿಸುತ್ತಿರುವ ಈ ಮಹಿಳಾ ವಿಶೇಷ ಸಂಚಿಕೆಯ ಪುಟಗಳ ನಾಂದಿ ಹಾಡಾಗಿ ನಮ್ಮ ನಡುವಿನ ವಿಶಿಷ್ಟ ಮಹಿಳಾ ಹೋರಾಟಗಾರ್ತಿಯಾದ ದು. ಸರಸ್ವತಿ ಇಲ್ಲೊಂದು ಮಹಿಳಾ ಕೋಲ್ಟು ಏರ್ಪಡಿಸಿ ಅವರದೇ ವಿಶಿಷ್ಟ ಭಾಷೆಯಲ್ಲಿ ಎಲ್ಲವನ್ನೂ ಬಿಚ್ಚಿಟಿದ್ದಾರೆ.! ಗಂಡಸರೂ ಹೆಂಗಸರೊಂದಿಗೆ ಕೂಡಿ ಓದಬಹುದು.–ಸಂ.

ಎಂಗುಸ್ರ ಕೋಲ್ಟ್‌ನಾಗೆ ಸತ್ಯ ಉಡುಕ್ಕೊಂಡು

ಇವತ್ತು ಇಲ್ಲಿ ನೆರ್ದಿರೋ ಕೋಲ್ಟ್‌ನಾಗೆ ಎಣ್‌ಮಕ್ಳು ಅವ್ರು ಪಟ್‌ಪಾಡು, ಉಂಡ್‌ನೋವು, ಎದ್ರುಸಿದ ಅವ್ಮಾನ, ಹಿಡ್ದ ಪಟ್ಟಿನ ಕತೆನೆಲ್ಲ ಅಂಚ್ಕೊಂಡ್ರು. ಎಲ್ಲಾರು ನೋಡಿದ್ವಿ, ಕೇಳಸ್ಕಂಡ್ವಿ, ಈಗ ಕೋಲ್ಟು ಬರ್ಕಾಸ್ತಾಯ್ತ ಅದೆ. ಅದ್ಕೆ ಮುಗ್ಸೊ ಮಾತಾಡು ಅಂತ ನನ್ನ ಕರ್ದವ್ರೆ. ಆದ್ರೆ ನಾನು ಇಲ್ಲಿ ನಿಂತಿರೋದು ಮುಗ್ಸಕ್ಕಲ್ಲ, ಮುಂದ್ವರ್ಸಕ್ಕೆ. ಟೇಮ್ ನೋಡ್ಕಂತ ಇದೀರಾ? ಸ್ಯಾನೆ ವತ್ತು ತಗಳಲ್ಲ. ಮುಂದ್ವರ್ಸದೇನಂತ ಬಿರ್ನೆ ಏಳ್ತೀನಿ ಕೇಳ್ಕಂಡೋಗಿ :

ಎಲ್ರಿಗೂ ಗೊತ್ತದೆ ಎಂಗೆ ಎಣ್ಮಕ್ಕಳ್ನಾ
ಉಟ್ಟಕ್ಮುಂಚಲೇ ವಸ್ಕಾಕ್ತರೆ
ಉಟ್ಟಿದ್ಮ್ಯಾಲೆ ಇಸ ಕುಡುಸ್ತರೆ
ಬದ್ಕಕೆ ಬಿಟ್ರೆ ಅವ್ಮಾನ ಉಣ್ಸಿ ಬೆಳಸ್ತರೆ.. ವರೆ ಅಂತ ಮಾರ್ತರೆ
ಮೋಜಂತ ಮಜ ಮಾಡ್ತರೆ. ಮದ್ವೆ ಮಾಡ್ಕಂಡು ಉಸ್ರುಗಟ್ಟಸ್ತರೆ, \
ನೇಣಾಕ್ತರೆ, ಸುಡ್ತರೆ
ಅಂಗುಸ್ತರೆ, ಇಂಗುಸ್ತರೆ, ನುಂಗಿನೀರ್ ಕುಡಿತರೆ
ಇವು ಕೊನೆಗಾಣ್ಬೆಕಾಗಿರದು
ಮುಂದ್ವರಿಬೇಕಾದ್ದು ಬದ್ಕು
ಎಂತ ಬದ್ಕು ಅಂತಿರಾ?
ಬೂಮ್ತಾಯಿ ಮೆಚ್ಕೊ ಅಂತ ಬದ್ಕು
ಬೂಮ್ತಾಯಿ ಮ್ಯಾಲಿನ್ ಒಂದೊಂದ್ ಜೀವಾನೂ ಒಂದೊಂದು ಲೋಕ,
ಲೋಕ್‌ಲೋಕ್‌ಗಳೆಲ್ಲ ಕಳ್ಳುಬಳ್ಳಿಲಿ ಎಣ್ಕಂಡು ಬೂಮ್ತಾಯಿ ಎಂಬೋ ಲೋಕ
ಉಟ್ಕೊವೆಲ್ಲ ಸಾಯ್ಲೇಬೇಕು
ಇದ್ದಾಗ ಬದುಕ್ಬೇಕು
ಬದುಕ್ಮಾಡಾಕೆ ಜತೆಬೇಕು–
ದುಡ್ದು ಉಣ್ಣಾಕೆ
ಬಂಗಬಡ್ತನ ಅಂಚ್ಕಳಕೆ
ಅಂದಚೆಂದ ಅನ್ಬೋಗ್ಸಕೆ
ಉಸ್ಸೊ ಅಂದಾಗ ರಟ್ಟೆ ಕೊಡಾಕೆ
ನಕ್ಕು ನಲ್ಯಾಕೆ
ಸತ್ತಾಗ ಮಣ್ ಮಾಡಾಕೆ
ಅದ್ ಬಿಟ್ಟು ಜತೇಲಿ ಬದ್ಕಾಕೆ ಸುಂಕ ಕೇಳದು ನ್ಯಾಯವಾ?
ರಟ್ಟೆ ಬದ್ರುವಾಗದೆ ಬಂಡೆನಾದ್ರು ಕುಟ್ಟಿ ಬದ್ಕನ ಬಿಡು ಅನ್ನೊದ್ ಬಿಟ್ಟು ಬಂಗಾರ ಬೇಕನ್ನದು ನ್ಯಾಯವಾ?
ಕಲ್ ಗುದ್ದಿ ನೀರ್ ತಗ್ಯ ವಯ್ಸ್‌ನಾಗೆ ಬಂಗ್ಲೆ ಕಾರು ಕೇಳಾಕೆ ನಾಚ್ಕೆ ಆಗಾದ್ ಬ್ಯಾಡ್ವಾ?
ಕೊಡೊರು ಉಸ್ಸೊ ಅಂತ ಸಂಕ್ಟಪಟ್ಕಂಡು ಕೊಟ್ರೆ ನಿಸೂರಾಗಿರಕಾದಾತಾ?
ಕೂತು ಉಣ್ಣೋನಿಗೆ ಕುಡ್ಕೆ ಅಣ ಸಾಲ್ದು ಅನ್ನಂಗೆ ಬೇಕು ಬೇಕು ಅನ್ನೋ ದುರಾಸೆ ಕೊಟ್ಟಷ್ಟು ಇಂಗಲ್ಲ
ದುರಾಸೆ ಮನುಸ್ರುನ ಮನುಸ್ರಾಗಿ ಇರಾಕ್ಬಿಟ್ಟಿಲ್ಲ. ಮಾರ್ಕೇಟ್ನಾಗೆ ಮಾರೋ ಸಮಾನ್‌ಮಾಡಕ್ ಬುಟ್ಟೈತೆ. ಆತ್ಮಾನು ಅಡವಿಟ್ಕಂಡವ್ರೆ ಚೌಕಾಸಿಗೆ
ಅಕ್ಕಿ, ಬ್ಯಾಳೆ, ಸೊಪ್ಪು ತರ್ಕಾರಿ ಬೆಡ್ಡು ಬಿಸ್ಕತ್ತು ಬಟ್ಟೆಬರೆ
ಎಲ್ಲಾನೂ ಗಾಳಿ ಆಡ್ದಿರೊ ಪಿಲಾಸ್ಟಿಕ್ ಪಾಕೀಟಾಗೆ ರೇಟಾಕಿ ನೋಟಿಗ್ಮಾರೋ ಮಾರ್ಕೇಟು
ಅಂತದೆ ಜೀವ–ಜಲ ಇಂಗ್ದೆ ಇರೋ ಅಮ್ಮು–ಅಂತಸ್ತು, ಅದ್ಕಾರ ಅನ್ನ ಪಿಲಾಸ್ಟಿಕ್ ಪಾಕೇಟ್ನಾಗೆ ರಕ್ತ ಮಾಂಸ, ಪ್ರಾಣ, ಬಯ್ಕೆ, ಕನ್ಸು ವತ್ಕಂಡಿರೋ ಮನುಸ್ರುನೂವೆ ಮಾರಾಟ ಆಯ್ತ ಅವ್ರೆ
ಬೂಮ್ತಾಯಿ ಕೊಟ್ಟಿರೋ ಅಂದ–ಚಂದ, ತತ್ವ–ಸತ್ವ ತಿಳಿದಿರೋ ಮೂಡ್ರು
ಯಾಕೆ ಅಂದ್ರೆ ಎದೆವಳ್ಗಿನ ಜೋತಿಗೆ ಕಿಟ್ಟಕಟ್ಟಿ ಮಂಕಾಗದೆ
ಮ್ಯಾಲುಕೀಳು ಅನ್ನೋ ಕಿಟ್ಟ
ಆನ್ಕಾರ ಅದ್ಕಾರ ಅನ್ನೋ ಕಿಟ್ಟ
ಬೂಮ್ತಾಯಿ ನಮ್ಗೆ ಕೊಟ್ಟಿರೊ ಸತ್ವದಾಗೆ
ಅತ್ತಿ ಬತ್ತಿ ಆತದೆ
ಕಾಳು ಎಣ್ಣೆ ಆತದೆ
ಮಣ್ಣು ದೀಪ ಆತದೆ
ಬೆಂಕಿ ಬೆಳ್ಕಾತದೆ, ಆ ಬೆಳ್ಕಿಗೇ ಕಿಟ್ಟ ಕಟ್ಟಿದ್ರೆ ಲಾಸು ಯಾರ್ಗೆ?
ಮೈ ಬಗ್ಸಿ ದುಡುದ್ರೇನೆ
ವಟ್ಟೆ ತುಂಬ ಉಣ್ಣಾಕಾಗಾದು
ಕಣ್ ತುಂಬ ನಿದ್ದೆ ಮಾಡಕಾಗಾದು
ಪರರ ದುಡ್ಮೆಫಲ ಕಿತ್ಕಂಡು ಉಂಡ್ರೆ
ತಿಂದನ್ನ ಕುಡ್ದ ನೀರು ಮೈಗತ್ತಲ್ಲ
ಕಣ್ಗೆ ನಿದ್ದೆ ಅತ್ತಿ ಮನ್ಸು ಅಗ್ರಾಗಲ್ಲ
ಒಳ್ಗಿರೋ ಜೋತಿ ಜೋಪಾನವಾಗಿದ್ರೆ ಬೀದಿಗಿಳಿಯಾಕ ಅಂಜ್ಕಬಾರ್ದು
ಗ್ವಾಡೆಚಾವ್ಣಿ ಆಕ್ಕಂಡು ಇದು ಬೀದಿ ಇದು ಮನೆ ಅನ್ನಕಾದಾತಾ?
ಜೊತೆನಾಗೆ ಬಾಳೋದ್ರ ಬೆಲೆತಿಳಿದಿರೋರ್ಗೆ ಇನ್ನೊಂದ್ ಕೂಟ್ರು, ಇನ್ನೊಂದ್ ಸೈಟು, ಇನ್ನೊಂದು ಚೇನು ಕೊಟ್ರೆ ಸರೋತದೆ ಅಂದ್ಕಳದು ಸೈಯಾ? ದುರಾಸೆ ಬೆಂಕಿನಾಗೆ ಉರ್ದೋಗದು ಸೈಯಾ?
ಇಲ್ ಮಾತಾಡಿದ್ ಎಣ್‌ಮಕ್ಕ ನೋಡಿರಲ್ಲ ಅವರ್ತಾವ ಕಾಸಿಲ್ಲಕಿಮ್ಮತ್ತಿಲ್ಲ ಕತ್ತಿಲ್ಲ ಬಂದೂಕಿಲ್ಲ, ವಟ್ಟೆ ಸಂಕ್ಟಾನೆ ಆಯ್ದುಮಾಡ್ಕಂಡವ್ರೆ. ಆ ಆಯ್ದಕ್ಕೆ ಕೋಲ್ಟಾಗಿರೋ ನ್ಯಾಯ್ದ ತಕ್ಡಿ ಆಟೆ ಅಲ್ಲ ಎಲ್ರ ಎದೆಒಳ್ಗೀನ ನ್ಯಾಯದ್ ತಕ್ಡಿನೂ ತೂಗ್ಬೆಕು. ನ್ಯಾಯ ಅಂದ್ರೆ
ಜೀವ ತೆಗ್ಯದಲ್ಲ ಜೀವ ಕಾಪಾಡದು
ದುಡ್ಮೆಫಲ ಕಿತ್ಕಳದಲ್ಲ ದುಡ್ದು ಉಣ್ಣೋದು
ಅವ್ಮಾನ ಮಾಡದಲ್ಲ ನನ್ನಂಗೆ ಇನ್ನೊಂದ್ ಜೀವ ಅಂತ ಗೌರವಿಸೋದು
ಬೇಕು ಬೇಕು ಅನ್ನೋ ದುರಾಸೆ ಅಲ್ಲ ಇರೋದ್ನ ಅಚ್ಕಂಡು ಉಣ್ಣದು
ಎದ್ರುಸೋದಲ್ಲ ನಾನಿದೀನಿ ಜತೆಲಿ ಅನ್ನೊದು
ಇರ್ವೆ–ಆನೆ, ಗುಡ್ಡ–ಪರ್ವತ, ತೊರೆ ಸಮುದ್ರ ಎಲ್ಲನೂ ವತ್ಕಂಡು ಗುಂಡುಗಿರೋ ಬೂಮ್ತಾಯಿಗೆ ಕೊನೆ ಯಾವ್ದು ಮದ್ಲು ಯಾವ್ದು?
ಬೂಮಿ ಮೇಲಿನ ಸಂಬಂದ್ಗೋಳು ಒಂದ್ಕೊಂದು ಎಣ್ಕಂಡು ನಡೀತ್ಲೆ ಇರ್ತವೆ. ನಡ್ಯದ್ಕೆ ಬದ್ಕು ಅನ್ನದು.
ಈ ಸತ್ಯ ಉಡ್ಕೋದು ಅಂದ್ರೆ ಕಗ್ಗಾತ್ಲಾಗೆ ಉಯ್ಯೋ ಮಳೇಲಿ ತಪ್ಸ್ಕಂಡಿರೊ ದನ ಉಡ್ಕದಂಗೆ. ಉಡ್ಕಾಕೆ ದೈರ್ಯ ಇರ್ಬೇಕು, ನ್ಯಾಯ ಅನ್ನೊ ಬೆಳಕಿರಬೇಕು. ಈ ಎಣ್ಮಕ್ಳು ವಚ್ಚಿರೋ ನ್ಯಾಯದ್ ಜೋತಿನಾ ನಮ್ಮದೆ ವಳ್ಗೆ ವಚ್ಕಬೇಕು, ವಬ್ರಿಂದ ವಬ್ರಿಗೆ ವಚ್ತ ವೋಗ್ಬೇಕು.

(ಮಹಿಳಾ ಪೌರ ಕಾರ್ಮಿಕರ ಸಂಘಟನೆಯೂ ಸೇರಿದಂತೆ ಮಹಿಳಾ ಹಕ್ಕುಗಳ ಹೋರಾಟದಲ್ಲಿ ಭಾಗವಹಿಸುತ್ತಿರುವ ದು. ಸರಸ್ವತಿ ಅವರು ಕನ್ನಡದ ಪ್ರತಿಭಾವಂತ ಲೇಖಕಿಯೂ ಆಗಿದ್ದು ವಿಜಯಪುರದ ಅಕ್ಕಮಹಾದೇವಿ ಮಹಿಳಾ ವಿಶ್ವವಿದ್ಯಾನಿಲಯದಲ್ಲಿ ಸಂಶೋಧನಾ ಕಾರ್ಯದಲ್ಲಿ ತೊಡಗಿದ್ದಾರೆ)



'ಅಂಟಿದ ನಂಟಿನ ಕೊನೆ ಬಲ್ಲವರಾರು?' :
ಹೆಣ್ಣು-ಗಂಡೆಂಬ ಜೋಡಿಜೀವ-ಜೀವನ ಕುರಿತ ಒಂದು ವಿವೇಚನೆ

-ಲಕ್ಷ್ಮೀಶ ತೋಳ್ಪಾಡಿ

'ಲೋಕವನ್ನು ಹೆಣ್ಣು-ಗಂಡೆಂದು ಎರಡಾಗಿ ನೋಡಿದರೆ ಹೆಣ್ಣನ್ನು ತಿಳಿಯುವುದೇ ಗಂಡಿನ, ಗಂಡನ್ನು ತಿಳಿಯುವುದೇ ಹೆಣ್ಣಿನ ಸಾರ್ಥಕತೆಯಾಗಿ ಕಂಡುಬರುತ್ತದೆ. ಇದಕ್ಕಿಂತ ಹೆಚ್ಚಿನ ಉದ್ದೇಶವೇ ಬದುಕಿಗೆ ಇಲ್ಲವೇನೋ ಎನ್ನಿಸುತ್ತದೆ.'



"ಹೆಣ್ಣು ಗಂಡು ಇಬ್ಬರೂ ಹೊಂದಿರುವುದು ಒಂದೇ ಬಟ್ಟೆ"

ಹೆಣ್ತನದ ಕುರಿತು ನಿಮ್ಮ ಆಲೋಚನೆಗಳನ್ನು ಬರೆಯಿರಿ ಎಂದು ಸಂಪಾದಕರು ಕೆಲವು ಸೂಚನೆಗಳನ್ನೂ ನೀಡಿ ಪ್ರೀತಿಯಿಂದ ಆದೇಶಿಸಿದ್ದಾರೆ. ಬೇಂದ್ರೆ ಮತ್ತು ವಚನಕಾರರನ್ನು ಮುಖ್ಯವಾಗಿ ಮುಂದಿರಿಸಿಕೊಂಡು ಅವರ ಕಾವ್ಯಾನುಭವದ ಮೂಲಕ ಸ್ತ್ರೀ ಪುರುಷ ಪ್ರಕೃತಿಯನ್ನು ನೋಡುವ ಯತ್ನವಿದು. ಬೇಂದ್ರೆಯವರ ಆತ್ಮ ಕಥನಾತ್ಮಕವಾದ ದೀರ್ಘ ಕವನ 'ಸಖೀಗೀತ'ದಲ್ಲಿ ಪಲ್ಲವಿಯಂತೆ ಒಂದು ಸಾಲು ಕೇಳಿಸುತ್ತದೆ. 'ನನಗೂ ನಿನಗೂ ಅಂಟಿದ ನಂಟಿನ ಕೊನೆ ಬಲ್ಲವರಾರು ಕಾಮಾಕ್ಷಿಯೇ' ಎಂಬ ಸಾಲು ಅದು. ಈ ನಂಟಿಗೆ ಕೊನೆ ಇಲ್ಲ. ಅಥವಾ ಕೊನೆಯೇ ಇಲ್ಲದಿರಬಹುದು. ಕೊನೆ ಎಂಬ ಯೋಚನೆಯೇ ತಪ್ಪಿರಬಹುದು. ನಂಟಿಗೆ ಒಂದೇ ರೂಪವು ಇಲ್ಲ. ನೂರಾರು ರೂಪಗಳು. ಅಂಟಿದ ನಂಟು ಎಂದು ಹೇಳಿದರೂ ಇದು ಎಲ್ಲೋ ಹೊರಗಿನಿಂದ ಅಂಟಿದುದು ಅಲ್ಲ. ಜೀವದ ಒಳಗಿನಿಂದಲೇ ಜೀವದ ಅಂಗವಾಗಿ-ಅಂಗವೇನು-ಜೀವದ ಒಡಲೇ ಆಗಿ-ಇರುವಂಥದು. ಆದುದರಿಂದ ನಂಟಿನಿಂದ ಬಿಡಿಸಿಕೊಳ್ಳುವ ಪ್ರಶ್ನೆಯೇ ಇಲ್ಲವಷ್ಟೇ. 'ಸಖೀಗೀತ'ಕ್ಕಿಂತ ಹದಿನೇಳು ವರ್ಷ ಮುನ್ನವೇ-ಪ್ರಾಯಶಃ ಮದುವೆಯಾದ ಹೊಸತರಲ್ಲಿ-ಬೇಂದ್ರೆ 'ಗಂಡಸು ಹೆಂಗಸಿಗೆ' ಎಂಬ ಕವಿತೆ ಬರೆದಿದ್ದರು. ಅದು ಹೀಗೆ ಪ್ರಾರಂಭವಾಗುತ್ತದೆ.

ತಾಯೆ ಕನಿ ಮನೆಯೆ ಅಕ್ಕ ಅಕ್ಕರತೆಯೇ
ಬಾ ಎನ್ನ ತಂಗಿ ಬಾ ಮುದ್ದು ಬಂಗಾರವೇ
ನೀ ಯೆನ್ನ ಹೆಂಡತಿಯೋ
ಮೈಗೊಂಡ ನನ್ನಿಯೋ
ಮಗಳೋ ನನ್ನೆದೆಯ ಮುಗುಳೋ

ಇಲ್ಲಿ ಎಲ್ಲ ಸಂಬಂಧಗಳೂ ತಾಯಿಯಿಂದ ತೊಡಗಿ ಮಗಳ ತನಕ ಬಂದಿವೆ. ಗೆಳತಿಯೂ ಬಂದಿದ್ದಾಳೆ. 'ತಿಂಗಳಿನ ಬೆಳಕ ಹೊಂಗೆಳತಿ ಜೊತೆಯಾದೆನೀ ಕಂಗಳಿಗೆ ಕತ್ತಲೆಯೊಳಿದ್ದವಗೆ' ಎಂಬ ಸಾಲು ಮುಂದೆ ಇದೆ. 'ಜೊತೆಯಾದೆ ನೀ ಕಂಗಳಿಗೆ' ಎಂಬ ಸಾಲನ್ನು ಗಮನಿಸಿ. ಅದ್ಭುತವಾದ ಮಾತಿದು. ನನ್ನ ಕಣ್ಣುಗಳಿಗೆ ನೀನು 'ದೃಶ್ಯ' ಮಾತ್ರ ಅಲ್ಲ. ನನ್ನ ಕಣ್ಣಿಗೆ ನೀನು ಜೊತೆ ಕಣ್ಣು. ನಾವಿಬ್ಬರೂ ಸೇರಿ ನೋಡುತ್ತಿರುವುದು ಲೋಕದ 'ದೃಶ್ಯ'. ಇದು ಒಂದೆಡೆಯಾದರೆ, 'ಜೊತೆಯಾದೆ ನೀ ಕಂಗಳಿಗೆ' ಎನ್ನುವಾಗ ಕನ್ನಡಿಯಂತೆ ನನ್ನ ಕಣ್ಣೆದುರಿನ ಕಣ್ಮಣಿಯೂ ಹೌದು ನೀನು ಅಂದಾಗ ನನ್ನ ಕಣ್ಣಿನಲ್ಲಿ ನಿನ್ನ, ನಿನ್ನ ಕಣ್ಣಿನಲ್ಲಿ ನನ್ನ ಪ್ರತಿಫಲನ ನಿರಂತರ ನಡೆದೇ ಇದೆ. 'ಕಣ್ಣಿದಿರುಗಣ್ಣಿನೊಳಗೊಬ್ಬರೊಬ್ಬರ ಗೊಂಬೆ ನಮ್ಮಿಬ್ಬರೊಳಗೆ ಹಬ್ಬಿಹುದು' - ಹೀಗೆ ನಿನ್ನ ಕಣ್ಣಿನಲಿ ನನ್ನನ್ನು ನಾನು ನೋಡಲಾಗದೆ ಇರುತ್ತಿದ್ದರೆ ನಾನು ಕತ್ತಲೆಯಲ್ಲೇ ಇರುವಂತೆ ಆಗುತ್ತಿತ್ತು ಎನ್ನುವ ಭಾವ, ಬೇಂದ್ರೆಯವರಿಗೆ. ಇದು ಮೂಲ ಭಾವ. ನಾಲ್ಕು ಕಣ್ಣು ಸೇರದೆ ಪೂರ್ಣ ಚಿತ್ರವಿಲ್ಲ ಎನ್ನುವ ನಿಲುವು.

ಬೇಂದ್ರೆಯವರ ಇನ್ನೊಂದು ಶ್ರೇಷ್ಠ ಕವನ 'ಕಲ್ಪವೃಕ್ಷ ವೃಂದಾವನಗಳಲಿ'ಯಲ್ಲಿ 'ಅಲ್ಲಿ ಎಲ್ಲರಿಗೆ ನಾಲ್ಕು ಕೈಗಳೋ ಮಾಟ ತಪ್ಪದಿಹವು' ಎಂಬ ಸಾಲು ಇದೆ. 'ನಾಲ್ಕು ಕೈಗಳು' ಎನ್ನುವಲ್ಲಿ 'ನಾಲ್ಕು ಕಂಗಳೋ' ಎಂದು ಕೂಡ ಹೇಳಬಹುದು. ನಾಲ್ಕು ಎನ್ನುವ ಪರಿಕಲ್ಪನೆ ಬೇಂದ್ರೆಯವರ ಚಿಂತನೆಯ ಭಾಗವೇ ಆಗಿರುವುದನ್ನು ಎಲ್ಲರೂ ಬಲ್ಲರು. ನಾಲ್ಕೂ ತಂತಿಗಳು ಮಿಡಿಯುವುದು ಅವರಿಗೆ ಮುಖ್ಯ. ಅನುರಣನ ಅವರಿಗೆ ಮುಖ್ಯ. ನಾಕೆನ್ನುವ ಪರಿಕಲ್ಪನೆಗೂ ಸಖೀ ತತ್ವಕ್ಕೂ ಬಹಳ ಹತ್ತಿರ ಇದೆ! 'ಕಲ್ಪವೃಕ್ಷ ಬೃಂದಾವನಗಳಲಿ'ಯೂ ಕೇಂದ್ರ ಪಾತ್ರ ಸಖಿಯೇ ಆಗಿದ್ದಾಳೆ. ಗಂಡು-ಹೆಣ್ಣು, ನಾಲ್ಕು ಕಣ್ಣುಗಳಲ್ಲಿಯೂ ತಮ್ಮನ್ನು ತಾವು ನೋಡಿಕೊಂಡ ಅನುಭವದಿಂದ ತಿಳಿದು ಬಂದುದೇನೆಂದರೆ. ಹೆಣ್ಣು-ಗಂಡು ಹೊಂದಿರುವುದು ಒಂದೇ ಬಟ್ಟೆ ಎಂಬ ಅರಿವು. 'ಗಂಡಸು ಹೆಂಗಸಿಗೆ' ಕವಿತೆಯ ಕೊನೆಯ ಸಾಲುಗಳಿವು:

ನನ್ನ ನಿನ್ನಯ ಮನದ ಜೊನ್ನ ಮಗ್ಗದ ಮೇಲೆ
ನಿನ್ನ ಮೆತ್ತನ್ನೆದೆಯ ಕಸೆಗೆ ಕಸೆಯನುಗೊಳಿಸಿ
ನನ್ನಿ ನೇಕಾರಿತಿಯು ಮುಗಿಯದಿಹ ಬಟ್ಟೆಯನ್ನನವರತ ನೇಯುತಿಹಳು

ಇದು ತೆಗೆದಿರಿಸಬಹುದಾದ, ಬೇಕಾದಾಗ ತೊಡಬಲ್ಲ ಬಟ್ಟೆಯಲ್ಲ-ಅಂತಃಕರಣದಲ್ಲಿ ನೇದ, ನೇಯುತ್ತಲೇ ಇರುವ ಬಟ್ಟೆ. ಬಾಳಬಟ್ಟೆ! ಇದು ಬಾಳನ್ನು ಒಳಗಿನಿಂದಲೇ ಅನುಭವಿಸಿ ಪಡೆದ ಅರಿವು. ಬಾಳಿಗೆ ಶರಣಾಗಿ ಪಡೆದ ಅರಿವು. ಬಾಳೇ ನೀಡಿದ ಅರಿವು. ಆದರೆ ಬಾಳಿಗೆ ಶರಣಾಗುವುದರ ಹೊರ ರೂಪವೆಂದರೆ ಗಂಡು-ಹೆಣ್ಣನ್ನು, 'ಶರಣು ಬಂದೆನು ಶರಣ್ಯಳೆ, ಹೆಣ್ಣೆ ಸೃಷ್ಟಿಯೇ ಸಲಹುವೆ ಧರಿತ್ರಿಯಾಗಿ' ಇದು ಆರ್ತತೆಯಿಂದ ಕೇಳಿಕೊಳ್ಳುವುದೇ ಕವನದಲ್ಲಿ ವ್ಯಕ್ತವಾಗಿದೆ. ಈ ಆರ್ತತೆ ಎಂದರೆ ಬಾಳ ಬಟ್ಟೆಯನ್ನು ತಾವೂ ನೇಯುತ್ತಿರುವ ಅನುಭವವೂ ಆಗಿದೆ. ಇಬ್ಬರೂ ಹೊದ್ದಿರುವುದು ಒಂದೇ ಬಟ್ಟೆಯಾಗಿರುವುದರಿಂದ ಯಾರು ಯಾರ ಬಟ್ಟೆಯನ್ನು ಕಸಿಯುವ ಯತ್ನ ಮಾಡಿದರೂ ಅದು ತಮ್ಮನ್ನೇ ತಾವು ಬತ್ತಲೆ ಮಾಡಿಕೊಂಡಂತೆ ಆಗುವುದು. ಇದು ನಿಜವಾದರೂ, ಚರಿತ್ರೆಯಲ್ಲಿ ನೋಡಿದರೆ ಗಂಡಸು ಹೆಂಗಸಿನ ಬಟ್ಟೆಯನ್ನು ಕಸಿಯುತ್ತಲೆಯೇ ಇದ್ದಾನೆ. ಆ ಮೂಲಕ ತಾನು ಬತ್ತಲೆಯಾಗುತ್ತಲೇ ಇದ್ದಾನೆ. ಕೃಷ್ಣನೇನೋ ದ್ರೌಪದಿಗೆ ಅಕ್ಷಯಾಂಬರವನ್ನು ಕೃಪೆ ಮಾಡಿರಬಹುದು. ಆದರೇನು? ಸೀರೆಯನ್ನು ಸೆಳೆಯುವ ಯತ್ನವೂ ಅಕ್ಷಯವಾಗಿ ನಡೆಯುತ್ತಲೇ ಇದೆ! ದುಷ್ಟರಿಗೂ ದೈವಕೃಪೆ ಇರದೆ! ಕವಿತೆಯೊಳಗೆ ಈ ಅಂಶ ಬಂದಿಲ್ಲ. ಅದು ಬೇರೆ ಮಾತು.

ಬೇಂದ್ರೆ 'ಸಖೀಗೀತ' ಎಂದರು. ಹಾಡಿದರು. ಸಖ-ಸಖಿ ಎಂಬ ಭಾವ ಸಂಪ್ರದಾಯಕ್ಕಿಂತ ತುಸು ಬೇರೆಯಾದದ್ದು. ಆಧುನಿಕವಾದದ್ದು. ಪ್ರಾಚೀನದಲ್ಲಿ ಈ ಬೌದ್ಧಿಕ ಸಾಹಚರ್ಯದ ಕಲ್ಪನೆ ಇತ್ತು. ಮೈತ್ರೇಯಿ ಯಾಜ್ಞವಲ್ಕ್ಯರ ಸಂವಾದಗಳಲ್ಲಿ ಇದು ವ್ಯಕ್ತವಾಗಿದೆ ಮಧ್ಯಯುಗದಲ್ಲಿ ಈ ಬೌದ್ಧಿಕ ಸಾಹಚರ್ಯ ಮರೆಗೆ ಸರಿಯಿತು. ಆಧುನಿಕ ಯುಗದಲ್ಲಿ ಮತ್ತೆ ಇದರ ಹೊಳಹು ಸಹಜವಾಗಿ ಮಿಂಚಿತು. ಹಾಗೆ ನೋಡಿದರೆ ಬೇಂದ್ರೆಯವರ 'ಸಖೀಗೀತ'ದಲ್ಲಿ ಬೌದ್ಧಿಕ ಸಾಹಚರ್ಯಕ್ಕಿಂತ ಬೇರೆಯೇ ಆದ ಒಂದು ಚಿತ್ರಣ ಕಾಣಿಸುತ್ತದೆ. ಈ ಸಾಲುಗಳನ್ನು ಗಮನಿಸಿ:

ನಿಮ್ಮ ಮಾತೇ ಬೇರೆ ಮನ ಬೇರೆ ಜನ ಬೇರೆ
ರಸ ರುಚಿ ಬೇರೆ ಜೀವನ ಬೇರೆಯೇ

ನಿಮಗೆಮ್ಮ ಸಹವಾಸ ವನವಾಸದಂತೆಯೇ
ನಮ್ಮ ಹುಚ್ಚರ ಮಾತು ಹುಡುಗಾಟಿಕೆ .
ಗೆಳೆಯರ ಕೂಡಾಡಿ ಬಂದಾಗ ನಾ ನಿಮ್ಮ
ಮುಖದಲುಕ್ಕುವ ಗೆಲವ ಕಂಡಿಲ್ಲವೇ
ಮನೆ ಬೆಳಕು ಮುಂದಿರೆ ಆ ಕಣ್ಣು ಕುಂದಿರೆ
ನಾನೊಳಗೆ ನೊಂದಿರೆ ನೀವರಿಯಿರೆ.
ಗಂಗೆಯ ಕಷ್ಟವು ಗೌರಿಗೆ ತಿಳಿಯದು
ಹೆಂಗಸಿನ ಕಷ್ಟವು ಗಂಡಸಿಗೆ
ಎಂದಿಗೂ ತಿಳಿಯದು. ಏತಕೆ ತಿಳಿಯೋದು?
ದುಃಖವು ನಮ್ಮದು ನಮಗೆ ಇದೆ .
ಎಂದು ನಿಟ್ಟುಸಿರಿಗೆ ಮಿಡಿದ ಕಂಬನಿ ಬಂದು
ಈ ಗಲ್ಲ ಸೋಂಕಲು ನಾ ನಡುಗಿದೆ.
ತಂಪು ತಣ್ಣಿಸುತಿರಲಿ ಕಂಪು ಕಮ್ಮಯಿಸಲಿ
ಬಾಳದ ಬೇರಂತೆ ಬೇಸಿಗೆಗು
ನಿಮ್ಮ ಜೀವನದಲ್ಲಿ ಮಂಗಲವಾಗಲಿ
ಎಂದೆಂದು ಕೊನೆಗೊಮ್ಮೆ ನೀನೆನ್ನಲು.
ನನ್ನ ತಾಯಿಯ ನೆನೆದು ನಾ ಸುಮ್ಮನಾದೆನು.
ಒಳಗೊಂದು ಹೊರಗೊಂದು ಜೀವಿಸಿದೆ
ನನಗೂ ನಿನಗೂ ಅಂಟಿದ ನಂಟಿನ
ಕೊನೆ ಬಲ್ಲವರಾರು ಕಾಮಾಕ್ಷಿಯೇ.

ಗಂಡು-ಹೆಣ್ಣುಗಳ ಇಜ್ಜೋಡಿನ ಹೃದಯದ್ರಾವಕವಾದ ಚಿತ್ರಣವಿದು. ಇಲ್ಲಿ ತಪ್ಪೊಪ್ಪಿಗೆ ಇದೆ. ಈ ಹಿಂದೆಯೇ ಶರಣ್ಯಳು ಎಂದು ಕರೆದ ಮಾತಿಗೆ, ಈಗ ತಪ್ಪೊಪ್ಪಿಗೆಯ ಮೂಲಕ ಅರ್ಥಪೂರ್ಣತೆ ಬಂತು. ಮಕ್ಕಳಿಗೆ ತಾಯಿ ತಮ್ಮ ತಪ್ಪನ್ನು ಒಪ್ಪಿಸುವ, ತೋಡಿಕೊಳ್ಳುವ ನೆಲೆಯಾಗಿದ್ದಾಳೆ. ಈಗ ಸಖಿ ತಾಯಿಯ ನೆಲೆಗೆ ಏರಿದಳು. ಗಂಡು ಮಾಡಿದ ತಪ್ಪೇನು? ಒಳಗೊಂದು ಹೊರಗೊಂದು ಜೀವಿಸಿದ್ದುದು. ಹಾಗೆಂದರೇನು? ಹೊರಜಗತ್ತನ್ನು ಮುಖ್ಯವೆಂದು ಬಗೆದು, ಮನೆಯೊಳಗನ್ನು ನಿರ್ಲಕ್ಷಿಸಿದುದು. ಈ ನಿರ್ಲಕ್ಷಕ್ಕೆ ನಾನಾ ರೂಪಗಳಿವೆ. ಮುಖ್ಯವಾಗಿ ಮಡದಿಯನ್ನು ಅರ್ಥಮಾಡಿಕೊಳ್ಳಲು ಯತ್ನಿಸದೆ ಇದ್ದುದು. ಆಕೆಯನ್ನು ತನಗಿಂತ ಕೀಳೆಂದು ಬಗೆದುದು. ಈಗ ತಿಳಿದಿದೆ, ಅನುಭವದ ಕಾವಿನಿಂದ ಆಡಿದ ಆಕೆಯ ಮಾತು ತನ್ನನ್ನು ನಡುಗಿಸಬಲ್ಲುದುದೆಂದು. 'ನಾ ನಡುಗಿದೆ'. ವಿಚಿತ್ರವೆಂದರೆ – ಲೋಕವನ್ನು ನಡುಗಿಸಬಲ್ಲ ಮಾತಿಗಾಗಿ ಕವಿ ಹುಡುಕಾಡುತ್ತಿದ್ದ.. ಆಡುಮಾತುಗಳನ್ನು articulate ಮಾಡುತ್ತಾ ಮಾತಿಗೆ ಮೊನಚನ್ನು ನೀಡಬಲ್ಲ ಬಗೆಬಗೆಗಳನ್ನು ಹುಡುಕುತ್ತಿದ್ದ. ಅದು ಕವಿಯ ಕರ್ಮವೇ ಆಗಿತ್ತು. ಈಗ ಅನುಭವಕ್ಕೆ ಬಂತು. inarticulate ಆದ ಮಾತುಗಳೂ ನಡುಗಿಸಬಲ್ಲವೆಂದು. ಆಳಕ್ಕೆ ಹೋಗಬಲ್ಲವೆಂದು. ತಪ್ಪುಗಾರನಿಗೆ ತಪ್ಪೊಪ್ಪಿಗೆಗೆ ಈಗ ಮಾತುಗಳೇ ಸಿಗಲಿಲ್ಲ! 'ನಾ ಸುಮ್ಮನಾದೆನು'

ಈಗ ಪಾತ್ರಗಳು ಅದಲು ಬದಲಾದಂತೆ, ಗಂಡು ಹೆಣ್ಣಾದಂತೆ. ಹೆಣ್ಣು ಗಂಡಾದಂತೆ. ಸಖ ಸಖಿಯಾದಂತೆ. ಸಖಿ ಸಖನಾದಂತೆ. ಇದು ಬೌದ್ಧಿಕ ಸಾಹಚರ್ಯವೂ ಸೇರಿ ಎಲ್ಲ ಬಗೆಯ ಸಾಹಚರ್ಯಕ್ಕಿಂತಲೂ ಹೆಚ್ಚಿನ ಅವಸ್ಥೆಯಾಗಿದೆ. articulate ಆದ ಭಾಷೆಯ ಗುರಿ inarticulate ಆದ ಭಾಷೆಯ ಮಹತ್ವವನ್ನು ತಿಳಿಯುವುದೆ ಆಗಿದೆ. ಇನ್ನೊಂದು ರೀತಿಯಲ್ಲಿ ಇದನ್ನು ಹೇಳುವುದಾದರೆ ಲೋಕವನ್ನು ಹೆಣ್ಣು-ಗಂಡೆಂದು ಎರಡಾಗಿ ನೋಡಿದರೆ ಹೆಣ್ಣನ್ನು ತಿಳಿಯುವುದೇ ಗಂಡಿನ, ಗಂಡನ್ನು ತಿಳಿಯುವುದೇ ಹೆಣ್ಣಿನ ಸಾರ್ಥಕತೆ ಯಾಗಿ ಕಂಡುಬರುತ್ತದೆ. ಇದಕ್ಕಿಂತ ಹೆಚ್ಚಿನ ಉದ್ದೇಶವೇ ಬದುಕಿಗೆ ಇಲ್ಲವೇನೋ ಎನ್ನಿಸುತ್ತದೆ. ನಮ್ಮ ಕಾವ್ಯ-ಸಾಹಿತ್ಯಗಳಲ್ಲೆಲ್ಲಾ ಈ ಉದ್ದೇಶ ಗಾಢವಾಗಿಯೇ ಕಂಡುಬರುತ್ತದೆ. ಪರಸ್ಪರರನ್ನು ಅರಿಯುವ ಈ ಪ್ರಕ್ರಿಯೆಯಲ್ಲಿ, ಪ್ರಕೃತಿ ಗಂಡಿಗಿಂತ ಹೆಚ್ಚು ಸ್ತ್ರೀ ಪಕ್ಷಪಾತಿಯಾಗಿದೆ. ಅಂದರೆ ಅಂತಃಕರಣದಲ್ಲಿ ಗಂಡು ಹೆಣ್ಣಿನಂತೆ ಆಗುವುದು ಕಷ್ಟ. ಇದು ದೊಡ್ಡ ಸಾಧನೆಯನ್ನು ಅಪೇಕ್ಷಿಸುತ್ತದೆ. ಮಹಾತ್ಮ ಗಾಂಧಿಯವರ ಬದುಕಿನುದ್ದಕ್ಕೆ ಈ ಸಾಧನೆ ಅವರ ಕೊನೆಗಾಲದ ತನಕವೂ ನಡೆದು ಬಂದಿತ್ತು. ಅದನ್ನು ಮತ್ತೆ ನೋಡೋಣ.

ಹೆಣ್ಣಿಗೆ, ಇದು– ಗಂಡನ್ನು ಅರಿಯುವುದು– ಸರಳ ಸಂಗತಿಯಾಗಿದೆ. ಅದೇಕೆಂದರೆ ಹೆಣ್ಣಿಗೆ ಮಾತ್ರ ಎರಡು-ಬಾಲ್ಯ ಕಾಲಗಳು !. ಮೊದಲನೆಯದು. ತನ್ನದೇ ಬಾಲ್ಯ ಎರಡನೆಯದು ತನ್ನ ಮಕ್ಕಳ ಬಾಲ್ಯ! ಮಕ್ಕಳ ಬಾಲ್ಯ ಬೇರೆ, ಮಕ್ಕಳ ತಾಯಿಯ ಬಾಲ್ಯ ಬೇರೇನು? ತಾಯಿ ಇನ್ನೊಮ್ಮೆ ತನ್ನ ಬಾಲ್ಯವನ್ನು ಅನುಭವಿಸಿದಂತೆ ಇದು. ಅಥವಾ ತನ್ನ ಬಾಲ್ಯಕ್ಕಿಂತಲೂ ಹೆಚ್ಚು! ಏಕೆಂದರೆ ತನ್ನ ಮಕ್ಕಳ ಬಾಲ್ಯದಲ್ಲಿ ತನ್ನದೇ ಬಾಲ್ಯವನ್ನು ಪ್ರಜ್ಞಾಪೂರ್ವಕವಾಗಿ ಇನ್ನೊಮ್ಮೆ ಅನುಭವಿಸಿದಂತೆ! ತನ್ನದೇ ಬಾಲ್ಯದಲ್ಲಿ, ಅದು ಬಾಲ್ಯವೆಂಬ ಪ್ರಜ್ಞೆ ಇರಲಿಲ್ಲ. ಬಾಲ್ಯವಿತ್ತು. ಪ್ರಜ್ಞೆ ಇರಲಿಲ್ಲ. ಈಗ ಪ್ರಜ್ಞೆ ಇದೆ. ಬಾಲ್ಯ ಕಳೆದು ಹೋಗಿದೆ ಎನ್ನುವಂತಿಲ್ಲ. ಮಕ್ಕಳ ಬಾಲ್ಯ-ತನ್ನದೇ ಬಾಲ್ಯವೆಂಬಂತೆ– ಅಂಗಳದಲ್ಲಿ ಆಡುತ್ತಿದೆ! ಹೀಗೆ ತಾನೇ ಹೆತ್ತ ಇನ್ನೊಂದು ಜೀವ ತೊಟ್ಟಿಲಲ್ಲಿ ಇರಲಾಗಿ, ಅದರಲ್ಲಿ ತನ್ನನ್ನು ಕಾಣಬಲ್ಲ ತಾಯಿಗೆ, ತಾಯಿಯಂಥ ಹೆಣ್ಣಿಗೆ-ಗಂಡನ್ನು ಅರಿಯುವುದೆಂದರೆ ಅದೊಂದು ಮೀರಿದ ಸಮಸ್ಯೆಯಾಗಲಾರದು.

ಪುರಾಣಗಳಲ್ಲಿ ಒಂದು ಕಥೆ ಇದೆ. ಹೆಚ್ಚಿನವರು ಕೇಳಿರುವ ಕಥೆಯೇ. ಅತ್ರಿ ಮುನಿಯ ಮಡದಿ ಅನಸೂಯೆಯನ್ನು ಪರೀಕ್ಷಿಸಲೆಂದು ಬ್ರಹ್ಮ-ವಿಷ್ಣು-ಶಿವನೆಂಬ ಮಹಾ ತ್ರಿಮೂರ್ತಿಗಳೇ ಅವಳ ಆಶ್ರಮಕ್ಕೆ ಬಂದರಂತೆ. ಅತ್ರಿ ಮುನಿ ಇಲ್ಲದಿರುವಾಗಲೇ ಅವರು ಬಂದಿದ್ದರು! ಅತಿಥಿಗಳು! ತಾವು ಉಣ್ಣಬೇಕಾದರೆ– ಅನಸೂಯೆ ವಿವಸ್ತ್ರಳಾಗಿ ತಮಗೆ ಬಡಿಸಬೇಕು ಎಂಬ ಷರತ್ತನ್ನು ಇಟ್ಟರಂತೆ. ಸ್ವಲ್ಪ ಯೋಚಿಸಿ, ಅನುಸೂಯ ಆಗಲೆಂದಳು. ತನ್ನ ತಪೋಬಲದಿಂದ ತ್ರಿಮೂರ್ತಿಗಳನ್ನು ಸದ್ಯೋಜಾತ ಶಿಶುಗಳನ್ನಾಗಿ ಬದಲಾಯಿಸಿ ಬಿಟ್ಟಳಂತೆ. ಆಮೇಲೆ ಬಟ್ಟೆ ಕಳಚಿ ಈ ತ್ರಿವಳಿ ಗಳಿಗೆ ಎದೆ ಹಾಲುಣಿಸಿ, ತೊಟ್ಟಿಲಲ್ಲಿ ಮಲಗಿಸಿ, ಜೋಗುಳ ಹಾಡಿ ನಿದ್ದೆ ಮಾಡಿಸಿದಳಂತೆ.

ಅಲ್ಲಿಗೆ ಕಥೆ ಮುಗೀತು. ಪರೀಕ್ಷಿಸಲು ಬಂದವರದೇ ಪರೀಕ್ಷೆಯಾಗಿ ಹೋಯಿತು. ತಾವು ಶಿಶುವಾಗಬಲ್ಲೆವೆಂದು ದೇವರಿಗೆ ಮರೆತುಹೋಗಿತ್ತು. ಹೆಣ್ಣಿಗೆ ಮರೆತಿರಲಿಲ್ಲ! ಕೆಲವೊಮ್ಮೆ ಅನ್ನಿಸುತ್ತದೆ, ಹೆಣ್ಣಿನ ಈ ಶಕ್ತಿಯನ್ನೇ, ಒಂದು ದೌರ್ಬಲ್ಯ ಎಂಬಂತೆ ಗಂಡು ಅವಳನ್ನು ನಡೆಯಿಸಿಕೊಂಡನೆಂದು. ಅನ್ನಿಸುವುದೇನು ಮಣ್ಣು? ಅದೇ ನಿಜ. ಹೆಣ್ಣಿಗೆ ಇಷ್ಟೊಂದು ಕಟ್ಟುಪಾಡುಗಳು? ಸಂಕೋಲೆಗಳು? ವಿಧಿ ನಿಷೇಧಗಳು! ಕೆಲವೊಮ್ಮೆ ಗಂಡಿಗೂ ಇರುವ, ಹಲವೊಮ್ಮೆ ಗಂಡಿಗಿಲ್ಲದೆ ಹೆಣ್ಣಿಗೆ ಮಾತ್ರ ಇರುವ ಸಾಮಾಜಿಕ ಬಿಗಿಗಳು! ತನ್ನ ಗುಟ್ಟನ್ನು ತಿಳಿದವರ ಬಗ್ಗೆ ನಮ್ಮಲ್ಲಿ ವಿಲಕ್ಷಣವಾದ ಅಂಜಿಕೆ ಯೊಂದು ಇರುವಂತೆ ಹೆಣ್ಣಿನ ಬಗ್ಗೆ ಗಂಡಿಗೂ ಇರುವಂತಿದೆ. ಇವೆಲ್ಲ ಎಲ್ಲರಿಗೂ ತಿಳಿದೇ ಇರುವ ವಿಷಯ. ಹೆಚ್ಚುಲಂಬಿಸಬೇಕಿಲ್ಲ . ಮುಖ್ಯವಾದ ಮಾತೆಂದರೆ, ಹೆಣ್ಣು ಎನ್ನುವುದೇ ಅರಿಯುವ ದಾರಿ ಎಂಬುದು.

ಈಚೆಗೆ ನಾನೊಂದು ಅಪೂರ್ವವಾದ ಲೇಖನವನ್ನು ಓದಿದೆ. 'ಅರಿವನರಿವ ಹಾದಿಗೆ ಹೆಣ್ಣೆಂಬ ಹೆಸರಿಹುದೇ ಅಯ್ಯಾ..' ಎಂಬುದು ಲೇಖನದ ಹೆಸರು .ಇದನ್ನು ಬರೆದವರು ನ್ಯೂಜೆರ್ಸಿಯಲ್ಲಿರುವ ಮೀರಾ ಪಿ.ಆರ್. ತನ್ನ ಮುಖ್ಯ ಪ್ರತಿಪಾದನೆಯನ್ನು ಅಕ್ಕನ ಒಂದು ವಚನದ ಮೂಲಕ ಮೀರಾ ತೊಡಗುತ್ತಾರೆ. .ಆ ವಚನ ಹೀಗಿದೆ:

ಹೆಣ್ಣು ಹೆಣ್ಣಾದೆಡೆ ಗಂಡಿನ ಸೂತಕ
ಗಂಡು ಗಂಡಾದೆಡೆ ಹೆಣ್ಣಿನ ಸೂತಕ
ಮನದ ಸೂತಕ ಹಿಂಗಿದಡೆ
ತನುವಿನ ಸೂತಕಕ್ಕೆ ತೆರಹುಂಟೆ ಅಯ್ಯ
ಮೊದಲಿಲ್ಲದ ಸೂತಕಕ್ಕೆ ಮರುಳಾಯ್ತು ಜಗವೆಲ್ಲ
ಎನ್ನದೇವ ಚೆನ್ನಮಲ್ಲಿಕಾರ್ಜುನನೆಂಬ ಗರುವಂಗೆ
ಜಗವೆಲ್ಲ ಹೆಣ್ಣುನೋಡಾ ಅಯ್ಯಾ

ಈ ವಚನವನ್ನು ಮೀರಾ ಹೀಗೆ ವಿವರಿಸುತ್ತಾರೆ. 'ಮನದ ಸೂತಕ ಇಲ್ಲವಾದಲ್ಲಿ ತನುವಿನ ಸೂತಕಕ್ಕೆ ಅವಕಾಶವೆಲ್ಲಿದೆ ಎಂದು ಕೇಳುತ್ತಲೇ ಅಕ್ಕ ಮಹಾದೇವಿ ಇಡೀ ಜಗವನ್ನು ಹೆಣ್ಣಾಗಿಸಿಯೂ, ಚೆನ್ನಮಲ್ಲಿಕಾಜುನನ್ನು ಗಂಡಾಗಿಸಿಯೂ ನೋಡುವ ಚೋದ್ಯ ಇಲ್ಲಿದೆ. ದೈವವೆಂಬ ವಿಶ್ವ ಶಕ್ತಿ ಗಂಡಾಗಿ, ಆ ಗಂಡಿಗೆ ತನು ಮನದ ಸೂತಕ ಕಳೆದುಕೊಂಡ ಈ ಜಗವೆಲ್ಲ ಹೆಣ್ಣಾಗಿ ಮತ್ತೆ ಈ ಗಂಡು ಹೆಣ್ಣುಗಳಿಬ್ಬರೂ ಒಂದಾಗುವುದು ಅಂದರೆ ಏನಿರಬಹುದು? ನನಗನ್ನಿಸುವಂತೆ, ತಾನು ಗಂಡು ಅಥವಾ ಹೆಣ್ಣು ಎನ್ನುವ ಪ್ರಕೃತಿ ಒದಗಿಸಿಕೊಟ್ಟ ದೈಹಿಕಮಿತಿಯ ಮನೋಭಾವದಿಂದ ಕಳಚಿಕೊಳ್ಳಲು ಸಾಧ್ಯವಾಗುವುದು "ಹೆಣ್ಣು" ಎನ್ನುವ ಮನ:ಸ್ಥಿತಿಯನ್ನು ಮುಟ್ಟಿದಾಗ ಮಾತ್ರ ಎಂದಿರಬೇಕು. ಆಗ ಮಾತ್ರ ಚೆನ್ನಮಲ್ಲಿಕಾರ್ಜುನನನ್ನು ಮುಟ್ಟುವುದು ಸಾಧ್ಯ ಎಂದಿರಬೇಕು– ಹೆಣ್ಣು ಎನ್ನುವುದು ಕೇವಲ ದೇಹಕ್ಕೆ ಸಂಬಂಧಿಸಿದ್ದಲ್ಲ, ಅದೊಂದು ಮನಃಸ್ಥಿತಿ ಮತ್ತು ಹೆಣ್ಣು ದೇಹದಲ್ಲಿ ಹುಟ್ಟಿದ ಮಾತ್ರಕ್ಕೆ ಹೆಣ್ಣು ಮನ:ಸ್ಥಿತಿ ಇರುವುದು ಅಥವಾ ಗಂಡು ದೇಹದಲ್ಲಿ ಹುಟ್ಟಿದ ಮಾತ್ರಕ್ಕೆ ಹೆಣ್ಣು ಮನ:ಸ್ಥಿತಿ ಇಲ್ಲದಿರುವುದು– ಇವೆರಡೂ ಸುಳ್ಳು,

ದೇಹಭಾವವನ್ನು ಮೀರಿದ ಹೆಣ್ಣು-ಗಂಡುಗಳಿಗೆ ಹೀಗೆ ನಿಜದಲ್ಲಿ 'ಹೆಣ್ಣಾಗಿ' ದೈವವನ್ನು ಹೊಂದುವ ಸಾಧ್ಯತೆ ಇದೆ ಎಂದಾಯಿತಲ್ಲವೆ? ದೈವವನ್ನು ತಲುಪುವ, ಹೊಂದುವ ಮನೋಭಾವ ಹೆಣ್ಣಾಗಿಯೇ ಯಾಕೆ ಇರಬೇಕು ಎನ್ನುವ ಪ್ರಶ್ನೆಗೆ ಉತ್ತರ ನನಗೆ ಸಿಕ್ಕಿದ್ದು ಈ ಮಾದರಿಯ ಕಾವ್ಯಗಳಲ್ಲಿ ಮತ್ತೆ ಮತ್ತೆ ಎದ್ದು ಕಾಣಿಸುವ ಲೈಂಗಿಕ ಪ್ರತಿಮೆಗಳಲ್ಲಿ'


ಈ ಹಂತದಲ್ಲಿ ಉರಿಲಿಂಗದೇವನ ವಚನವೊಂದನ್ನು ಮೀರಾ ಉದಾಹರಿಸುತ್ತಾರೆ, ಆ ವಚನ ಹೀಗಿದೆ:

ನಲ್ಲನ ಕೂಡುವ ಸುಖಭೋಗದ್ರವ್ಯವನೆಲ್ಲಿಂದಾ ತಪ್ಪೆನು
ಹೇಳಾ ಕೆಳದಿ
ನಲ್ಲನ ಬೇಡಲು ನಾಚಿಕೆ ಎನಗೆ
ಮತ್ತೆಲ್ಲಿಯು ನಿಲ್ಲೆನು
ಕೂಡುವ ಶಕ್ತಿಯ ತಾನರಿದಿಹನು
ಕೇಳಾ ಕೆಳದಿ
ಹೆಣ್ಣು ಹೆಣ್ಣು ಕೂಡುವ ಸುಖವ ಮಣ್ಣಿನಲ್ಲಿ ನೆರಹುವೆನು
ಉರಿಲಿಂಗ ದೇವನ ಕೂಡುವೆನು

ಇದಕ್ಕೆ ಅವರ ವಿವರಣೆ ಹೀಗೆ: 'ಉರಿಲಿಂಗದೇವನ ಈ ವಚನದಲ್ಲಿ – ಈ ಕೂಡುವ ಶಕ್ತಿಯ ತಾನರಿದಿಹನು-ಎಂಬ ಮಾತನ್ನು ಒಮ್ಮೆ ಗಮನಿಸಿ. ಉರಿಲಿಂಗದೇವನೆಂಬ ದೈವವನ್ನು ಸೇರಲು ಗಂಡು ದೇಹದ ಈ ಭಕ್ತ ಕವಿಗೆ ಹೆಣ್ಣಾಗುವುದೊಂದೇ ಮಾರ್ಗ. ಏಕೆಂದರೆ ದೈವಕ್ಕೆ ಹೆಣ್ಣಿನ-ಕೂಡುವ ಶಕ್ತಿ-ಅಪಾರವಾದ್ದು ಎಂಬ ಅರಿವಿದೆ ಮತ್ತು ಇದರ ಜೊತೆಗೇ ಮರ್ತ್ಯದ ಗಂಡಿನ -ಈ ಕೂಡುವ ಶಕ್ತಿಗೆ -ಮಿತಿ ಇದೆ ಎಂಬ ಅರಿವೂ ಇದೆ'

ಈ ಅಂಶವನ್ನು-ಹೆಣ್ಣಿನ ಕೂಡುವ ಶಕ್ತಿ ಅಪಾರವಾದ್ದು-ಎಂಬಂಶವನ್ನು ಇನ್ನಷ್ಟು ವಿವರಿಸಬೇಕೆಂದು ಮೀರಾ ಅವರಿಗೆ ಅನ್ನಿಸಿದೆ. ಅವರು ಬರೆಯುತ್ತಾರೆ. 'ಮೈ ಮನಸ್ಸುಗಳೆರಡೂ ಒಂದಾಗಿ ನಡೆಯುವ ಲೈಂಗಿಕ ಕ್ರಿಯೆಯಲ್ಲಿ ಅತಿ ಮುಖ್ಯವಾದ ಮುನ್ನಲಿವಿನ ಅವಧಿಯಲ್ಲಿ ಹೆಚ್ಚು ಹೊತ್ತು ನಿಲ್ಲಬಲ್ಲ, ಒಂದೇ ಮಿಲನದಲ್ಲಿ ಹಲವುಬಾರಿ ಸ್ಖಲಿಸಬಲ್ಲ, ರತಿಯ ತುರೀಯಾವಸ್ಥೆಯಲ್ಲಿ ಹೆಚ್ಚುಹೊತ್ತು ಉಳಿಯಬಲ್ಲ, ಹಾಗೆ ತುದಿಮುಟ್ಟಿ ಮರಳಿದನಂತರವೂ ಇನ್ನೊಮ್ಮೆ ಕ್ರೀಡಿಸಲು ಮರುಕ್ಷಣವೇ ಅನುವಾಗಬಲ್ಲ ದೈಹಿಕ ಸಾಮರ್ಥ್ಯ ಹೆಣ್ಣು ದೇಹದ್ದು ಮಾತ್ರ. ಈ ವಿಷಯದಲ್ಲಿ ಪ್ರಕೃತಿಯು ಸ್ತ್ರೀ ಪಕ್ಷಪಾತಿ. ಎಷ್ಟು ಪಕ್ಷಪಾತಿ ಎಂದರೆ ಪ್ರಕೃತಿಯು ಸ್ತ್ರೀ ದೇಹದಲ್ಲಿ ಕೇವಲ ಲೈಂಗಿಕ ತೃಪ್ತಿಗಷ್ಟೇ ಮೀಸಲಿರುವ ಭಗಾಂಕುರವೆಂಬ ಅದ್ಭುತವನ್ನು ನಿರ್ಮಿಸಿ ಕೊಟ್ಟಿದೆ. ಗಂಡು ದೇಹಕ್ಕಾದರೆ ಸಂತಾನೋತ್ಪತ್ತಿ ಸಾಮರ್ಥ್ಯವು ಕ್ಷೀಣವಾಗುತ್ತಿದ್ದಂತೆ ಲೈಂಗಿಕ ಸಾಮಥ್ಯವೂ ಕ್ಷೀಣಿಸುವುದು. ಆದರೆ ಹೆಣ್ಣಿಗೆ ಹಾಗಲ್ಲ. ಆಧುನಿಕ ಜೀವ ವಿಜ್ಞಾನದ ತಿಳಿವಿನಿಂದ ಈ ಕಾಲಕ್ಕೆ ತಿಳಿದುಬಂದಿರುವ ಹೆಣ್ಣು ದೇಹದ ಈ ಸಾಧ್ಯತೆಗಳೆಲ್ಲ ಎಲ್ಲಾ ಕಾಲದಲ್ಲಿಯೂ ಅನುಭವದ ಮೂಲಕವೇ ತೀವ್ರ ಕುತೂಹಲಿಗಳಾದ ಗಂಡು-ಹೆಣ್ಣುಗಳಿಗೆ ತಿಳಿದಿದ್ದಿರಲೇಬೇಕು. ದೈಹಿಕವಾಗಿ ಹೆಚ್ಚು ಬಲಶಾಲಿಯಾದ ಗಂಡಿಗೆ ಹೆಣ್ಣಿನ ಉಳಿದ ಹಲವು ಸಾಮರ್ಥ್ಯಗಳ ಜತೆಗೇ ಅವಳ ಈ ಲೈಂಗಿಕ ಶಕ್ತಿಯು ತನ್ನ ಪುರುಷ ಅಹಮ್ಮಿಗೆ ಸವಾಲೆನಿಸಿದ ಕಾರಣಕ್ಕೆ ಹೆಣ್ಣನ್ನು ಹತ್ತಿಕ್ಕುವ ವ್ಯವಸ್ಥೆಯೊಂದು ನಿರ್ಮಾಣಗೊಂಡು ಈ ವ್ಯವಸ್ಥೆಯಲ್ಲಿ ಗಂಡು-ಹೆಣ್ಣುಗಳೆರಡೂ ಸಿಲುಕಿ ನರಳಬೇಕಾಗಿದ್ದು ನಮಗೆಲ್ಲರಿಗೂ ತಿಳಿದಿರುವ ದುರಂತ'

ಸೃಷ್ಟಿಯ ಹಂಗಿಲ್ಲದೇ ಅನಂಗನಿಗೇ ಮೀಸಲಾದ ಅಂಗವೊಂದು ಸ್ತ್ರೀ ದೇಹದಲ್ಲಿರುವಂತೆ, ಸೃಷ್ಟಿಯನ್ನೇ ತಾಯ ಕಣ್ಣುಗಳಿಂದ ಕಾಣಬಲ್ಲ, ಮಿಡಿಯಬಲ್ಲ ಹೃದಯವೂ ಸ್ತ್ರೀಯಲ್ಲಿದೆ.! ಎಂಥ ಜೀವ-ಸಮೃದ್ಧಿ! ಲೊಕವೆಲ್ಲ ಹೆಣ್ಣು, ಚೆನ್ನಮಲ್ಲಿಕಾರ್ಜುನನೊಬ್ಬನೇ ಗಂಡು ಎಂದು ಅಕ್ಕ ಹೇಳುವಾಗ ಇದು ಕಾಮದ sublimation ಆಗಿ ಕೇಳಿಸುತ್ತದೆ! ಅಕ್ಕ ವಿರಕ್ತೆ! ವಿರಕ್ತೆ ಕಾಮವನ್ನು ಉದಾತ್ತೀಕರಿಸಬಲ್ಲಳು! ಇದಕ್ಕೆ ಜತೆಯಾಗಿ ಆದರೆ ತುಸು ಬೇರೆಯಾಗಿ ನಿಲ್ಲುವ ಬಸವಣ್ಣನವರ ಮಡದಿ ನೀಲಾಂಬಿಕೆಯ ವಚನವೊಂದಿದೆ. ಅದು ಹೀಗೆ: 'ಮಡದಿ ಎಂಬ ಶಬ್ದ ನಿಃಶಬ್ದವಾದಡೆ ನಾನೀಗ ನಿಜ ಸುಖಿ ಬಸವಾ' ಎನ್ನುತ್ತಾಳೆ. 'ಮಡದಿ ಎನಲಾಗದು ಬಸವಂಗೆ ಎನ್ನನು. ಪುರುಷನೆನಲಾಗದು ಬಸವನ ಎನಗೆ'. ಮತ್ತೇನು? 'ಉಭಯದ ಕುಳವ ಹರಿದು ಬಸವಂಗೆ ಶಿಶುವಾನಾದೆನು, ಬಸವನೆನ್ನ ಶಿಶುವಾದನು' ಎನ್ನುತ್ತಾಳೆ! ಇದು ತಾಯ್ತನದ sublimation. ಹೌದು. ತಾಯ್ತನಕ್ಕೂ sublimation. ಇದೆ. sublimate ಆಗದೆ ಇದ್ದರೆ



ಎಲ್ಲವೂ ಪ್ರಾಕೃತವಾಗಿಯೇ- ಎಷ್ಟು ಸಮೃದ್ಧವಾಗಿದ್ದರೂ-ಪ್ರಾಕೃತವಾಗಿಯೇ ಇರಬೇಕಾಗುತ್ತದೆ.'ಮನೋಧರ್ಮವು ಜೀವಂತವಾಗಿರುತ್ತದೆ.

ಮಹಾತ್ಮಾ ಗಾಂಧೀಜಿಯವರ ಬ್ರಹ್ಮಚರ್ಯದ ಪ್ರಯೋಗದ ಕುರಿತು ಕೆಲವು ಮಾತುಗಳೊಂದಿಗೆ ಈ ಬರಹವನ್ನು ಮುಗಿಸುತ್ತಿದ್ದೇನೆ. ೧೯೪೫ರಲ್ಲಿ, ೧೯೪೭ ರಲ್ಲಿ- ಹೀಗೆ ಎರಡುಸಲ-ಗಾಂಧೀಜಿ ಈ ಪ್ರಯೋಗವನ್ನು ನಡೆಸಿದರು. ೧೯೪೭ರ ಪ್ರಯೊಗ ಒಮ್ಮೆ ತಡೆದು, ಮೂರು ತಿಂಗಳ ಅನಂತರ ಮತ್ತೆ ಶುರುವಾಗಿ ಗಾಂಧೀಜಿಯವರ ಸಾವಿನ ತನಕವೂ ಮುಂದುವರೆಯಿತು. ಪ್ರಯೋಗವೆಂದರೆ, ತನ್ನ ಮನೋದೇಹವೆಂಬ ಸಮಷ್ಟಿ ಒಡಲಿನಲ್ಲಿ ಕಾಮಭಾವನೆಯ ಲವಲೇಶವೂ ಇಲ್ಲದಂತೆ ಪರಿಪೂರ್ಣ ಬ್ರಹ್ಮಚರ್ಯವನ್ನು ಪಾಲಿಸುತ್ತಿದ್ದೇನೆಯೆ ಎಂದು ಖಚಿತಪಡಿಸಿಕೊಳ್ಳುವ ಪ್ರಯೋಗವದು. ಈ ಪ್ರಯೋಗದ ಕುರಿತು ಪೂರ್ಣ ಅರಿವಿರುವ, ಸಹಾನುಭೂತಿಯೂ ಇರುವ ನಾಲ್ಕು ಹೆಂಗಸರು ಇದರಲ್ಲಿ ಪಾಲ್ಗೊಂಡಿದ್ದರು; ೧೯೪೫ ರಲ್ಲಿ. ಆದರೆ ಆಶ್ರಮವಾಸಿಗಳಲ್ಲಿ ಕೆಲವರು ಇದನ್ನು ವಿರೋಧಿಸಿದರೆಂದು ಗಾಂಧೀ ಇದನ್ನು ಮುಂದುವರೆಸಲಿಲ್ಲ. ೧೯೪೭ರಲ್ಲಿ ಪ್ರಯೋಗದಲ್ಲಿ ಪಾಲ್ಗೊಂಡವರು ಒಬ್ಬರೇ- ಅವರು ಮನು ಗಾಂಧಿ.

ಗಾಂಧೀಜಿ ಬಗ್ಗೆ 'Gandhi's religion' ಎಂಬ ಕೃತಿಯಲ್ಲಿ ಲೇಖಕ J.T.F. Jordans ಬರೆಯುತ್ತಾರೆ- 'He wanted to feel about women not as a male but as a woman and wanted to be accepted by them not as amale but as a sister or a mohèr. He saw now that situation of sleeping with a womanin the same bed was a supreme exiperiment in which the test of his chastity was indeed genuine.

ಗಾಂಧಿಗೆ ತನ್ನೊಳಗಿನ ಹೆಣ್ತನವನ್ನು ಸಾಕ್ಷಾತ್ಕರಿಸಿಕೊಳ್ಳುವ ಬಯಕೆ. ನಿಜ. ಯಾರೂ ಪೂರ್ತಿ ಗಂಡಸರಲ್ಲ. ಯಾರೂ ಪೂರ್ತಿ ಹೆಂಗಸರಲ್ಲ. ಆದುದರಿಂದಲೇ ಗಂಡಿಗೆ ಹೆಣ್ತನವನ್ನು ಪಡೆಯುವುದು ಸಾಧ್ಯ. ಹೆಂಗಸರು ತನ್ನನ್ನು ಹೆಣ್ಣೆಂದು ಸ್ವೀಕರಿಸಬೇಕೆನ್ನುವುದೇ ಗಾಂಧೀಜಿಯ ಇಚ್ಛೆ! ಲೋಕವೆಲ್ಲ ಹೆಣ್ಣು; ಚೆನ್ನನೊಬ್ಬನೇ ಗಂಡು ಎಂಬ ಅಕ್ಕನ ಮಾತು ನೆನಪಾಗುತ್ತದೆ. ಅಕ್ಕನ ಇನ್ನೊಂದು ಮಾತೂ ನೆನಪಾಗುತ್ತದೆ- ಅದೆಂದರೆ " ಹಾವಿನ ಹಲ್ಲ ಕಿತ್ತು ಹಾವನಾಡಿಸ ಬಲ್ಲಡೆ ಹಾವಿನ ಸಂಗವೇ ಲೇಸು ಕಂಡೆಯಾ " ಎಂಬ ಮಾತು. ಈ ಮಾತು ಕೂಡಾ ಗಾಂಧಿಯಂಥದೇ ಪ್ರಾಯೋಗಿಕ ಮನೋಧರ್ಮವನ್ನು, ಸಂಸಾರವು ಒಂದು ಪ್ರಯೋಗಶಾಲೆ ಎಂಬ ಚಿಂತನೆಯನ್ನು ಸೂಚಿಸುತ್ತದೆ. ಗಾಂಧಿಯೊಂದಿಗೆ ಪ್ರಯೋಗದಲ್ಲಿ ಪಾಲ್ಗೊಂಡ ಮನು ಒಂದು ಪುಸ್ತಕವನ್ನೇ ಬರೆದಿದ್ದಾರೆ. ಅದರ ಹೆಸರು " ಃಅಪು, ಮ್ಯ ಮೊಥೆರ್". ಇಂಥ ಗಾಂಧಿಯನ್ನು ನಾವು ರಾಷ್ಟ್ರಪಿತನೆಂದು ಕರೆಯುವುದು ಒಂದು ವಿಪರ್ಯಾಸವೇ ಸರಿ.



(ಪುತ್ತೂರಿನ ಲಕ್ಷ್ಮೀಶ ತೋಳ್ಪಾಡಿಯವರು ಕನ್ನಡದ ಬಹುಶ್ರುತ ವಿದ್ವಾಂಸರು ಮತ್ತು ಲೇಖಕರು)

ನವಿಲುಗರಿ


ದೇವಿ

ಕಡೆದು ಕಡೆದು ನೋಯಿಸಿದ

ಮನ ಬಂದಂತೆ ಮೀಯಿಸಿದ!
ಸೀರೆ ಉಡಿಸಿದ ಹಾರ ತೊಡಿಸಿದ
ಹೂವ ಮುಡಿಸಿದ...
ನತ್ತು...ಕಿವಿಯೋಲೆ...ಮುತ್ತಿನ ಸರ.
ತೋಳಬಂದಿ...ಡಾಬು...ಕಾಲ್ಗೆಜ್ಜೆ....
ಉಣಿಸಿದ... ಮಣಿಸಿದ...
ಕುಂಕುಮವಿರಿಸಿ ದೀಪ ಉರಿಸಿ...
ಮೆರೆಸಿದ.....

ಮಂದಿ ಬಾಯ್ಬಿಟ್ಟು ನೋಡಿದರು
ಮೈದುಂಬಿ ಹಾಡಿದರು...
ಕೈ ಮುಗಿದರು.. ಬಿದ್ದರು...ಎದ್ದರು
ತಿರುತಿರುಗಿ ನೋಡಿದರು...
ಬೇಡಿದರು ಕಣ್ಣಲ್ಲೇ
ಕೂಡಿದರು ಕಣ್ಣಲ್ಲೇ....

ಕೆಕ್ಕರಿಸಿ ನೋಡಿದ್ದು...
ಧಿಕ್ಕರಿಸಿ ಓಡಿದ್ದು...
ಅದೊಂದು ದೂಡ್ಡ ಕಥೆ!



ಅಗೋ ನಡುಬೀದೀಯಲ್ಲಿ
ಕೂದಲು ಕೆದರಿಕೊಂಡು
ಬತ್ತಲೆ ಉಟ್ಟುಕೊಂಡು
ಗೊಳಗೊಳಸಿ ನಗುತಿರುವೆ
ಬುಳುಬುಳು ಎಂದಳುತಿರುವೆ ...ಪ್ರಮಾಣಿಸುವೆ...

ಅದು ನಿಜವಾಗಿ ನಾನೇ...

ಏನೆಲ್ಲಾ ಹೇಳಬೇಕು....
ಹೇಳಲಾರೆ....
ಬಿಗಿಯುತ್ತಿದೆ ಕೊರಳು..!



–ಸವಿತಾ ನಾಗಭೂಷಣ

ಪುರಾವೆಗಳಿಲ್ಲದೇ...

ಆ ಮೀನು ನೋಡು

ಹೇಗೆ ಈಜುತ್ತಿದೆ
ಸಾಕ್ಷಿಗಳುಳಿಸದೇ!

ಕೊಂಡಿ ಬೆಸೆದಿದ್ದಕ್ಕೆ
ಮತ್ತೆ ಕಳಚಿದ್ದಕ್ಕೆ
ಹೆಜ್ಜೆಗಳ ಗುರುತಿಲ್ಲ

ಒಸರಿದ ಕಣ್ಣೀರೂ
ಈಜಿದ ನೀರಿನೊಂದಿಗೇ ಬೆರೆತು
ಅತ್ತದ್ದು ದಾಖಲಾಗುವುದೇ ಇಲ್ಲ



ಚಿತ್ರಗಳು : ರೂಪ ಹಾಸನ



ಅದರ ಹಾಡಿಗೆ
ಅದರ ಕನಸಿಗೆ ನೆನಪಿಗೆ
ಯಾವ ಪುರಾವೆಗಳೂ ಇಲ್ಲ

ಬದುಕಿದರೆ.....
ಬದುಕಬೇಕು ಹೀಗೆ
ಯಾವ ಪುರಾವೆಗಳೂ ಇಲ್ಲದೇ



ಸತ್ತರೆ ಸಾಯಬೇಕು
ಗುರುತುಗಳುಳಿಸದೇ
ಯಾರ ನೆನಪಿಗೂ ಬಾರದೇ
ಯಾರನ್ನೂ ಕನಸಿನಲೂ ಕಾಡದೇ.....

–ರೂಪ ಹಾಸನ

ಸಂವಾದ.

ಎರಡೂವರೆಗೆ ಬರುವೆನೆಂದವನು
ಎರಡೂ ಕಾಲಿಗೇ ಧಾವಿಸಿ
ಅಡುಗೆ ಆಗಿಲ್ಲವಲ್ಲ ಅಂತ ಗೊಣಗಿದ

ಇನ್ನೂ ಹದಿನೈದು ನಿಮಿಷವಿದೆಯಲ್ಲ
ಅಂದವಳ ಮೇಲೆ ಸೇಡಿನಂತೆ
ಹೊಟ್ಟೆಗಾಗದ ಖಾರದ ಚಿಪ್ಸು
ಸುರುವಿಕೊಂಡು ಸೋಫಾದಲ್ಲಿ ಪವಡಿಸಿದ

ಕಾಯಿತುರಿಯ ಜತೆ ಅರ್ಧ ಈರುಳ್ಳಿ
ಒಂದು ಸೊಳೆ ಕರಿದ ಬೆಳ್ಳುಳ್ಳಿ ಅರಿದು
ಕರಿಬೇವಿನ ಒಗ್ಗರಣೆಗೆ ಬೆರೆಸಿ ಹುಳಿಸೊಪ್ಪು
ತಯಾರಾದ ಕಡಿಸಾರಿನ ಜೊತೆಗೆ
ಹದವಾಗಿ ರವೆಯಲ್ಲಿ ಬೆಂದ
ತಿಲಾಪಿಯಾ ಮೀನು ತುಂಡುಗಳು

ಬೀಳುವುದು ಗಜ್ಜರಿಯ ತುಂಡು ನೆಲದ ಮೇಲೆ
ಸಾರಿನ ಹುಂಡು ಅಂಗಿಯ ಮೇಲೆ
ಧಣಾರನೆ ಕುಸಿಯುವವು
ಸಿಂಕಿನ ತುಂಬ ಅಡ್ಡಡ್ಡ ಕುಳಿತ
ದೊಡ್ಡ ಸಣ್ಣ ಬಟ್ಟಲುಗಳು



ಬಿಸಿ ಕುಕ್ಕರಿಗೆ ಅಂಗೈ ತಾಕಿ
ಕಲೆ ಉಳಿಯುವುದು

ಪುದಿನಾ ಚಟ್ನಿಯ ಜತೆ ಚಪಾತಿ ಕೋಸಂಬರಿ
ತುಟಿಯಲ್ಲಿ ನಗುವ ಧರಿಸಿದರೂ ಎದೆಯಲ್ಲಿ ಉರಿ
ತೊಟ್ಟು ನುಡಿದರೆ ಮೆಲುದನಿಯಲಿ
ಆಯ್ತಲ್ಲ ಎರಡೂವರೆ, ಊಟವೂ ತಯಾರಾಯ್ತು

ಗಡಿಯಾರ ನೋಡಿ
ಎರಡೂ ಮೂವತ್ತೈದು, ಎರಡೂವರೆಯಲ್ಲ
ಎಂದವನ ಮೋರೆಯ ಮೇಲೆ
ಜಗವನ್ನೇ ಗೆದ್ದ ಹೆಮ್ಮೆಯ ಕಳೆಯಿತ್ತು

ಒಂದೇ ಒಂದು ಬಾರಿ
ಅಂಥ ಕಳೆಯ ಧರಿಸುವಾ

–ಕಾವ್ಯಾ ಕಡಮೆ ನಾಗರಕಟ್ಟೆ



ಹೆಣ್ಣಿನ ಮೇಲೆ ಅತ್ಯಾಚಾರ : ಕೆಲ ಪ್ರಶ್ನೋತ್ತರಗಳು



ಹೆಣ್ಣಿನ ಮೇಲಿನ ಅತ್ಯಾಚಾರ ನಿನ್ನೆ ಇಂದಿನ ಸಾಮಾಜಿಕ ಪಿಡುಗಲ್ಲ. ಆದರೆ ಆಧುನಿಕತೆ ಮತ್ತು ನಾಗರೀಕತೆ ಬೆಳೆದಂತೆಲ್ಲ ಅದು ಹೆಚ್ಚುತ್ತಿದೆ ಮತ್ತು ಹೊಸ ಹೊಸ ಕ್ರೂರ ರೂಪಗಳನ್ನು ಪಡೆಯುತ್ತಿದೆ. ಹಾಗಾದರೆ ಆಧುನಿಕತೆ ಮತ್ತು ನಾಗರೀಕತೆ ಎಂಬುದರ ಅರ್ಥವಾದರೂ ಏನು? ಈ ಹಿನ್ನೆಲೆಯಲ್ಲಿ ಪತ್ರಿಕೆ ಸಮಾಜದ ವಿವಿದ ಹಿನ್ನೆಲೆಗಳಿಂದ ಬಂದ ಐವ್ವರನ್ನು ಈ ಬಗ್ಗೆ ಕೆಲವು ಪ್ರಶ್ನೆಗಳನ್ನು ಕೇಳಿತು. ನಾವು ಕೇಳಿದ ಪ್ರಶ್ನೆಗಳೂ ಮತ್ತು ಅವರು ನೀಡಿದ ಉತ್ತರಗಳೂ ಇಲ್ಲಿವೆ–ಸಂ.

೧. ಹಿಂದೆಂದೂ ಇಲ್ಲದಷ್ಟು ಅತ್ಯಾಚಾರಗಳು ಇಂದು ಹೆಣ್ಣಿನ ಮೇಲೆ ನಡೆಯುತ್ತಿದೆ ಎಂದು ಹೇಳಲಾಗುತ್ತಿದೆ. ಇದು ನಿಮಗೆ ನಿಜವೆನ್ನಿಸುತ್ತಿದೆಯೆ?

ಹೆಣ್ಣಿನ ಮೇಲೆ ಅತ್ಯಾಚಾರ ಎಂದಿನಿಂದಲೂ ಇದ್ದದ್ದೇ ಎಂಬ ಮಾತಿನ ಹಿನ್ನೆಲೆಯಲ್ಲಿ ಈ ಪ್ರಶ್ನೆ.

೨. ಅತ್ಯಾಚಾರವೆಂಬುದು ಸಣ್ಣ ಸಣ್ಣಮಕ್ಕಳ ಮೇಲೂ ನಡೆಯುತ್ತಿರುವ ಸುದ್ದಿ ಓದಿದಾಗ ಈ ಅತ್ಯಾಚಾರ ಬರೀ ಲೈಂಗಿಕವಾದದ್ದು ಎಂದು ನಿಮಗನ್ನಿಸುತ್ತದೆಯೇ?

೩. ಈ ಅತ್ಯಾಚಾರಗಳ ಹೆಚ್ಚಳಕ್ಕೆ ಗಂಡಿನೊಂದಿಗೆ 'ಎಲ್ಲ' ರೀತಿಯ ಸಮಾನತೆಗಾಗಿ ಸೆಣೆಸುತ್ತಿರುವ ಹೆಣ್ಣೂ ಪರೋಕ್ಷ ಕಾರಣ ಎಂಬೊಂದು ಅಭಿಪ್ರಾಯವಿದೆ. ನಿಮಗೇನನ್ನಿಸುತ್ತದೆ?

೪. ಜಾಗತೀಕರಣದ ಸಮೃದ್ಧಿ ಕೆಲವು ವರ್ಗಗಳಲ್ಲಿ ಹುಟ್ಟಿಸಿರುವ ಅಪರಿಮಿತ ದಾಹವೇ ಈ ಅತ್ಯಾಚಾರಗಳ ರೂಪದಲ್ಲಿ ವ್ಯಕ್ತವಾಗುತ್ತಿದೆ ಎನ್ನಲಾಗುತ್ತಿದೆ. ಆದರೆ ಜಾಗತೀಕರಣ ಹೆಣ್ಣಿನ ಮೇಲೂ ಸಮಾನ ಪರಿಣಾಮ ಬೀರಿದೆ ಅಲ್ಲವೆ?

೫. ಈ ಅತ್ಯಾಚಾರದ ಪಿಡುಗನ್ನು ಎದುರಿಸಲು ಇರುವ ಮೂರು ಮುಖ್ಯ ಮಾರ್ಗೋಪಾಯಗಳನ್ನು ಸೂಚಿಸಿ.

ಇದು ಉಪಭೋಗತ್ವದ ಪರಮಾವಧಿಯ ಪರಿಣಾಮ



೧. ಮಹಿಳೆಗೆ ತಂದೆಯಿಂದ, ಗಂಡನಿಂದ ಮತ್ತು ಮಗನಿಂದ ರಕ್ಷಣೆ ಸಿಗಬೇಕು ಎಂದು ಬರೆದ ವಾಕ್ಯದಲ್ಲೇ ನಮಗೆ ಅಂದಿನಿಂದಲೂ ಪುರುಷ ಮೃಗ ಯಾವಗೆಂದರೆ ಆವಾಗ, ಎಲ್ಲೆಂದರೆ ಅಲ್ಲಿ ಅತ್ಯಾಚಾರವೆಸಗುತ್ತಲೇ ಇತ್ತು ಎಂಬ ನಿದರ್ಶನ ಸಿಗುತ್ತದೆ. ಇಂದು ಅದು ಹೆಚ್ಚುತ್ತಿರುವುದು ಸ್ಪಷ್ಟ. ಉಪಭೋಗತ್ವದ ಪರಮಾವಧಿಯನ್ನು ಮುಟ್ಟಿರುವ ಇಂದಿನ ಸಮಾಜದಲ್ಲಿ ಸಂವಹನ ಸಾಧನಗಳು ಲೈಂಗಿಕತೆಯನ್ನು ಮಾರಾಟದ ಸರಕಾಗಿ ಮಾಡಿಟ್ಟಿದೆ. ದೇಹವೆಂಬುದು ಬರಿಯ ಲೈಂಗಿಕತೆಗಾಗಿಯೇ ಇರುವುದು ಎಂದು ಬಿಂಬಿಸಲಾಗಿ ಅತಿ ಚಿಕ್ಕ ವಯಸ್ಸಿನಲ್ಲಿಯೇ ಮಕ್ಕಳಿಗೂ ಕೂಡ ಲೈಂಗಿಕತೆಯ ವಿಶ್ವ ದರ್ಶನವಾಗುತ್ತಿದೆ. ಪ್ರಚೋದನೆ ಸಿಕ್ಕಾಗ ಮುಂದಿನ ಫಲಾಫಲಗಳ ವಿವೇಚನೆ ಇಲ್ಲದೆಯೇ ಸುಲಭವಾಗಿ ಸಿಗುವಲ್ಲಿ ಮುಕ್ತವಾಗಿ, ಸಿಗದೇ ಇರುವಲ್ಲಿ ಬಲವಂತವಾಗಿ, ಕಡೆಗೆ ಅತ್ಯಾಚಾರ ಮಾಡಿಯಾದರೂ ಸುಖಿಸುವವರ ಸಂಖ್ಯೆ ಹೆಚ್ಚುತ್ತಿದೆ. ಪ್ರಚಾರ ಮಾಧ್ಯಮಗಳು ನಿರ್ಭಿಡೆಯಿಂದ ಪ್ರಚಾರವನ್ನೂ ಮಾಡುತ್ತಿವೆ.

೨. ಇರಲಿಕ್ಕಿಲ್ಲ. ದೆಹಲಿಯ ನಿರ್ಭಯಾ ಕೇಸನ್ನೇ ವಿಶ್ಲೇಷಿಸಿದಾಗ ಅತ್ಯಾಚಾರಿಗಳಲ್ಲಿ ಅಪ್ರಾಪ್ತನೂ ಇದ್ದುದು ಕಂಡುಬಂದಿದೆ. ಅಷ್ಟೇ ಅಲ್ಲ, ಅತ್ಯಾಚಾರದ ನಂತರ ಅವರು ತೋರಿಸಿದ ಕ್ರೌರ್ಯ ಖಂಡಿತವಾಗಿಯೂ ಅಲ್ಲಿ ಲೈಂಗಿಕ ತೃಷೆ ಕಡೆಯದಾಗಿತ್ತು ಎಂಬುದನ್ನು ಬಿಂಬಿಸುತ್ತದೆ. ಯಾವುದೋ ಒಂದು ಸೇಡು, ಇನ್ನಾವುದೋ ಸಿಟ್ಟು ಕೈಗೆ ಸಿಕ್ಕ ಹೆಣ್ಣಿನ ಮೇಲೆ ವ್ಯಕ್ತವಾಗಿತ್ತು.

ಮನೆಯಲ್ಲಿನ ಸಮಸ್ಯೆಗಳಿಗಾಗಿ– ಅಪ್ಪನ ಕುಡಿತ, ತೀರಿಸಲಾಗದ ಸಾಲ– ಇಂದು ಬಹಳ ಚಿಕ್ಕ ವಯಸ್ಸಿನಲ್ಲಿಯೇ ಗಂಡು ಮಕ್ಕಳು ಮನೆ ಬಿಡುತ್ತಿದ್ದಾರೆ. ಹಗಲು ಮತ್ತು ರಾತ್ರಿಯೂ ದುಡಿಯಬೇಕಾದ ಅನಿವಾರ್ಯತೆ ಇರುವ ಈ ಬಾಲಕಾರ್ಮಿಕರು ಕಣ್ಣಾರೆ ನೋಡುವ ಅಪರಾಧ, ದೌರ್ಜನ್ಯಗಳು ನಮ್ಮ ಕಲ್ಪನೆಗೆ ಮೀರಿದ್ದು. ಆ ಪುಟ್ಟ ದೇಹದೊಳಗಿನ ಮನಸ್ಸಿನ ಮೇಲೆ ಆಗುತ್ತಿರುವ ಅತ್ಯಾಚಾರ, ಅನಾಚಾರಗಳ ದಾಖಲೆ ಇಡಬಹುದೇ? ಇಂದಿನ ಎಲ್ಲಾ ರೀತಿಯ ವಿಕೃತ ಅತ್ಯಾಚಾರಗಳಿಗೂ ಇದೇ ಕಾರಣ ಎಂದು ನನ್ನ ಪ್ರಾಮಾಣಿಕ ಅನಿಸಿಕೆ. ಅದೊಂದು ವಿಕೃತ ಲೈಂಗಿಕ ತೃಷೆ. ಆ ಹಸಿವನ್ನು ನೀಗಿಸಲು ಹೆಣ್ಣು ದೇಹವಾದರೆ ಸಾಕು. ಮಗು, ಯುವತಿ, ಮುದುಕಿ ಯಾರೇ ಆದರೂ ನಡೆಯುತ್ತದೆ. ಆದರೂ ಕೂಡ ಹಸುಳೆಗಳ ಮೇಲೆ ನಡೆಯುತ್ತಿದೆಯೆನ್ನಲಾದ ಅತ್ಯಾಚಾರಗಳನ್ನು ಒಪ್ಪಲೂ ಸಾಧ್ಯವಿಲ್ಲ, ಸ್ವೀಕರಿಸಲೂ ಸಾಧ್ಯವಿಲ್ಲ. ಅದೊಂದು ಪ್ರಶ್ನೆಯಾಗಿಯೇ ನಿಲ್ಲುತ್ತದೆ.

೩. ಖಂಡಿತ ಹೌದು ಎನಿಸುತ್ತದೆ. ತಾನು ಹೇಳಿದಂತೆ ಕೇಳಿಕೊಂಡು ಬಿದ್ದಿರುತ್ತಿದ್ದ, ತನಗೆ ಎಂದೂ ವಿಧೇಯಳಾಗಿರುತ್ತಿದ್ದ ಹೆಣ್ಣು ಅಕ್ಷರ ಕಲಿತು, ನೌಕರಿ ಹಿಡಿದು ಸ್ವ ಸಾಮರ್ಥ್ಯವನ್ನು ಬೆಳೆಸಿಕೊಂಡು ಮುನ್ನಡೆಯುತ್ತಿರುವುದು ಖಂಡಿತವಾಗಿ ಪುರುಷಾಧಿಕಾರಕ್ಕೆ ಪೆಟ್ಟು ಕೊಟ್ಟಂತಾಗಿದೆ.ಹಿಡಿದು, ಬಡಿದು, ಹಿಚುಕಿ, ಅತ್ಯಾಚಾರವೆಸಗಿಯಾದರೂ ಹೆಣ್ಣನ್ನು ತನ್ನ ಪರಮಾಧಿಕಾರವನ್ನು ಒಪ್ಪಿಕೊಳ್ಳುವಂತೆ ಮಾಡಬೇಕು, 'ನಿನಗೆ ಮನೆಯೇ ರಕ್ಷಣೆ ನೀಡುವ ತಾಣ ಎಂದು ಮತ್ತೆ ಅವಳನ್ನು ಪಂಜರದೊಳಗೆ ಹಾಕಬೇಕು ಎಂಬ ಹಂಬಲ ಹೆಚ್ಚಿರುವ ಅತ್ಯಾಚಾರಗಳ ಹಿಂದೆ ಎದ್ದು ಕಾಣುತ್ತಿದೆ.

೪. ಹೆಣ್ಣು, ಗಂಡು ಇಬ್ಬರಿಗೂ ಜಾಗತೀಕರಣ ಅಷ್ಟೇ ಅವಕಾಶಗಳನ್ನು ತೋರಿದೆ, ಹಾಗೆಯೇ ಅಷ್ಟೇ ಪ್ರಮಾಣದ ಆಮಿಷಗಳನ್ನು ತೋರಿಸಿದೆ. ಆಯಾ ವ್ಯಕ್ತಿಯ ಹಿನ್ನೆಲೆ, ಸಿಕ್ಕ ಶಿಕ್ಷಣ ಇವುಗಳಿಗನುಗುಣವಾಗಿ ಅವರು ತಮಗೆ ಸಿಕ್ಕ ಅವಕಾಶವನ್ನು ಬಳಸಿಕೊಳ್ಳುತ್ತಿದ್ದಾರೆ, ಆಮಿಷಗಳಿಗೆ ಬಲಿಯಾಗುತ್ತಿದ್ದಾರೆ/ ಆಗದೆ ಉಳಿಯುತ್ತಾರೆ.

೫. ಅ) ಗಂಡಾಗಲೀ ಹೆಣ್ಣಾಗಲೀ ಒಂದೇ ರೀತಿಯ ಅವಕಾಶಗಳನ್ನು ಕೊಟ್ಟು, ಒಂದೇ ರೀತಿಯಲ್ಲಿ ಸಾಮರ್ಥ್ಯ, ಶಿಕ್ಷಣ ಕೊಟ್ಟು ಬೆಳೆಸುವುದು. ಆ) ವಿಶೇಷವಾಗಿ ಗಂಡು ಮಕ್ಕಳಲ್ಲಿ ಬಾಲ್ಯದಿಂದಲೇ ಲಿಂಗ ಸೂಕ್ಷ್ಮತೆಯನ್ನು ಬೆಳೆಸುವುದು.

ಇ) ಕಾನೂನು ಬೇಕಾದಷ್ಟಿವೆ, ಆ ಕಾನೂನುಗಳನ್ನು ಪ್ರಾಮಾಣಿಕವಾಗಿ ಲಿಂಗ ಸೂಕ್ಷ್ಮತೆಯ ಸಂವೇದನೆಯಲ್ಲಿ ಜಾರಿಯಲ್ಲಿ ತರುವುದು.

–ಶಾರದಾ ಗೋಪಾಲ, ಸಾಮಾಜಿಕ ಕಾರ್ಯಕರ್ತರು, ಧಾರವಾಡ

ಪ್ರಾತಿನಿಧ್ಯ ಮತ್ತು ರಾಜಕೀಯ ಅಧಿಕಾರದ ಅಗತ್ಯ



೧. ಅತ್ಯಾಚಾರದ ಘಟನೆಗಳ ಎಫ್ ಐ ಆರ್ ದಾಖಲಿಸಲು ನಿರಾಕರಿಸಿರುವ ಪ್ರಕರಣಗಳು ಮಾಧ್ಯಮಗಳಲ್ಲಿ ವರದಿಯಾಗಿವೆ. ಆದರೂ ಲಭ್ಯವಿರುವ ಅಂಕಿ ಅಂಶಗಳು ಇತ್ತೀಚಿನ ದಿನಗಳಲ್ಲಿ ಅತ್ಯಾಚಾರ ಘಟನೆಗಳು ಹೆಚ್ಚಾಗುತ್ತಿರುವುದನ್ನು ತೋರಿಸುತ್ತವೆ. ಹಿಂದಿನಿಂದಲೂ ಇದ್ದದ್ದೇ ಎನ್ನುವುದು ಒಂದು ಅಮಾನವೀಯವಾದ ಧೋರಣೆಯಾಗಿದೆ ಏಕೆಂದರೆ ಅದು ಅತ್ಯಾಚಾರವನ್ನು ನಿರ್ಮೂಲನೆ ಮಾಡಲಾಗದ ಸಾಮಾನ್ಯ ಪಿಡುಗೆಂಬಂತೆ ಬಿಂಬಿಸುತ್ತದೆ.

೨. ಸಣ್ಣ ಮಕ್ಕಳ ಮೇಲಾಗುತ್ತಿರುವ ಅತ್ಯಾಚಾರ ಕೇವಲ ಲೈಂಗಿಕವಾದದ್ದಷ್ಟೇ ಅಲ್ಲ ಅತ್ಯಾಚಾರಿಯ ವಿಕೃತ ಮನಸ್ಥಿತಿಯೂ ಕಾರಣ. ಈ ವಿಕೃತಿಯ ಕಾರಣಗಳನ್ನು ಮನಃಶಾಸ್ತ್ರಜ್ಞರು ಪರೀಕ್ಷಿಸಬೇಕು. ಸಣ್ಣ ಮಕ್ಕಳ ಮೇಲೆ ಅತ್ಯಾಚಾರ ನಡೆಸುವವರು

ಮಕ್ಕಳ ಪರಿಚಯಸ್ಥರು, ಸಂಬಂಧಿಕರೇ ಆಗಿರುತ್ತಾರೆಂಬುದನ್ನು ಅಧ್ಯಯನಗಳು ಹೇಳುತ್ತವೆ. ಆ ಕಾರಣ ಅನೇಕ ಪ್ರಕರಣಗಳು ವರದಿಯಾಗದೆ ದೀರ್ಘಕಾಲಿಕ ದೈಹಿಕ ಮತ್ತು ಮಾನಸಿಕ ಹಿಂಸೆಯನ್ನು ಸಂತ್ರಸ್ತ ಮಕ್ಕಳು ಅನುಭವಿಸುತ್ತಾರೆ.

೩. ಮಾನವೀಯ ಮೌಲ್ಯಗಳ ವಿರೋಧಿಗಳು ಮತ್ತು ಪುರುಷ ಪ್ರಧಾನ ವ್ಯವಸ್ಥೆಯ ಸಮರ್ಥಕರು ಮಾತ್ರ ಈ ಅಭಿಪ್ರಾಯವನ್ನು ಹೊಂದಲು ಸಾಧ್ಯ. ಸಮಾನ ಹಕ್ಕುಗಳಿಗಾಗಿ ಹೋರಾಡುತ್ತಿರುವ ಹಲವು ಮಹಿಳಾ ಹೋರಾಟಗಾರರಿಗೆ ಅತ್ಯಾಚಾರದ ಬೆದರಿಕೆ ಹಾಕುವ 'ದೇಶಭಕ್ತರು' ಈ ದೇಶದಲ್ಲಿದ್ದಾರೆ. ಮಹಿಳೆಯರಿಗೆ ಲೈಂಗಿಕ ಹಕ್ಕನ್ನೇ ನಿರಾಕರಿಸಿರುವ ಸಮಾಜ ಅತ್ಯಾಚಾರವನ್ನು ಅಮಾನುಷ ಅಪರಾಧ ಎಂದು ಪರಿಗಣಿಸಲು ಸಾಧ್ಯವೆ?

೪. ಜಾಗತೀಕರಣ ಉತ್ತೇಜಿಸುತ್ತಿರುವ ಅನುಭೋಗಿ ಸಂಸ್ಕೃತಿ ಹೆಣ್ಣನ್ನು ಭೋಗದ ವಸ್ತುವನ್ನಾಗಿ ನೋಡುತ್ತದೆ. ಸ್ಪರ್ಧೆಯನ್ನು ಬಹಳ ದೊಡ್ಡ ಮೌಲ್ಯವೆಂದು ಸಾರುವ ಮತ್ತು ಮಾರುಕಟ್ಟೆಯ ಮೂಲಕವೇ ಎಲ್ಲ ಸಮಸ್ಯೆಗಳನ್ನು ಪರಿಹರಿಸಬಹುದೆಂಬ ಜಾಗತೀಕರಣದ ತರ್ಕದಲ್ಲಿ ಸಮಾನತೆಯೆಂಬುದಿರುವುದು ಹೇಗೆ ಸಾಧ್ಯ? ಜಾಗತೀಕರಣದಿಂದಾಗಿ ಹೆಣ್ಣಿನ ಮೇಲಿನ ದೌರ್ಜನ್ಯ/ಶೋಷಣೆ ಹೆಚ್ಚಾಗಿದೆಯೆಂಬುದು ನನ್ನ ಗ್ರಹಿಕೆ.

೫. ಅ) ಪುರುಷರಲ್ಲಿ ಸಮಾನತೆಯ ಅರಿವನ್ನು ಮತ್ತು ಮಾನವೀಯ ಮೌಲ್ಯಗಳನ್ನು ಬೆಳೆಸಿ ಲಿಂಗಭೇದವನ್ನು ತೊಡೆದುಹಾಕುವುದು. ಆ) ಕಾನೂನು ವ್ಯವಸ್ಥೆ ಸಮರ್ಪಕವಾಗಿ ಕಾರ್ಯನಿರ್ವಹಿಸುವಂತೆ ನೋಡಿಕೊಳ್ಳುವುದು. ಅತ್ಯಾಚಾರ ಪ್ರಕರಣಗಳನ್ನು ಶೀಘ್ರ ಇತ್ಯರ್ಥ ಮಾಡಿ ಅಪರಾಧಿಗಳಿಗೆ ಕಠಿಣ ಶಿಕ್ಷೆ ವಿಧಿಸುವುದು. ಮರಣದಂಡನೆಯ ಶಿಕ್ಷೆ ಅತ್ಯಾಚಾರದ ಬರ್ಬರತೆಯನ್ನು ಇನ್ನೂ ಹೆಚ್ಚು ಮಾಡುತ್ತದೆಂಬ ಆತಂಕ ಹಲವು ಕಾನೂನು ತಜ್ಞರದು. ಕೊಲೆ, ಅತ್ಯಾಚಾರ ಎರಡಕ್ಕೂ ಮರಣದಂಡನೆಯೇ ಶಿಕ್ಷೆಯಾದರೆ ಅತ್ಯಾಚಾರಿ ಮಹಿಳೆಯನ್ನು ಕೊಲ್ಲುವ ಸಾಧ್ಯತೆಗಳು ಹೆಚ್ಚಬಹುದು. ಇ) ಮಹಿಳೆಯರಿಗೆ ಸಮಾನ ಗೌರವ, ಅವಕಾಶಗಳನ್ನು ಕಲ್ಪಿಸಿ ಎಲ್ಲ ಕ್ಷೇತ್ರಗಳಲ್ಲಿ ಅವರಿಗೆ ಪ್ರಾತಿನಿಧ್ಯ ಮತ್ತು ರಾಜಕೀಯ ಅಧಿಕಾರ ನೀಡುವುದು.

–ಡಾ. ಡಿ.ಎಸ್. ಪೂರ್ಣಾನಂದ, ಮುಖ್ಯಸ್ಥರು, ಪತ್ರಿಕೋದ್ಯಮ ಮತ್ತು ಸಮೂಹ ಮಾಧ್ಯಮಗಳ ವಿಭಾಗ, ಕುವೆಂಪು ವಿಶ್ವವಿದ್ಯಾನಿಲಯ

ಹೆಣ್ಣನ್ನು ಕೇವಲ ದೇಹವನ್ನಾಗಿ ಕಾಣುವ ಮನಃಸ್ಥಿತಿ ಇದು!



ಹೆಣ್ಣಿನ ಮೇಲೆ ಅತ್ಯಾಚಾರ ಎಂದಿನಿಂದಲೂ ಇದ್ದದ್ದೇ. ಲಭ್ಯವಿರುವ ಅಂಕಿಅಂಶಗಳೆಲ್ಲವೂ ಅದು ಮೊದಲಿಗಿಂತ ಹೆಚ್ಚಾಗಿದೆ ಎನ್ನುತ್ತಿವೆ. ಬಹುಶಃ ಅದು ಇನ್ನೂ ಹೆಚ್ಚು ಇರಬಹುದು. ಏಕೆಂದರೆ ತವುಗಾಗುವ ಹಿಂಸೆ ಅವಮಾನಗಳನ್ನು ಮುಕ್ತವಾಗಿ ದಾಖಲಿಸಿ ನ್ಯಾಯ ದಕ್ಕಿಸಿಕೊಳ್ಳಬಹುದಾದ ಸಮಾಜ, ಮನಃಸ್ಥಿತಿ ಇನ್ನೂ ನಿರ್ಮಾಣವಾಗಬೇಕಿದೆ.

ಎಳೆಯ ಮಕ್ಕಳು, ಹಣ್ಣುಹಣ್ಣು ಮುದುಕಿಯರು, ತುಂಬಿದ ಗರ್ಭಿಣಿಯರ ಮೇಲಿನ ಅತ್ಯಾಚಾರವನ್ನು ನೋಡಿದರೆ ಅದಕ್ಕೆ ಲೈಂಗಿಕತೆ ಮೀರಿದ ಆಯಾಮವಿದೆ ಎಂಬ ಬಗ್ಗೆ ಎರಡು ಮಾತಿಲ್ಲ. ಅತ್ಯಾಚಾರದ ಹಿಂದೆ ಇರುವುದು ಶಕ್ತಿಯ, ಅಹಂಕಾರದ, ಅಧಿಕಾರದ ಸ್ಥಾಪನೆ. ಸಮಾನತೆಯ ಕೂಗು ಯಾರಿಂದಲೇ ಬರಲಿ, ಕೇಳಿದವರಿಗೆ ಮೊದಲು ಬೀಳುವುದು ಗುದ್ದಲ್ಲದೆ ಬೇರೆ ಏನು? ದಲಿತರು, ಕರಿಯರು, ಅಲ್ಪಸಂಖ್ಯಾತರು, ಮಹಿಳೆಯರು ಸಮಾನತೆಗೆ ಸೆಣಸಾಡುತ್ತಿರುವುದರಿಂದಲೇ ಅವರ ಮೇಲೆ ದೌರ್ಜನ್ಯ ನಡೆಯುತ್ತಿದೆ ಎನ್ನುವುದು ಅಸಮಾನತೆಯನ್ನು ಪ್ರೀತಿಸುವವರ ಹುರುಳಿಲ್ಲದ ವಾದ. ಇನ್ನು ಇಂತಹ ಹೋರಾಟಗಳಲ್ಲಿ ಹೆಣ್ಣಿಗೆ ಎರಡು ಗುದ್ದು.. ಏಕೆಂದರೆ ಈ ಹೋರಾಟಗಳಲ್ಲಿ ಕೇಳುವವರು ಮತ್ತು ತಿರಸ್ಕರಿಸುವವರು ಇಬ್ಬರಿಗೂ ರಣರಂಗ ಹೆಣ್ಣಿನ ಮೈಯ್ಯಲ್ಲವೇ? ಎಲ್ಲ ಬಗೆಯ ಕೋಪ, ಹತಾಶೆಗಳು ವ್ಯಕ್ತವಾಗುವುದು ಸಾಮೂಹಿಕ ಅತ್ಯಾಚಾರದಲ್ಲಲ್ಲವೇ? ಇನ್ನು ಸಮಾನತೆ ಕೇಳುತ್ತಿರುವವಳೇ ಹೆಣ್ಣಾಗಿಬಿಟ್ಟರಂತು ಬಿಡಿ! ಜಾಗತೀಕರಣ, ಉದಾರೀಕರಣ, ಇಂತಹ ಎಲ್ಲಾ "ಕರಣಗಳು" ಹೆಣ್ಣಿನ ಮೇಲೆ ಪರಿಣಾಮ ಬೀರದೇ ಇರುವುದಕ್ಕೆ ಹೇಗೆ ಸಾಧ್ಯ? ಇವುಗಳ ನಕಾರಾತ್ಮ ಪರಿಣಾಮಗಳು ಹೆಚ್ಚಾಗಿ ಹೆಣ್ಣಿನ ಮೇಲೇ. ಇವೆಲ್ಲ "ಕರಣಗಳೂ" ಸಮಾಜದಲ್ಲಿ ಈಗಾಗಲೇ ಹೆಣ್ಣನ್ನು ಕೇವಲ ದೇಹವನ್ನಾಗಿ ಕಾಣುವ ಮನಃಸ್ಥಿತಿಯ ಸುಧಾರಿತ, ಪರಿಷ್ಕೃತ, ಉನ್ನತ ರೂಪಗಳೇ ಹೊರತು ಬೇರೇನಲ್ಲವಲ್ಲ! ಇಲ್ಲಿ ಅವಳೂ ಸೇರಿದಂತೆ ಎಲ್ಲವೂ ಸರಕು. ಕಾಯಬೇಕಾದ ಪೋಲಿಸ್ ವ್ಯವಸ್ಥೆ, ಸೈನ್ಯ, ನ್ಯಾಯಾಲಯ, ಒಟ್ಟು ಸಮಾಜ ಇವೆಲ್ಲವೂ ಆ ಪಿಡುಗಿನ ಭಾಗವಾಗಿಬಿಟ್ಟಿವೆಯಲ್ಲಾ? ಏನು ಮಾಡೋದು?

ಅತ್ಯಾಚಾರ ದೈಹಿಕ ಪಿಡುಗಾದರೂ, ಪಿಡುಗಿನ ಮೂಲ ಮಾತ್ರ ಮನಸ್ಸೇ. ಇವುಗಳ ಮೂಲದಲ್ಲಿರುವ ಅಧಿಕಾರಕೇಂದ್ರಿತ, ಶಕ್ತಿಕೇಂದ್ರಿತ, ಅಹಂಕಾರ ಕೇಂದ್ರಿತ ಮನಸ್ಸು ಬದಲಾಗದ ಹೊರತು ಈ ಪಿಡುಗನ್ನು ನಿವಾರಿಸಲು ಸಾಧ್ಯವಿಲ್ಲವೆನಿಸುತ್ತದೆ. ಕಾನೂನುಗಳು ಹಲವಿವೆ, ಕಠಿಣ ಶಿಕ್ಷೆಗಳೂ ಇವೆ. ಅವು ಅವಶ್ಯಕ ಕೂಡ. ಆದರೆ ಅದನ್ನು ಜಾರಿಗೊಳಿಸುವ ಮನಸ್ಸುಗಳು, ವಿಚಾರಗಳು ಬದಲಾಗದೇ ಇದ್ದಲ್ಲಿ ಹೆಚ್ಚಿನ ಬಾರಿ ಅವು ಅರ್ಥಹೀನವಾಗುತ್ತವೆ, ಹಾಗಾಗಿ ಮನಃಪರಿವರ್ತನೆಯ ದಿಕ್ಕಿನಲ್ಲಿ ಹೆಚ್ಚು ಕೆಲಸಮಾಡಬೇಕೆನಿಸುತ್ತದೆ.

–ಶೈಲಜಾ ವೇಣುಗೋಪಾಲ್, ನಿವೃತ್ತ ಇಂಗ್ಲಿಷ್ ಅಧ್ಯಾಪಕರು ಮತ್ತು ಸಂಗೀತಜ್ಞ ಲೇಖಕಿ, ಮೈಸೂರು

ವ್ಯವಸ್ಥೆ ಮತ್ತು ಕುಟುಂಬಗಳೆರಡೂ ಸಮಪಾಲು ಜವಾಬ್ದಾರಿ



೧. ರೀತಿ ಪರಿಮಾಣಾತ್ಮಕ ಅಂಕಿಅಂಶಗಳನ್ನು ಅಪರಾಧ ಸಾಂಖ್ಯಿಕ ಅಧ್ಯಯನದ ಆಧಾರದ ಮೇಲೆ ಮಾತ್ರವೇ ಖಚಿತವಾಗಿ ಹೇಳಬಹುದು. ಇತ್ತೀಚಿನ ಮೀಡಿಯ 'ಆಕ್ಟಿವಿಸಂ'ನ ಪರಿಣಾಮವಾಗಿ ಅತ್ಯಾಚಾರ ಪ್ರಕರಣಗಳು ಹೊರಲೋಕಕ್ಕೆ ತಿಳಿಯುತ್ತಿವೆ. ಆದಾಗ್ಯೂ ಈಗಲೂ ಬೇರೆ ಬೇರೆ ಕಾರಣಗಳಿಂದಾಗಿ ಅತ್ಯಾಚಾರ ಪ್ರಕರಣಗಳಲ್ಲಿ ಬಹುತೇಕವು ಗುಸುಗುಸು ಹಂತದಲ್ಲಿಯೇ ನಿಂತುಹೋಗುವ ಸಂದರ್ಭಗಳೇ ಅಧಿಕ.

೨. ಅತ್ಯಾಚಾರ ಎಂಬುದು ಹೆಣ್ಣುಮಕ್ಕಳಿಂದ ಪ್ರಚೋದನೆಗೊಳಗಾಗಿ(ಪ್ರತಿಕ್ರಿಯೆ ಮಾದರಿ!) ನಡೆಯುತ್ತಿರುವುದೇ ಹೊರತು ಅದಾಗಿ ಅದು ಸಂಭವಿಸುತ್ತಿಲ್ಲ ಎಂದು ವಾದಿಸುವವರಿದ್ದಾರೆ. ಅರಿಯದ ಹಸುಳೆ ಮತ್ತು ಹಣ್ಣು ಹಣ್ಣು ಮುದುಕಿಯರ ಮೇಲೂ ನಡೆಯುತ್ತಿರುವ ಅತ್ಯಾಚಾರಗಳನ್ನ ಕೇವಲ ಲೈಂಗಿಕವಾದ್ದು ಎಂದು ಹೇಳಲಾಗುವುದಿಲ್ಲ. ದೇಶದ ಪಾರಂಪರಿಕ ಪಠ್ಯಗಳಿಂದ ಹಿಡಿದು ಸಾಮಾನ್ಯ ಗ್ರಹಿಕೆಯವರೆಗೂ ಹೆಣ್ಣು ಭೋಗವಸ್ತು ಮತ್ತು ಎರಡನೇ ದರ್ಜೆಯ ಪ್ರಜೆಯಂತೆಯೇ ಬಿಂಬಿಸಲ್ಪಟ್ಟವಳು. ಹುಟ್ಟಿದಾರಭ್ಯ ಅಂಥ ಮನಃಸ್ಥಿತಿಯನ್ನೇ ಪೋಷಿಸಿಕೊಂಡು ಬಂದವರಿಗೆ ಹೆಣ್ಣಿನ ಬಗ್ಗೆ ಯಾವ ಗೌರವವೂ ಇರಲಾರದು,

೩. ಈ ಪ್ರಶ್ನೆಯಲ್ಲಿಯೇ ಏನೋ ಸಮಸ್ಯೆ ಇರುವಂತಿದೆ. ಆದಿಮ ಸಮಾಜವಿರಲಿ, ಜಾಗತೀಕರಣದ ಈ ಕಾಲದ ಸಮಾಜವಿರಲಿ ಹೆಣ್ಣು ಸಮಾನತೆಗೆ ಸೆಣಸುವುದು ಸಹಜವೇ ಹೊರತು ತಪ್ಪಲ್ಲ. ಹೀಗಿರುವಾಗ ಶೋಷಿತರನ್ನೇ ಶೋಷಣೆಗೆ ಮೂಲ ಕಾರಣವಿರಬಹುದ ಎಂದು ಯೋಚಿಸುವುದೇ ಅಮಾನವೀಯ. ಆಧುನಿಕ ಸಮಾಜದ ಸ್ವೇಚ್ಛೆಯ ಬದುಕನ್ನು ಕುರಿತಂತೆ ಈ ಪ್ರಶ್ನೆ ಕೇಳಿರಬಹುದು ಎಂದು ಭಾವಿಸಬಹುದಾದರೂ ಆಕೆಯೇ ಪರೋಕ್ಷ ಕಾರಣ ಎಂದು ಹೇಳಲು ಸಮರ್ಥನೆಯಾಗಲಾರದು.

೪. ಎಲ್ಲ ರೀತಿಯ ಬಹುತ್ವಗಳನ್ನು ಲಘುವಾಗಿ ಕಂಡು ಏಕಾಕಾರಿ ಬದುಕನ್ನು ಕಟ್ಟುವ, ಎಲ್ಲದರಲ್ಲಿಯೂ ಹಣವೇ ಕೇಂದ್ರವಾಗಿರುವ ಜಾಗತೀಕರಣವು ಎಲ್ಲವನ್ನೂ ಆಪೋಷನ ತೆಗೆದುಕೊಳ್ಳಲು ಸಿದ್ಧವಾಗಿರುವ ಜನವರ್ಗವೊಂದಕ್ಕೆ ಜನ್ಮನೀಡಿದೆ. ಅಂಥ ವರ್ಗವು ಮೊದಲ ಜಗತ್ತಿನ ರಾಷ್ಟ್ರಗಳಲ್ಲಿ ಲಿಂಗವಿವಕ್ಷೆಯ ಮಿತಿಗೆ ನಿಲುಕದಿರಬಹುದು, ಆದರೆ ಭಾರತದಂಥ ತೃತೀಯ ಜಗತ್ತಿನ ದೇಶದ ಸಮಾಜದಲ್ಲಿ ಅಲ್ಲ. ಅಂಥ ದಾಹ ಹೆಣ್ಣಿನಲ್ಲೂ ಇರುವುದು ಎಂದಾದರೂ ಅದನ್ನು ಸ್ಪಷ್ಟೀಕರಿಸುವ ಸಾಕ್ಷ್ಯಗಳು ಲಭ್ಯವಿದ್ದಂತಿಲ್ಲ.

೫. ಅ) ಅತ್ಯಾಚಾರ ತಡೆ ಕುರಿತಂದೆ ದೇಶದಲ್ಲಿ ನೂರೆಂಟು ಕಾನೂನುಗಳಿವೆ. ಹೀಗಾಗಿ ಮತ್ತೊಂದು ಕಾನೂನು ರೂಪಿಸುವುದು ವ್ಯರ್ಥ.ಈ ಕುರಿತ ಬಹುತೇಕ ವ್ಯಾಜ್ಯಗಳು ತಾರ್ಕಿಕ ಅಂತ್ಯ ಕಾಣುತ್ತಿಲ್ಲ. ನ್ಯಾಯಾಲಯದಲ್ಲಿ ಸಾಬೀತು ಮಾಡಲು ಸೂಕ್ತ ವ್ಯವಸ್ಥೆ ರೂಪಿಸಬೇಕಿದೆ. ಹೀಗಾದರೆ ಶಿಕ್ಷೆಯ ಭಯ ಕಿಂಚಿತ್ತಾದರೂ ಬಂದೀತು. ಆ) ಸೂಕ್ತ ಕಾನೂನಿನ ಜತೆ ಲಿಂಗ ಸಮಾನತೆಯ ವಿಚಾರವನ್ನು ಬಿತ್ತುವ ಕೆಲಸವೂ ನಡೆಯಬೇಕು. ಇ) ಹೆಣ್ಣು ಮಕ್ಕಳನ್ನು ಬೆಳೆಸುವ ಕ್ರಮವೂ ಬದಲಾಗಬೇಕಿದೆ. ಅವರಲ್ಲಿ ಆತ್ಮವಿಶ್ವಾಸ ಮತ್ತು ಧೈರ್ಯಗಳನ್ನು ತುಂಬಬೇಕಿದೆ ಇಲ್ಲಿ ವ್ಯವಸ್ಥೆ ಮತ್ತು ಕುಟುಂಬಗಳೆರಡೂ ಸಮಪಾಲು ಜವಾಬ್ದಾರಿ ಹೊರಬೇಕಿದೆ.

–ಕೆ. ರೋಹಿತ್, ಪ. ಪೂ. ಕಾಲೇಜಿನ ಕನ್ನಡ ಉಪನ್ಯಾಸಕರು, ಆಲೂರು

ಹಲವು ಮನೋ ಸಾಮಾಜಿಕ ಅಂಶಗಳ ಹಿನ್ನೆಲೆ ಇದೆ



೧. ವಿಜ್ಞಾನ ಮತ್ತು ತಂತ್ರಜ್ಞಾನ ಬೆಳೆದಷ್ಟೂ ನಮಗೆ ದಾಖಲಿಸುವ ಮತ್ತು ಸಮೀಕ್ಷೆ ನಡೆಸುವ ಅವಕಾಶಗಳು ಹೆಚ್ಚಾಗಿವೆ. ಸಾಮಾಜಿಕ ಮತ್ತು ಕಾನೂನಾತ್ಮಕ ಸುಧಾರಣೆಗಳಿಂದಾಗಿ ಅತ್ಯಾಚಾರಕ್ಕೊಳಗಾದವರು ತಮಗಾದ ಅನ್ಯಾಯವನ್ನು ದಾಖಲಿಸುವುದು ಹೆಚ್ಚಾಗಿದೆ. ಬದಲಾಗುತ್ತಿರುವ ಸಾಮಾಜಿಕ ಸಂದರ್ಭಗಳಲ್ಲಿ ಅತ್ಯಾಚಾರಗಳು ಹೆಚ್ಚಾಗುತ್ತಿವೆ ಎಂದು ನಮಗೆ ಕಾಣಿಸುತ್ತಿದ್ದರೂ ಇದು ಹೊಸ ಬೆಳವಣಿಗೆಯೇನಲ್ಲ.

೨. ಸಣ್ಣ ಮಕ್ಕಳ ಮೇಲೆ ನಡೆಯುವ ಅತ್ಯಾಚಾರಗಳು ವಯಸ್ಕ ಮಹಿಳೆಯರ ಮೇಲೆ ನಡೆಯುವ ಅತ್ಯಾಚಾರಗಳಿಗಿಂತ ಭಿನ್ನವಾದ ಮನೋವೈಜ್ಞಾನಿಕ, ಮನೋಸಾಮಾಜಿಕ ಕಾರಣಗಳನ್ನು ಹೊಂದಿವೆ.. ಇವೆರಡನ್ನೂ ಒಂದೇ ಗುಂಪಿಗೆ ಸೇರಿಸಿ ವಿಶ್ಲೇಷಿಸಲಾಗದು. ಮನೋವೈಜ್ಞಾನಿಕ ಅಧ್ಯಯನಗಳ ಪ್ರಕಾರ ಅತ್ಯಾಚಾರವೆಸಗಿದವರು ಮುಖ್ಯವಾಗಿ ಈ ಕಾರಣಗಳನ್ನು ನೀಡುತ್ತಾರೆ: ಕೇವಲ ಲೈಂಗಿಕ ಸೆಳೆತ, ಹೆಣ್ಣಿನ ಮೇಲಿನ ದಬ್ಬಾಳಿಕೆಯ ಸಾಧನವಾಗಿ, ಹೆಣ್ಣಿನ ಮೇಲಿನ ದ್ವೇಷದಿಂದ, ಹೆಣ್ಣೇ ಪ್ರಚೋದನೆ ಕೊಟ್ಟಳು ಎಂಬ ಸಬೂಬು, ನನ್ನ ಲೈಂಗಿಕ ತೃಷೆ ನನ್ನ ನಿಯಂತ್ರಣದಲ್ಲಿರಲಿಲ್ಲ ಮತ್ತು ಗಂಡಸಿಗೆ ಲೈಂಗಿಕ ತೃಷೆ ಹತೋಟಿಯಲ್ಲಿಡಲು ಸಾಧ್ಯವಿಲ್ಲವೆಂಬ ಕಾರಣಗಳನ್ನು ಹೆಚ್ಚಾಗಿ ನೀಡಿದ್ದಾರೆ. ಈ ನಾವು ಗ್ರಹಿಸಿರುವಂತೆ ಮತ್ತು ವೈಜ್ಞಾನಿಕ ಅಧ್ಯಯನಗಳು ತಿಳಿಸಿರುವಂತೆ ಅತ್ಯಾಚಾರಗಳು ಲೈಂಗಿಕ ತೃಷೆಯ ಅಡಿಯಲ್ಲಿ ಹಲವು ಮನೋಸಾಮಾಜಿಕ ಅಂಶಗಳ ಪರಿಣಾಮವಾಗಿ ಸೃಷ್ಟಿಗೊಳ್ಳುವ ಕ್ರಿಯೆಯಾಗಿದೆ. ಹೆಣ್ಣಿನ ಮೇಲೆ ನಡೆಯುವ ಅತ್ಯಾಚಾರಕ್ಕೆ ಜೀವವಿಕಸನೀಯ ಕಾರಣಗಳನ್ನೂ ಅಧ್ಯಯಿಸಲಾಗಿದೆ. ಆದರೆ ಮನುಷ್ಯ ವರ್ಗದಲ್ಲಿ ನಡೆವ ಅತ್ಯಾಚಾರಗಳಿಗೆ ಕೇವಲ ಜೀವವಿಕಾಸಹಾದಿಯ ಕಾರಣಗಳನ್ನು ಆರೋಪಿಸಲಾಗದು. ಗಂಡಸಿನ ಆತ್ಮವಿಶ್ವಾಸದ ಕೊರತೆ, ಬಾಲ್ಯದಲ್ಲಿನ ಮಾನಸಿಕ ಬೆಳವಣಿಗೆ, ಪರಿಸರ, ಶಿಕ್ಷಣ, ಆರ್ಥಿಕ ಸಬಲತೆ ಇವೆಲ್ಲವೂ ಹಲವು ಹಂತಗಳಲ್ಲಿ ಒಬ್ಬ ಗಂಡಸನ್ನು ಅತ್ಯಾಚಾರಿಯನ್ನಾಗಿಸಬಹುದು. ಇತಿಹಾಸದಲ್ಲಿ ನಾವು ಕಾಣುವಂತೆ ರಾಜ್ಯ-ದೇಶಗಳ ಆಕ್ರಮಣದ ಒಂದು ಸಂಕೇತವಾಗಿ ಕೂಡ ಅಲ್ಲಿನ ಹೆಂಗಸರ ಮೇಲೆ ಅತ್ಯಾಚಾರಗಳಾಗಿವೆ.

೩. .ಇದು ಇಂಗ್ಲೀಷ್‌ನಲ್ಲಿ ಹೇಳುವ ವಿಕ್ಟಿಮ್ ಬ್ಲೇಮಿಂಗ್. ಸಮಾನತೆಗೆ ಒಂದಿಷ್ಟೂ ಸೆಣೆಸದಿರುವ ಹೆಣ್ಣುಗಳಿಗೂ ಅತ್ಯಾಚಾರವಾಗಿಲ್ಲವೇ? ಅತ್ಯಾಚಾರವಾಗದಂತೆ ಆದಷ್ಟು ಹೆಣ್ಣೇ ಜವಾಬ್ದಾರಿ ತೆಗೆದುಕೊಳ್ಳಬೇಕು ಎಂದು ಹೇಳುವವರು ಒಂದು ರೀತಿ ಸಂವೇದನಾಶೂನ್ಯರು. ಅಸೂಕ್ಷ್ಮ ಮನಸ್ಸಿನವರು.

೪. ಜಾಗತೀಕರಣ ಎಲ್ಲಾ ವರ್ಗ ಮತ್ತು ಲಿಂಗಗಳ ಮೇಲೆ ಹಲವು ಹಂತಗಳಲ್ಲಿ ಪ್ರಭಾವ ಬೀರಿರುತ್ತದೆ. ಆದರೆ ಯಾವುದೇ ಒಂದು ವಿದ್ಯಮಾನ ಕ್ಲಿಷ್ಟವಾದ ಸಾಮಾಜಿಕ ರಚನೆಯ ಮೇಲೆ ಸಮಾನವಾದ ಪರಿಣಾಮ ಬೀರಲು ಸಾಧ್ಯವಿಲ್ಲ.

೫. ಅ) ಶಿಕ್ಷಣ. ಹರೆಯಕ್ಕೆ ಕಾಲಿಟ್ಟ ಶಾಲಾ ಮಕ್ಕಳಿಗೆ ಸರ್ಕಾರ ಲೈಂಗಿಕ ಶಿಕ್ಷಣವನ್ನು ಕಡ್ಡಾಯ ಮಾಡಬೇಕು. ಆ) ಎರಡು, ಅತ್ಯಾಚಾರಗೊಳಗಾದವರಿಗಷ್ಟೇ ಅಲ್ಲ ಅತ್ಯಾಚಾರವೆಸಗಿದವರಿಗೂ ವೃತ್ತಿಪರ ಸಮಾಲೋಚನೆ ಮತ್ತು ಮನೋವೈಜ್ಞಾನಿಕ ಚಿಕಿತ್ಸೆಗೆ ಅನುವು ಮಾಡಿಕೊಡುವುದು. ಮನೋವೈದ್ಯರ ಬಳಿ ಆಪ್ತ ಸಮಾಲೋಚನೆ ತೆಗೆದುಕೊಳ್ಳುವುದೇ ಒಂದು ಕಳಂಕ ಎಂಬ ಆಲೋಚನೆಯನ್ನು ಮೊದಲು ಸಡಿಲಗೊಳಿಸಬೇಕು. ಇದು ನಮ್ಮ ಸಮಾಜದ ಮಾನಸಿಕ ಆರೋಗ್ಯವನ್ನು ಸುಧಾರಿಸಲು ಅತ್ಯವಶ್ಯಕವಾಗಿ ಬೇಕಾಗಿರುವ ಆರೋಗ್ಯಸೇವೆ. ಇ) ಮೂರು, ಮಹಿಳೆಯು ಆರ್ಥಿಕವಾಗಿ ಸಬಲಳಾಗುವುದರ ಜೊತೆಗೆ ವೈಚಾರಿಕತೆ ಮತ್ತು ವೈಜ್ಞಾನಿಕ ಮನೋಭಾವನೆಯನ್ನು ಬೆಳೆಸಿಕೊಳ್ಳುವುದು. ಆಗ ಅತ್ಯಾಚಾರದ ಸನ್ನಿವೇಶಗಳು ಕಡಿಮೆಯಾಗುವುದರ ಜೊತೆಗೆ ಅತ್ಯಾಚಾರಕ್ಕೊಳಗಾದರೂ ಅದರ ಕೆಟ್ಟ ಪರಿಣಾಮಗಳನ್ನು ತಾನೇ ನಿಭಾಯಿಸುವ ಶಕ್ತಿ ಪಡೆಯುವರು.

–**ಡಾ. ಸುಶಿ ಕಾಡನಕುಪ್ಪೆ,** ದಂತ ವೈದ್ಯಶಾಸ್ತ್ರ ಪ್ರಾಧ್ಯಾಪಕಿ, ಬೆಂಗಳೂರು

ಶಿವಮೊಗ್ಗದಲ್ಲಿ ಅಂತಾರಾಷ್ಟ್ರೀಯ ಮಹಿಳಾ ದಿನಾಚರಣೆಯ ವಿಶೇಷ ಕಾರ್ಯಕ್ರಮಗಳು

ಕರ್ನಾಟಕ ರಾಜ್ಯ ಮಹಿಳಾ ದೌರ್ಜನ್ಯ ವಿರೋಧಿ ಒಕ್ಕೂಟವು ಇದೇ ಮಾರ್ಚ್ ೮ ಮತ್ತು ೯ರಂದು ಶಿವಮೊಗ್ಗದಲ್ಲಿ 'ನಮ್ಮ ಬದುಕು ನಮ್ಮ ಹಕ್ಕು, ಹೆಣ್ಣು ಮಗಳು ಜಗದ ಬೆಳಕು' ಎಂಬ ಘೋಷವಾಕ್ಯದಡಿ ವಿಚಾರ ಸಂಕಿರಣ, ಜಾಥಾ ಮತ್ತು ಸಾರ್ವಜನಿಕ ಸಭಾ ಕಾರ್ಯರಮಗಳನ್ನು ಹಮ್ಮಿಕೊಂಡಿದೆ.. ಈ ಬಗ್ಗೆ ಒಕ್ಕೂಟದ ಸಂಚಾಲಕಿ ಡಾ. ಎಚ್.ಎಸ್. ಅನುಮಪಮಾ ಅವರನ್ನು ಪತ್ರಿಕೆಯ ಪರವಾಗಿ ಟಿ.ಎಲ್. ರೇಖಾಂಬ ಇಲ್ಲಿ ಮಾತನಾಡಿಸಿದ್ದಾರೆ–ಸಂ.



ಈ ಕರ್ನಾಟಕ ರಾಜ್ಯಮಹಿಳಾ ದೌರ್ಜನ್ಯ ವಿರೋಧಿ ಒಕ್ಕೂಟ ರಚನೆಯಾದದದ್ದು ಏಕೆ, ಹೇಗೆ?

ಆರು ವರ್ಷಗಳ ಕೆಳಗೆ, ಮಹಿಳೆಯರ ಮೇಲಿನ ಹಿಂಸೆಯನ್ನು ಪ್ರತಿರೋಧಿಸಲೇಬೇಕೆಂದು ತೀವ್ರವಾಗಿ ಅನಿಸಿದಾಗ ಒಂದಷ್ಟು ಜನ ಗೆಳತಿಯರು ಕಂಡ ಒಗ್ಗೂಡುವಿಕೆಯ ಕನಸೇ ಈ ನಮ್ಮ ಒಕ್ಕೂಟ. ಕರ್ನಾಟಕದಾದ್ಯಂತ ಸಮಾನತೆ, ಸಾಮಾಜಿಕ ನ್ಯಾಯ, ಜಾತ್ಯತೀತ ಮತ್ತು ಪ್ರಜಾಸತ್ತಾತ್ಮಕ ಮೌಲ್ಯಗಳಲ್ಲಿ ನಂಬಿಕೆ ಇಟ್ಟಿರುವ; ಹಿಂಸೆ-ತಾರತಮ್ಯ ವಿರೋಧಿಸುವ ೧೫೦ಕ್ಕೂ ಹೆಚ್ಚಿನ ಸಂಘಟನೆ-ವ್ಯಕ್ತಿಗಳ ಒಗ್ಗೂಡುವಿಕೆಯಾಗಿ ಒಕ್ಕೂಟ ರೂಪುಗೊಂಡಿತು. ೨೦೧೨ರಲ್ಲಿ ಮಂಗಳೂರಿನಲ್ಲಿ ರೂಪುಗೊಂಡ ಒಕ್ಕೂಟವು ೨೦೧೩ರಲ್ಲಿ ಮಂಗಳೂರು, ತದನಂತರದ ವರ್ಷಗಳಲ್ಲಿ ಮೈಸೂರು, ಬೆಂಗಳೂರು, ವಿಜಯಪುರ, ಕೊಪ್ಪಳದಲ್ಲಿ ಐಕ್ಯತೆಯ ಸಂಕೇತವಾಗಿ ಬೃಹತ್ ಸಮಾವೇಶ, ಸೈದ್ಧಾಂತಿಕ ತಿಳುವಳಿಕೆಗಾಗಿ ವಿಚಾರ ಸಂಕಿರಣ ಮತ್ತು ಜನರೊಡನೆ ಸಂವಾದಿಸುವ ಸಲುವಾಗಿ ಅರಿವು ಮೂಡಿಸುವ ಕಾರ್ಯಗಳನ್ನು ನಡೆಸಿದೆ.

ಇಷ್ಟು ದೊಡ್ಡ ಪ್ರಮಾಣ ಆಚರಣೆ ಆಚರಿಸುತ್ತಿರುವುದರ ಉದ್ದೇಶವೇನು?

ಹಲವು ನೆಲೆಗಳಲ್ಲಿ ಹಂಚಿಹೋಗಿರುವ ಮಹಿಳಾಪರ ಮನಸುಗಳನ್ನು ಒಂದೆಡೆ ಸೇರಿಸಿ ಮಹಿಳಾ ದಿನಾಚರಣೆಯ ನೆಪದಲ್ಲಿ ವರ್ಷಕ್ಕೊಮ್ಮೆ ಪರಸ್ಪರರನ್ನು ಅರಿಯುವಂತೆ ಮಾಡುವುದು ಸಮಾವೇಶದ ಉದ್ದೇಶ. ಭಾರತದಾದ್ಯಂತ ನಡೆಯುವ ಮಹಿಳಾ ಹೋರಾಟಗಳ ಜೊತೆ ಸಂಪರ್ಕ ಸಾಧಿಸುವುದು ಮುಖ್ಯವಾದ್ದರಿಂದ ಜನಪರ ಹೋರಾಟಗಳ ಪ್ರತಿನಿಧಿಗಳನ್ನು ಹೊರರಾಜ್ಯಗಳಿಂದ ಬರಮಾಡಿಕೊಂಡಿದ್ದೇವೆ. ರಾಜಾಸ್ಥಾನದ ಭಾಂವ್ರಿದೇವಿ, ಮಹಾರಾಷ್ಟ್ರದ ಊರ್ಮಿಳಾ ಪವಾರ್, ಮಣಿಪುರದ ಮೆಯಿರಾ ಪೈಬಿ ಸಂಘಟನೆಯ ಸೋದರಿಯರು, ಚೆನ್ನೈನ ವಿ. ಗೀತಾ, ಭೂಪಾಲ್ ಅನಿಲ ಸಂತ್ರಸ್ತರ ಸಂಘಟನೆಯ ಚಂಪಾದೇವಿ-ರಶೀದಾಬಿ, ಮೇಧಾ ಪಾಟ್ಕರ್, ದೆಹಲಿಯ ಉಮಾ ಚಕ್ರವರ್ತಿ, ಕವಿತಾ ಕೃಷ್ಣನ್, ತೆಲಂಗಾಣದ ಗೋಗು ಶ್ಯಾಮಲ, ಒರಿಸ್ಸಾದ ರಂಜನಾ ಪಾಡಿ ಬಂದು ಹೋಗಿದ್ದಾರೆ. ಈ ಬಾರಿ ಶಿವಮೊಗ್ಗಗೆ ಪುಣೆಯ ಮನಿಶಾ ಗುಪ್ತೆ, ಮುಂಬಯಿಯ ಫ್ಲೇವಿಯಾ ಆಗ್ನೆಸ್, ಹೈದರಾಬಾದಿನ ಲತಾ ಪಿ. ಎಂ. ಬರಲಿದ್ದಾರೆ.

ನಿಮ್ಮ ಈ ಕಾರ್ಯಕ್ರಮಗಳಿಗೆ ಜನಸ್ಪಂದನೆ ಹೇಗಿದೆ?

ತೆರೆದ ಬಾಹುಗಳಿಂದ ಸ್ವಾಗತಿಸಿ, ಇದ್ದ ನಾಕು ಕಾಸಲ್ಲಿ ಒಂದನ್ನು ಸಮಾವೇಶಕ್ಕೆ ಕೊಟ್ಟು, ಸೋದರಿತ್ವದ ಚೆಲುವು ಅರಿತುಕೊಂಡೆವೆಂದವರೂ ಇದ್ದಾರೆ. ಸ್ತ್ರೀವಾದವೆಂದರೆ ಮೂಗುಮುರಿಯುವವರೂ ಎದುರಾಗಿದ್ದಾರೆ. ಸ್ತ್ರೀವಾದವೆಂದರೆ ಸ್ತ್ರೀಪುರುಷರಿಬ್ಬರೂ ಜೊತೆಗೂಡಿ ಸಮಾನತೆ ಹಾಗೂ ವಿಮೋಚನೆಗಾಗಿ ನಡೆಸುವ ಅವಿರತ ಪ್ರಯತ್ನ.

ಮಹಿಳಾ ಸಬಲೀಕರಣದ ದಾರಿಯಲ್ಲಿ ಅಂದುಕೊಂಡ ಗುರಿಸಾಧನೆ ಆಗಿದೆಯೇ?

ಸಹನೆ, ಶಾಂತಿ, ತ್ಯಾಗ, ಕ್ಷಮೆಗಳಂಥ ಗುಣಗಳ ಹೇರಿಕೆಯಡಿ ಮಹಿಳೆಗೆ ಹಿಂಸೆಯನ್ನು ಸಹಿಸಿಕೊಳ್ಳುವುದು ಹಾಗೂ ತನ್ನನ್ನು ತಾನು ಹಿಂಸಿಸಿಕೊಳ್ಳುವುದು ರೂಢಿಯಾಗಿದೆ. ಸ್ವಯಂ ಹಿಂಸೆಯಿಂದ ಬಿಡುಗಡೆ ಹೊಂದುವ; ತನ್ನ ಪರಿಸ್ಥಿತಿಗೆ ಕಾರಣಗಳನ್ನರಿಯುವ, ತನ್ನಂತಹ ಇತರರನ್ನು ಗುರುತಿಸುವ ಅರಿವು ಮೂಡಿದರಷ್ಟೆ ಆತ್ಮಗೌರವದ, ಘನತೆಯ ಬದುಕು ಸಾಧ್ಯವಾಗುವುದು. ಅದೇ ಮಹಿಳಾ ಸಬಲೀಕರಣ. ಸಬಲೀಕರಣ ಮುಟ್ಟುವ ಗುರಿಯಲ್ಲ, ವಿಸ್ತಾರಗೊಳ್ಳುವ ನಿರಂತರ ಪ್ರಕ್ರಿಯೆ. ಆಸ್ಫೋಟದಂತೆ ಅದು ಸಂಭವಿಸುವಂಥದ್ದಲ್ಲ, ಬದಲು ದೀಪದಂತೆ ಉರಿಯಬೇಕಾದ ನಿರಂತರ ಪ್ರಕ್ರಿಯೆ.



(ಟಿ.ಎಲ್ ರೇಖಾಂಬ ಒಕ್ಕೂಟದ ಸಕ್ರಿಯ ಕಾರ್ಯಕರ್ತೆಯರಲ್ಲೊಬ್ಬರು)

ಗಾರ್ಮೆಂಟ್ಸ್ ಕೈಗಾರಿಕಾ ಲೋಕದ ಕೆಲ ನಿಷ್ಠುರ ಸತ್ಯಗಳು





ಜಾಗತೀಕರಣ ತಂದ ಮಾರುಕಟ್ಟೆ ಸಮೃದ್ಧಿಗಳಲ್ಲಿ ವಸ್ತ್ರಸಮೃದ್ಧಿಯೂ ಒಂದು. ಭಾರತ ಇಂದು ಸಿದ್ಧ ಉಡುಪುಗಳ ತಯಾರಿಕೆಯಲ್ಲಿ ಮುಂಚೂಣಿಯಲ್ಲಿರುವ ದೇಶಗಳಲ್ಲಿ ಒಂದು. ಹಾಗಾಗಿಯೇ ಈ ದೇಶದ, ವಿಶೇಷವಾಗಿ ಈ ರಾಜ್ಯದ ಎಲ್ಲ ಪ್ರಮುಖ ಕೇಂದ್ರಗಳೂ 'ಗಾರ್ಮೆಂಟ್' ಕೈಗಾರಿಕಾ ಕೇಂದ್ರಗಳಾಗಿವೆ. ಇವು ಸ್ಥಳೀಯ ಮಹಿಳಾ ಸಮುದಾಯದ ದುಡಿಯುವ ಕೈಗಳಿಗೆ ಕೆಲಸ ಒದಗಿಸಿವೆಯಾದರೂ, ಈ ಉದ್ಯಮದ ಲಾಭಾಂಶ ಮಾತ್ರ ಇದನ್ನು ನಿಯಂತ್ರಸುತ್ತಿರುವ ಅಂತಾರಾಷ್ಟ್ರೀಯ ಬ್ರ್ಯಾಂಡ್‌ಗಳ ಕಂಪನಿ ಮಾಲೀಕರಿಗೆ ಮತ್ತು ಅವರಿಗೆ ಮಧ್ಯವರ್ತಿಗಳಾಗಿರುವ ಸ್ಥಳೀಯ ಉದ್ಯಮಪತಿಗಳ ಕೈ ಸೇರುತ್ತಿದೆ. ಈ ಅನ್ಯಾಯ ಮತ್ತು ಶೋಷಣೆಗಳ ವಿರುದ್ಧ ಮಹಿಳಾ ಕಾರ್ಮಿಕರನ್ನು ಸಂಘಟಿಸಿ ಅಗತ್ಯ ಕನಿಷ್ಠ ಭದ್ರತೆ ಮತ್ತು ಸೌಲಭ್ಯಗಳಿಗೆ ಹೋರಾಟ ನಡೆಸಿರುವ ಕಾರ್ಮಿಕ ಸಂಘವೊಂದರ ಅಧ್ಯಕ್ಷೆ ಆರ್. ಪ್ರತಿಭಾ ಇಲ್ಲಿ ಈ ವೃತ್ತಿರಂಗವನ್ನು ಓದುಗರಿಗೆ ಪರಿಚಯ ಮಾಡಿಕೊಟ್ಟಿದ್ದಾರೆ–ಸಂ.



ದಕ್ಷಿಣ ಏಷ್ಯಾ ರಾಷ್ಟ್ರಗಳಲ್ಲಿ ಗಾರ್ಮೆಂಟ್ಸ್ ಉದ್ಯಮ ಬೆಳೆದು ಬಂದರೀತಿಗೂ, ಜಾಗತೀಕರಣಕ್ಕೂ ನೇರ ಸಂಬಂಧವಿದೆ. ಬಂಡವಾಳದ ಹರಿವು, ಉತ್ಪಾದನೆಯ ವಿಕೇಂದ್ರೀಕರಣ, ಲಾಭಕೋರತನ, ಹೆಸರಾಂತ ಬ್ರಾಂಡ್‌ಗಳು, ಅಭಿವೃದ್ಧಿಶೀಲ ರಾಷ್ಟ್ರಗಳು, ಅವುಗಳ ಆರ್ಥಿಕ ನೀತಿಗಳು, ಕಡಿಮೆ ಕೂಲಿ, ಹೆಚ್ಚು ಶ್ರಮ, ಅಗಣಿತ ಲಾಭ, ಮಾರುಕಟ್ಟೆಯ ಪೈಪೋಟಿ ಹೀಗೇ ಜಾಗತೀಕರಣದಎಲ್ಲ ಆಯಾಮಗಳನ್ನು ಹೊಂದಿರುವ ದಕ್ಷಿಣ ಏಷ್ಯಾ ರಾಷ್ಟ್ರಗಳಲ್ಲಿ ಈ ಉದ್ಯಮ ಪ್ರಾರಂಭವಾಗಿ, ೬೦ ರ ದಶಕದ ಉತ್ತರ ಭಾಗದಲ್ಲಿ ವಿಸ್ತಾರಗೊಳ್ಳುವುದರೊಂದಿಗೆ ಅತಿ ಹೆಚ್ಚು ಪಲ್ಲಟಗಳನ್ನು ಕಂಡು ಇಂದು ಬೃಹತ್ತಾಗಿ ಬೆಳೆದು ನಿಂತಿದೆ.

ಜಾಗತೀಕರಣದ ಪ್ರಭಾವ ಪರೋಕ್ಷವಾಗಿ ಅಭಿವೃದ್ಧಿ ಶೀಲ ರಾಷ್ಟ್ರಗಳ ಮಹಿಳಾ ಕಾರ್ಮಿಕರ ಮೇಲೆ ಆಗಿದ್ದನ್ನು ನಾವು ಗಾರ್ಮೆಂಟ್ಸ್‌ನ ಹಿನ್ನೆಲೆಯಲ್ಲಿ ಸ್ಪಷ್ಟವಾಗಿ ಕಾಣಬಹುದು. ಭಾರತದಂತಹ ಕೃಷಿ ಪ್ರಧಾನ ದೇಶದಲ್ಲಿ ಕೃಷಿ ಬಿಕ್ಕಟ್ಟು, ಗುಡಿ ಕೈಗಾರಿಕೆಯ ನಾಶದ ಫಲವಾಗಿ ಮಹಿಳೆಯರನ್ನೂ ಒಳಗೊಂಡು ಉದ್ಯೋಗ ಅರಸಿ ನಗರ ಪ್ರದೇಶಕ್ಕೆ ವಲಸೆ ಹೋಗುವುದು; ಸರ್ಕಾರದ ಆರ್ಥಿಕ ನೀತಿಗಳ ಫಲವಾಗಿ ಸಾರ್ವಜನಿಕ ಉದ್ದಿಮೆಗಳು ಅವಸಾನಗೊಂಡು, ಅಸಂಘಟಿತ ವಲಯ ವಿಸ್ತಾರಗೊಂಡಿದ್ದು ಇವುಗಳಲ್ಲಿ ಮಹಿಳೆಯರೇ ಹೆಚ್ಚಾಗಿ ಕೆಲಸ ಮಾಡುವಂತಾಗಿದ್ದು, ಹೀಗೇ ಒಂದಕ್ಕೊಂದು ಸಂಬಂಧ ಎದ್ದುಕಾಣುತ್ತದೆ.

ಗ್ಯಾಪ್, ಎಚ್&ಎಮ್, ನೈಕಿ, ಅಡಿಡಾಸ್, ವಾಲ್‌ಮಾರ್ಟ್, ಸಿ&ಎ, ಎಮ್&ಎಸ್‌ಗಳಂತಹ ಪ್ರತಿಷ್ಠಿತ ಬ್ರಾಂಡ್‌ಗಳು ತಮ್ಮ ಉತ್ಪಾದನೆಗಾಗಿ ಈ ದೇಶಗಳ ಬಡಕಾರ್ಮಿಕರ ಶ್ರಮವನ್ನೇ ಅವಲಂಬಿಸಿದೆ. ವಿದೇಶಗಳಲ್ಲಿ ಮಾರಲಾಗುವ ಈ ಬ್ರಾಂಡ್‌ಗಳ ಬಟ್ಟೆಗಳನ್ನು ತೊಡುವ ಮಂದಿಗೆ ಕಾಣುವುದು ಪ್ರತಿಷ್ಠಿತ ಬ್ರಾಂಡ್‌ನ ಲೇಬಲ್ ಮಾತ್ರ ಮತ್ತು ಅವರು ಸಾವಿರಾರು ರೂಪಾಯಿ ಕೊಡುವುದೂ ಸಹ ಆ ಹೆಸರಿಗೆ ಮಾತ್ರ ಆದರೆ ಆ ಬಟ್ಟೆಯನ್ನು ಹೊಲೆದ 'ರತ್ನಮ್ಮ, ರೂಪಾ, ಶಾಂತಾ'ಳಂತಹ ಬಡ ಮಹಿಳಾ ಕಾರ್ಮಿಕರು ಎಂದಿಗೂ ಅಗೋಚರವಾಗಿ ಉಳಿದು, ಕೇವಲ ಅತ್ಯಲ್ಪ ಕೂಲಿ ಪಡೆದು ಕಷ್ಟದ ಜೀವನ ನಡೆಸುತ್ತಿದ್ದಾರೆ.

'ಗ್ಲೋಬಲ್ ಸಪ್ಲೈ ಚೈನ್' ಅಡಿಯಲ್ಲಿ ಪ್ರಪಂಚವನ್ನೆಲ್ಲ ಒಂದುಗೂಡಿಸಿರುವ ಗಾರ್ಮೆಂಟ್ಸ್ ಉದ್ಯಮದಲ್ಲಿ ದುಡಿಯುತ್ತಿರುವ ಕಾರ್ಮಿಕರು ಕಟ್ಟಕಡೆಯ ಫಲಾನುಭವಿಗಳು. ಏನೇನೂ ಶ್ರಮ ಹಾಕದೆ ಕೇವಲ ಹೆಸರಿನ ಬಲದ ಮೇಲೆ ಕೋಟಿ ಕೋಟಿ ಲಾಭ ಬಾಚಿಕೊಳ್ಳುತ್ತಿರುವ ಅಂತರರಾಷ್ಟ್ರೀಯ ಬ್ರಾಂಡ್‌ಗಳು ಮೊದಲ ಫಲಾನುಭವಿಗಳಾದರೆ, ಬಂಡವಾಳ ಹಾಕಿ ಕಾರ್ಖಾನೆ ನಡೆಸುವ ಮಾಲೀಕರು ಎರಡನೆಯ ಫಲಾನುಭವಿಗಳು. ಮಾರುಕಟ್ಟೆಯಲ್ಲಿ ಏನೇ ಏರುಪೇರಾದರೂ ಇವರಿಬ್ಬರೂ ತಮಗೆ ಸಿಗಬೇಕಾದ ಲಾಭವನ್ನು ಎಲ್ಲಿಯೂ ಕಡಿಮೆ ಮಾಡಿಕೊಳ್ಳಲು ಇಚ್ಛಿಸುವುದಿಲ್ಲ. ಅದರ ನೇರ ಪ್ರಭಾವ ಬೆವರು ಸುರಿಸಿ ದುಡಿಯುವ ಕಾರ್ಮಿಕರ ಮೇಲೆಯೇ. ಈ ಕಾರ್ಮಿಕರು ದಿನಪೂರ್ತಿ ಒಂದುಕ್ಷಣ ಬಿಡುವಿಲ್ಲದೆ ಕೆಲಸ ಮಾಡಿದರೂ ಸಹ ಅದು ಯಾವುದೋ ಉಡುಪಿನ ಒಂದು ತುಂಡುಗೆಲಸ ಮಾತ್ರವೇ. ತಾನು ಹೊಲೆದ ತುಂಡು ಕಡೆಗೆ ಯಾವ ಆಕಾರ ತಾಳುತ್ತದೆ ಎಂದು ತಿಳಿಯದೆ, ತಾವು ಏನನ್ನೋ ತಯಾರಿಸಿದ್ದೇವೆ ಎಂಬ ಆತ್ಮತೃಪ್ತಿಯೂ ಸಿಗದೆ, ಈ ಮಹಿಳೆಯರು ಅಶಾಂತಿಗೊಳಗಾಗುತ್ತಿದ್ದಾರೆ, ಅವರೊಳಗೊಂದು ಅಸಹನೆ ಹುಟ್ಟುತ್ತಿದೆ. ಜಾಗತೀಕರಣದ ಮುಖ್ಯಲಕ್ಷಣವಾದ ಲಾಭಕೋರತನ ಮತ್ತು ಉತ್ಪಾದನಾ ವಿಕೇಂದ್ರೀಕರಣಗಳು ಕಾರ್ಮಿಕರಲ್ಲಿ ಅಸಹನೆ ಅಶಾಂತಿ ಹುಟ್ಟಲು ಕಾರಣವಾಗಿದೆ.

ಭಾರತದಲ್ಲಿ ಸುಮಾರು ೩೫ ಲಕ್ಷದಿಂದ ೪೦ ಲಕ್ಷದ ಸಂಖ್ಯೆಯಲ್ಲಿ ಗಾರ್ಮೆಂಟ್ಸ್ ಕಾರ್ಮಿಕರಿದ್ದಾರೆ. ಕರ್ನಾಟಕದಲ್ಲಿ ಬೆಂಗಳೂರು, ಮೈಸೂರು, ಮಂಡ್ಯ, ರಾಮನಗರ, ಕೋಲಾರ, ತುಮಕೂರು, ಹಾಸನ, ಶಿವಮೊಗ್ಗ, ಹಾವೇರಿ ಮುಂತಾದ ಜಿಲ್ಲೆಗಳಲ್ಲಿ ಗಾರ್ಮೆಂಟ್ಸ್ ಉದ್ಯಮ ನೆಲೆಗೊಂಡಿದೆ. ಸರ್ಕಾರಗಳು ಎಂದಿಗೂ ಬಂಡವಳಿಗರ ಪರ, ಅದಕ್ಕಾಗಿಯೇ ಅವರನ್ನು ಓಲೈಸಲು ಉಚಿತ ಭೂಮಿ, ವಿದ್ಯುತ್, ನೀರನ್ನು ಕೊಟ್ಟು, ಕನಿಷ್ಠ ವೇತನದ ಏರಿಕೆಯಲ್ಲಿಯೂ ವಿಳಂಬ ಮಾಡುತ್ತಾ ಧನ್ಯಭಾವವನ್ನು ಅನುಭವಿಸುತ್ತವೆ. ಆದರೆ ಈ ನೆಲದ ಬಡ ಹೆಣ್ಣುಮಕ್ಕಳ ಮೇಲೆ ಅವರು ನಡೆಸುವ ವಿವಿಧ ರೀತಿಯ ದೌರ್ಜನ್ಯಗಳಿಗೆ, ಅಳಲುಗಳಿಗೆ ಜಾಣಕುರುಡು, ಜಾಣಕಿವುಡು ಪ್ರದರ್ಶಿಸುತ್ತದೆ.

ಈ ಹೊತ್ತಿಗೂ ಈ ಕಾರ್ಮಿಕರಿಗೆ ಸಿಗುತ್ತಿರುವುದು ಸರ್ಕಾರ ನಿಗದಿ ಪಡಿಸಿದ ಕನಿಷ್ಠ ವೇತನ ಮಾತ್ರ, ಅದೂ ಕೇವಲ ೭೫೦೦ ದಿಂದ ೮೦೦೦ ದಷ್ಟು. ಸರ್ಕಾರ ತಮಗೆ ಗೌರವದಿಂದ ಬದುಕುವಷ್ಟು ಕನಿಷ್ಠ ವೇತನವನ್ನು ನಿಗದಿಪಡಿಸಬೇಕೆಂದು ಈ ಮಹಿಳಾ ಕಾರ್ಮಿಕರು ಗಾರ್ಮೆಂಟ್ ಅಂಡ್ ಟೆಕ್ಸ್‌ಟೈಲ್ ವರ್ಕರ್ಸ್ ಯೂನಿಯನ್ (GATWU) ಅಡಿಯಲ್ಲಿ ಸಂಘಟಿತರಾಗಿ ಕಳೆದ ೧೦ ವರ್ಷದಿಂದಲೂ ಹೋರಾಡುತ್ತಿದ್ದಾರೆ. ಪರಿಣಾಮವಾಗಿ ೨೦೧೪ ರಲ್ಲಿ ಒಂದೇ ಬಾರಿಗೆ ದಿನಕ್ಕೆ ರೂ. ೧೭೦ ರಿಂದ ರೂ. ೨೨೦ ಕ್ಕೆ ರಷ್ಟು ವೇತನ ಏರಿಕೆಯಾಗಿದ್ದು ಇವರ ಹೋರಾಟದ ಶಕ್ತಿಗೊಂದು ಉದಾಹರಣೆ.

ಕಡಿಮೆ ವೇತನದ ಜೊತೆಗೆ, ಸಾಮರ್ಥ್ಯಕ್ಕಿಂತ ಹೆಚ್ಚು ನಿಗದಿಯಾಗುವ ಪ್ರೊಡಕ್ಷನ್ ಟಾರ್ಗೆಟ್, ಅದರ ಒತ್ತಡ, ಮೇಲಾಧಿಕಾರಿಗಳ ಕಿರುಕುಳ, ದೌರ್ಜನ್ಯ, ಅವಮಾನ ಕೆಲಸದ ಅಭದ್ರತೆ, ಅಸುರಕ್ಷಿತ ಕೆಲಸದ ವಾತಾವರಣ ಹೀಗೇ ಹಲವಾರು ತೊಂದರೆಗಳನ್ನು ಮಹಿಳೆಯರು ಎದುರಿಸುತ್ತಿದ್ದಾರೆ. ಮನೆ ಮತ್ತು ಕಾರ್ಖಾನೆ ಎರಡೂ ಕಡೆ ದಿನಕ್ಕೆ ೧೬ ಗಂಟೆ ದುಡಿಯುವ ಈ ಮಹಿಳೆಯರ ಆರೋಗ್ಯದ ಪರಿಸ್ಥಿತಿಯೂ ಸಹ ಆತಂಕಕಾರಿಯಾಗಿಯೇ ಇದೆ. ಉತ್ತಮ ಆರೋಗ್ಯಕ್ಕಾಗಿ ವೈದ್ಯರು ಸೂಚಿಸುವ ಪೌಷ್ಠಿಕ ಆಹಾರ, ಹಾಲು, ಹಣ್ಣುಗಳನ್ನು ಕೊಂಡು ತಿನ್ನಲು ಬರುವಅಲ್ಪ ವೇತನದಲ್ಲಿ ಹೇಗೆ ತಾನೆ ಸಾಧ್ಯ?

ಗಾರ್ಮೆಂಟ್ಸ್ ಉದ್ಯಮಕ್ಕೆ ಕಾರ್ಖಾನೆಗಳ ಕಾಯಿದೆ, ಮತ್ತು ಕಾರ್ಮಿಕ ಕಾಯಿದೆಯಗಳೂ ಅನ್ವಯವಾದರೂ, ಕಾರ್ಖಾನೆಗಳಲ್ಲಿ ಅದನ್ನು ಉಲ್ಲಂಘಿಸುವುದೇ ಹೆಚ್ಚು.ಮಕ್ಕಳನ್ನು ನೋಡಿಕೊಳ್ಳುವ ಬಾಲವಾಡಿ, ಕ್ಯಾಂಟೀನ್‌ಗಳಂತಹ ಬಹುತೇಕ ಸೌಲಭ್ಯಗಳು ಕೇವಲ ತೋರಿಕೆಗೆ ಇರುತ್ತವೆ, ವಾಸ್ತವದಲ್ಲಿ ಕೆಲಸ ಮಾಡುತ್ತಿಲ್ಲ. ಕೆಲವಂತೂ ಪುಸ್ತಕದಲ್ಲಿ ಮಾತ್ರವೇ ಇರುತ್ತವೆ.

(೧೫ನೇ ಪುಟದಲ್ಲಿ ಮುಂದುವರೆದಿದೆ



ವಚನಕಾರ್ತಿಯರಲ್ಲಿ ಸ್ತ್ರೀತ್ವದ ಶೋಧ : ಅನುಭವ ಹಾಗೂ ಅರಿವಿನ ಸ್ಫೋಟ

-ಡಾ. ಗೀತಾ ವಸಂತ



ಹನ್ನೆರಡನೆಯ ಶತಮಾನದ ಶರಣ ಚಳುವಳಿ ಸೃಷ್ಟಿಸಿದ ವಚನ ಚಳುವಳಿ ಕನ್ನಡ ಸಾಹಿತ್ಯಲೋಕದ ಅಮರ ಭಂಡಾರ ಹೇಗೋ ಕನ್ನಡ ಸಮಾಜದಲ್ಲಿ ಅದು ಸೃಷ್ಟಿಸಿದ ತಳಮಳ ಮತ್ತು ಯುಗಪಲ್ಲಟದ ಅಲೆಗಳು ಈಗಲೂ ನಮ್ಮನ್ನು ತಾಕಿ ಎಚ್ಚರಿಸುತ್ತಿವೆ, ವಿಶೇಷವಾಗಿ ಶರಣೆಯರು ಬರೆದ ವಚನಗಳು ಸ್ತ್ರೀತ್ವದ ಶೋಧನೆಯ ವಿಷಯದಲ್ಲಿ ತೆರೆದಿಟ್ಟ ಸತ್ಯಗಳು ಈ ಆಧುನಿಕ ಕಾಲದ ಸ್ತ್ರೀ ಚಳುವಳಿಯನ್ನೂ ಬೆರಗುಗೊಳಿಬಲ್ಲವಾಗಿವೆ. ಈ ಬೆರಗನ್ನು ವಿವರಿಸುವ ಪ್ರಯತ್ನವೊಂದು ಈ ಲೇಖನದಲ್ಲಿದೆ.-ಸಂ..

ವಚನ ಚಳವಳಿ, ವಚನ ಸಾಹಿತ್ಯ ಎಂದೆಲ್ಲ ನಾವು ಗ್ರಹಿಸುತ್ತ ಬಂದಿರುವ ಹನ್ನೆರಡನೇ ಶತಮಾನದ ಈ ಅಭಿವ್ಯಕ್ತಿ ಕ್ರಮದ ಹಿಂದಿರುವುದು ಅಗಾಧವಾದ ಹಾಗೂ ಅದಮ್ಯವಾದ ಶೋಧನೆಯ ಹಂಬಲ. ಅದು ಸ್ವ-ಶೋಧ, ಅನುಭವಗಳ ಶೋಧ, ಅರಿಯುವ ದಾರಿಗಳ ಶೋಧ, ಮನ ಹಾಗೂ ಇಂದ್ರಿಯಗಳ ನಡುವಿನ ಸಾಮರಸ್ಯದ ಶೋಧ... ಹೀಗೆ ವಚನವೆಂಬುದೇ ಶೋಧನೆಯ ಹಾದಿ. ವಚನವೆಂಬುದು ಅರಿವಿನ ಮಾತುಕತೆ. ಅರಿವನ್ನು ಹಂಚಿಕೊಂಡು ಬೆಳೆಯುವುದು ಈ ಮಾತುಕತೆಯ ಉದ್ದೇಶವಾದುದರಿಂದ ಇದು ಇಡೀ ಸಮುದಾಯದ ಅನುಭವಗಳನ್ನು ತೆಕ್ಕೈಸಿಕೊಂಡಿತು. ಭಾರತೀಯ ಆಧ್ಯಾತ್ಮಿಕ ಪರಂಪರೆಯ ಕೊಂಡಿಯಾದ ವಚನಗಳು ಸಾಮಾಜಿಕ ಸ್ವರೂಪವನ್ನು ಪಡೆದಿದ್ದು ಹೀಗೆ. ಎಲ್ಲ ಭಾರತೀಯ ಆಧ್ಯಾತ್ಮಿಕ ಧಾರೆಗಳು 'ಸ್ವ ಶೋಧ' ದ ಬಗ್ಗೆ ಮಾತನಾಡುತ್ತವೆ. ತನ್ನನ್ನು ತಾನು ಅರಿಯುವ ಮೂಲಕವೇ ವಿಶ್ವವನ್ನು ಅರಿಯಲು ಸಾಧ್ಯ, ತಾನು ವಿಶ್ವದಿಂದ ಬೇರೆಯಲ್ಲ ಎಂಬ ಅನುಭವ ಹೊಂದಲು ಸಾಧ್ಯವೆಂಬುದು ಅವುಗಳ ತಿಳಿವು. ತನ್ನನ್ನು ತಾನು ಅರಿಯುವ ದಾರಿ ಅಷ್ಟು ಸುಲಭದ್ದಲ್ಲ, ಆಳವಾಗಿ ಬೇರೂರಿದ ಪೂರ್ವಗ್ರಹಗಳನ್ನು ಒಡೆದು ಹೊರಬರುವ ಸಂಕಟದ ಕ್ರಿಯೆಗೆ ವ್ಯಕ್ತಿ ತನ್ನನ್ನು ಒಡ್ಡಿಕೊಳ್ಳಬೇಕಾಗುತ್ತದೆ. ನಿಜವನ್ನು ಕಾಣಬೇಕಾದರೆ ಯಾವುದು ನಿಜವಲ್ಲ ಎಂಬುದನ್ನು ಅರಿಯುವದು ಮುಖ್ಯವಾಗುತ್ತದೆ. ಕುದುರೆ ತನ್ನ ಮೈಯನ್ನ ಝಾಡಿಸಿಕೊಳ್ಳುವ ರೂಪಕ ಇಲ್ಲಿ ನೆನಪಾಗುತ್ತದೆ, ಅದು ತನ್ನ ಮೈ ಝಾಡಿಸಿದಾಗ ಅಂಟಿಕೊಂಡ ಧೂಳಿನ ಕಣಗಳೆಲ್ಲ ಬಿಟ್ಟುಹೋಗಿ ಶುದ್ದವಾಗುತ್ತದೆ. ಹಾಗೆಯೇ ಮನುಷ್ಯ ತನ್ನನ್ನು ಸುತ್ತುವರೆದ ಬಾಹ್ಯ ರಚನೆಗಳನ್ನು ಕೊಡವಿಕೊಂಡಾಗ ಮಾತ್ರ ತನ್ನ ಅರಿವು ಹಾಗೂ ಅನುಭವಗಳೆರಡನ್ನೂ ಪ್ರಾಮಾಣಿಕವಾಗಿ ಕಾಣಬಲ್ಲ. ಧರ್ಮ, ಜಾತಿ, ವರ್ಣ, ಲಿಂಗ ಇವೆಲ್ಲವೂ ನಮಗಂಟಿಕೊಂಡ ಬಾಹ್ಯರಚನೆಗಳು ಅಷ್ಟೆ. ಇವುಗಳನ್ನು ಬಿಡಿಸಿಕೊಂಡಾಗ ಮಾತ್ರ ನಿಜಶೋಧ ಸಾಧ್ಯ. ಇಂಥಹ ರಚನೆಗಳ ಹಿಂದಿರುವ ಪೂರ್ವಗ್ರಹಗಳನ್ನು ಭಾಷೆಯು ಸ್ಥಿರೀಕರಿಸುತ್ತದೆ. ಆದ್ದರಿಂದ ಅರಿವಿನ ಅಭಿವ್ಯಕ್ತಿ ಕೂಡ ಭಿನ್ನವೇ ಆಗಿರಬೇಕಾಗುತ್ತದೆ. 'ಅರ್ಥ'ದ ಹಂಗು ಮೀರದೆ ಶೋಧ ಸಾಧ್ಯವಿಲ್ಲ. ವಚನಾನುಭವವು ಅರ್ಥವನ್ನು ಫಿಕ್ಸ್ ಮಾಡುವ ರಚನೆಯಲ್ಲ. ಅದು ಸದಾ ಹರಿಯುತ್ತಿರುವ ಅರಿವು. ಅದರ ಜೊತೆಗೆ ನಾವೂ ಚಲಿಸುತ್ತ ಹೋಗುವುದು ಅನಿವಾರ್ಯ. ಅಂಥಹ ಚಲನಶೀಲ ಸಾಧ್ಯತೆಯಿಂದಾಗಿಯೇ ವಚನಗಳು ಕ್ರಾಂತಿಕಾರಕವೆನಿಸುವುದು.

ಸಿದ್ಧಮಾದರಿಗಳನ್ನು ನಿರಚಿಸುವ ಕ್ರಾಂತಿಕಾರಕ ಒಳನೋಟವೊಂದು ವಚನಕಾರರಿಗೆ ದಿಢೀರ್ ಎಂದು ಏಕಾಏಕಿ ಸಿದ್ಧಿಸಿತೆ? ಎಂದು ಪ್ರಶ್ನಿಸಿಕೊಂಡಾಗ ಆ ಕಾಲ, ಸಂದರ್ಭದ ಹಲವು ಒಳಸುಳಿಗಳು ಬಿಚ್ಚಿಕೊಳ್ಳುತ್ತವೆ. ಬೌದ್ಧ ಚಿಂತನಾ ವಿನ್ಯಾಸದ ಮುಂದುವರಿಕೆಯಂತೆ ವಚನಗಳು ಅಲ್ಲಲ್ಲಿ ಕಾಣಿಸುತ್ತವೆ. ಸಹಜ, ಬಯಲು, ನಿರಾಳ ಎಂಬ ಪರಿಭಾಷೆಗಳನ್ನು ಈ ಹಿನ್ನೆಲೆಯಲ್ಲಿ ಗಮನಿಸಬಹುದು. ಅದು ಶೈವ ತಾಂತ್ರಿಕ ಪಂಥಗಳು ಬಲಗೊಂಡಿದ್ದ ಕಾಲ. ಬೌದ್ಧ ವಜ್ರಯಾನ ಹಾಗೂ ಶೈವ ಧಾರೆಗಳ ಮಿಲನದಿಂದ ನಾಥಪಂಥದಂತಹ ಸಾಧನಾಪಂಥವು ಅಸ್ತಿತ್ವಪಡೆದುಕೊಂಡಿತು. ಈ ಪಂಥಗಳು ಯೌಗಿಕ ಸಾಧನೆಯ ಮೂಲಕ ಪ್ರತಿವ್ಯಕ್ತಿಯೂ ಮುಕ್ತನಾಗುವುದು ಸಾಧ್ಯವೆಂಬುದನ್ನು ಕಾಣಿಸಿದವು. ಜೀವಕ್ಕೆ ಶಿವನಾಗುವ ಚೈತನ್ಯ ಇದೆಯೆಂದು ಅರಿತಮೇಲೆ ಆ ಜೀವವು ಜಾತಿ, ಧರ್ಮ, ಲಿಂಗಗಳ ಹಂಗಿಗೆ ತುತ್ತಾಗುವುದಿಲ್ಲ ಎಂಬುದು ಈ ಎಲ್ಲ ಸಾಧನಾಪಂಥಗಳ ಪ್ರಾಥಮಿಕ ತಿಳುವಳಿಕೆ. ಎಲ್ಲ ರಚನೆಗಳಿಂದ ಹೊರತಾದ ವ್ಯಕ್ತಿ ಚೈತನ್ಯವೇ ಈ ಪಂಥಗಳಿಗೆ ಮುಖ್ಯ. ಅದು ತೀರ ಅಂಚಿನಲ್ಲಿರುವ ವ್ಯಕ್ತಿಯೊಳಗೂ, ಅಂಚಿನಂಚಿನ ಹೆಣ್ಣಿನೊಳಗೂ ಅದನ್ನು ಶೋಧಿಸುತ್ತದೆ. ದೇಹಾನುಭವವನ್ನು ನಿರಾಕರಿಸದೇ, ಕಾಯಕವನ್ನು ಕಡೆಗಣಿಸದೇ, ಲೌಕಿಕವನ್ನೇ ದೈವಿಕಗೊಳಿಸುವ ಕ್ರಿಯಾಶೀಲ ಪರಿವರ್ತನೆಯ ಯುಗಧರ್ಮ ಹಾಗೂ ಮನೋಧರ್ಮವನ್ನು ವಚನಗಳಲ್ಲಿ ಕಾಣುತ್ತೇವೆ. ಇಷ್ಟೆಲ್ಲ ಪೀಠಿಕೆ ಏಕೆಂದರೆ, ವಚನಗಾರ್ತಿಯರೆಲ್ಲ ಈ ಯುಗಧರ್ಮವನ್ನು ಹೀರಿಕೊಂಡು ಬೆಳೆದವರು. ಗುರುಪರಂಪರೆಯ ಕೊಂಡಿಯಾದವರು. ಅನುಭವ ಶೋಧದ ನಿಜನೆಲೆಯಲ್ಲಿ ನಡೆದ ಅನುಭಾವಿಗಳು. ಅಕ್ಕಮಹಾದೇವಿಯು 'ಯೋಗಿನಿ' ಎನಿಸಿಕೊಂಡವಳು. ಯೌಗಿಕ ಸಾಧನಾ ಪಂಥಗಳ ಸಹಚರ್ಯದಲ್ಲಿದ್ದವಳು. ಮೂಲಾಧಾರದ ಶಾಂಭವಿ ಶಕ್ತಿ ಷಟ್ಚಕ್ರ ಜಾಗೃತಿಯಮೂಲಕ ಸಹಸ್ರಾರದ ಶಿವನನ್ನು ಸೇರುವ ಯೌಗಿಕ ಮಿಲನದ ಸಂಕೇತ ಈ ಪಂಥಗಳಲ್ಲಿದೆ. ತಾಂತ್ರಿಕಾಚರಣೆಗಳಲ್ಲಿ ಯೋಗಿ-ಯೋಗಿನಿಯರು ಪ್ರತ್ಯಕ್ಷವಾಗಿ ಪಾಲ್ಗೊಳ್ಳುತ್ತಿದ್ದ ಉಲ್ಲೇಖಗಳು ತಾಂತ್ರಿಕ ಪಠ್ಯಗಳಲ್ಲಿ ಕಾಣುತ್ತವೆ. ಈ ತಾಂತ್ರಿಕ ಪಂಥಗಳು ದೇಹಾನುಭವವನ್ನು ನಿರಾಕರಿಸುವುದಿಲ್ಲ.

ಅಕ್ಕಮಹಾದೇವಿಯ ಅನೇಕ ವಚನಗಳಲ್ಲಿ ನೇರವಾಗಿಯೂ, ರೂಪಕಗಳಲ್ಲಿಯೂ ಇಂಥ ಯೌಗಿಕ ಅನುಭವ ಹಾಗೂ ಪರಿಭಾಷೆಗಳು ದಟ್ಟವಾಗಿ ಕಾಣಿಸುತ್ತವೆ. ಕೂಟದ ದೈಹಿಕ ವಿವರಗಳು ತುಂಬ ಸಹಜವಾಗಿ ಆದರೆ ತೀವ್ರವಾಗಿ ಅಭಿವ್ಯಕ್ತಿಪಡೆದದ್ದು ಗಮನಾರ್ಹ ಸಂಗತಿ. ಅಕ್ಕಮಹಾದೇವಿ ವಚನಗಳಲ್ಲಿ ಪದೇ ಪದೇ ಉಕ್ತವಾಗುವ ಕದಳಿ, ಕದಳಿವನವು ಶ್ರೀಶೈಲದಲ್ಲಿದೆ (ಅದು ದೇಹರೂಪಕವೂ ಹೌದು) ಶ್ರೀಶೈಲವು ಅಂದು ತಾಂತ್ರಿಕ ಸಾಧನಾ ಪಂಥಗಳಾಡೊಂಬಲವಾಗಿತ್ತು. ವಿವಿಧ ಪ್ರಯೋಗಗಳು ಅಲ್ಲಿ ನಡೆಯುತ್ತಿದ್ದವು. ಸಿದ್ಧ, ನಾಥ, ದತ್ತ, ಆರೂಢ ಹೀಗೆ ಅನೇಕ ಅವಧೂತ ಪಂಥಗಳ ಯೋಗಿಗಳು ಅಲ್ಲಿ ಸಮಾವೇಶಗೊಳ್ಳುತ್ತಿದ್ದರು. ಅಕ್ಕಮಹಾದೇವಿ ಕೂಡ ಅಲ್ಲಿ ಐಕ್ಯಳಾಗಿರುವುದು ಅವಳ ಸಾಧನಾ ಮುಖವನ್ನು ಸೂಚಿಸುತ್ತದೆ. "ಯೋಗಿಗೆ ಯೋಗಿಣಿಯಾಗಿ ಕಾಡಿತ್ತು ಮಾಯೆ" ಎಂಬಲ್ಲಿ ಅವಳು ಇದನ್ನೆಲ್ಲ ಲಕ್ಷ್ಯದಲ್ಲಿರಿಸಿಕೊಂಡಿದ್ದಾಳೆಂದು ಡಾ. ಎನ್ ಎಸ್ ತಾರಾನಾಥರು ಅಭಿಪ್ರಾಯಪಡುತ್ತಾರೆ. ಅಕ್ಕನ ರಚನೆಗಳ ಮೇಲೆ ಬೌದ್ಧ ಯೋಗಿಣಿಯರ ಪ್ರಭಾವ ಇರುವುದನ್ನು ಅವರು ಸಮರ್ಥಿಸುತ್ತಾರೆ. "ಶಿಕಾರಿಪುರದ ಎರಡು ಶಾಸನಗಳು ಇಲ್ಲಿ ಬೌದ್ಧ ಧರ್ಮವಿದ್ದುದನ್ನು ತಿಳಿಸುತ್ತವೆ. (ಎಕ VII ೧೯೦೨ ಶಿಕಾರಿಪುರ, ಶಾ.ಸಂ೧೪೬.೧೭೪) ಈ ಊರಿನಲ್ಲಿ ನಾಗಿಯಕ್ಕ ಎಂಬಾಕೆ ಬೌದ್ಧರ ತಾರಾಭಗವತಿ ವಿಗ್ರಹ ಮಾಡಿಸಿದಳು. ರೂಪಭಟ್ಟಯ್ಯ ವಿವಿಧ ದೇವತೆಗಳಿಗೆ ದಾನ ನೀಡಿದ್ದಲ್ಲದೆ "ಖಂಡಸ್ಫುಟಿತ ನವಕರ್ಮಕ್ಕಂ ಯೋಗಿನಿಯರ ಕುಸುಳಿಯರ ಸನ್ಯಾಸಿಗಳ ಆಹಾರದಾನಕ್ಕಂ" (ಎಕ VII ೧೯೦೨ ಶಿಕಾರಿ, ಶಾ.ಸಂ ೧೨೦) ದತ್ತಿ ಬಿಟ್ಟಿದ್ದಾನೆ. ಬೌದ್ಧ ವಿಹಾರದಲ್ಲಿ ಯೋಗಿನಿಯರಿದ್ದುದನ್ನು ಇದು ದೃಢಗೊಳಿಸುತ್ತದೆ. ಇಂಥ ಬೌದ್ಧಯೋಗಿನಿಯರನ್ನೇ ಅಕ್ಕ ತನ್ನ ವಚನದಲ್ಲಿ ಉಲ್ಲೇಖಿಸಿರುವುದು. ಅಕ್ಕಮಹಾದೇವಿಯಿ ಇದ್ದ ಉಡುತಡಿಯಿಂದ ಬಳ್ಳಿಗಾವೆಯಿಂದ ಮೂರು ಮೈಲು ದೂರದಲ್ಲಿದೆ. ಹೀಗಾಗಿ ಅಕ್ಕ ತನ್ನ ಊರಿನ ಸಮೀಪದಲ್ಲೇ ಇಂಥವರನ್ನು ಕಂಡು ಉಲ್ಲೇಖಿಸಿರುವ ಸಾಧ್ಯತೆ ಹೆಚ್ಚು. ಒಟ್ಟಿನಲ್ಲಿ ಯೋಗಿ-ಯೋಗಿಣಿ ಎಂದರೆ ಬೌದ್ಧಧರ್ಮದ ತಾಂತ್ರಿಕ ಆಚರಣೆಯ ಮಾರ್ಗ ಹಿಡಿದ ಪುರುಷ-ಸ್ತ್ರೀ ಎನ್ನಬಹುದು" (ಡಾ.ಎನ್.ಎಸ್ ತಾರಾನಾಥ, ಅರುಹು ಕುರುಹು ಸಂ.೮.೨೦೧೬.ಪು.೨೨) ಈ ಎಲ್ಲ ವಿವರಗಳು ಸ್ತ್ರೀತ್ವದ ಶೋಧದ ಮೈಲುಗಲ್ಲುಗಳಾಗಿ ವಚನಗಾರ್ತಿಯರಲ್ಲಿ ಮೂಡಿದ ದೇಹಮೀಮಾಂಸೆಯ ಆಕರಗಳಾಗಿ ಕಾಣಿಸುತ್ತವೆ.

ವಚನಗಳಲ್ಲಿ ಸ್ತ್ರೀತ್ವವನ್ನು ಶೋಧಿಸುವ ಮುನ್ನ ಈ ಅಮೂರ್ತ 'ಸ್ತ್ರೀತ್ವ' ಎಂದರೇನು? ಎಂಬ ಪ್ರಶ್ನೆ ಎದುರಾಗುತ್ತದೆ ಇದನ್ನು ಎರಡು ನೆಲೆಯಲ್ಲಿ ಗಮನಿಸಬಹುದು.

೧. ಸ್ತ್ರೀತ್ವ ಅಥವಾ ಹೆಣ್ತನದ ಶೋಧ

೨. ಹೆಣ್ತನದ ಮೂಲಕ ಲೋಕದ ಶೋಧ

ಹೆಣ್ಣುತನ ಎಂಬುದನ್ನು ನೇರವಾಗಿ ಗುರುತಿಸುವುದು ಅವಳ 'ದೇಹದ ಮೂಲಕ. ಅವಳಿಗೊಂದು ವಿಶಿಷ್ಟ ಜೈವಿಕತೆಯಿದೆ. ಈ ವಿಶಿಷ್ಟತೆಯಿಂದಾಗಿ ಅವಳದ್ದೇ ಆದ ಭಿನ್ನ ಅನುಭವಗಳಿವೆ. ಈ ಅನುಭವಗಳಿಂದಲೇ ಅವಳ ಅರಿವು ಮೂಡುತ್ತದೆ. ಆದ್ದರಿಂದ ಅವಳ ಅರಿವು ಕೂಡ ಬೇರೆಯೇ. ಅವಳು ಲೋಕವನ್ನು ತನ್ನ ಸಂವೇದನೆಯೊಳಗೆ ಭಾವಿಸುವ ಪರಿ, ಅದನ್ನು ಗ್ರಹಿಸುವ ರೀತಿಗಳು ವಿಭಿನ್ನವೆ. ಮೊಲೆ, ಗರ್ಭಕೋಶ, ಯೋನಿಗಳನ್ನು ಹೊತ್ತ ಅವಳ ಹೆಣ್ಣುದೇಹ ಅದಕ್ಕೆ ಸಂಬಂಧಿಸಿದ ಮುಟ್ಟು, ಬಸಿರು, ತಾಯ್ತನ ಮುಂತಾದ ಸ್ಥಿತಿಗಳು ಅವಳ ಲೋಕವನ್ನು ವಿಶಿಷ್ಟವಾಗಿಸಿವೆ. ಅವಳ ಲೈಂಗಿಕತೆ ಹಾಗೂ ಮನೋಲೈಂಗಿಕ ಪರಿಕಲ್ಪನೆಗಳು ಅವಳಿಗೆ ಹೊಸ ಲೋಕಮೀಮಾಂಸೆಯೊಂದನ್ನು ದಯಪಾಲಿಸುತ್ತವೆ. ಇನ್ನು ಸಾಮಾಜಿಕ, ಸಾಂಸ್ಕೃತಿಕ ರಚನೆಯಾಗಿ ಸ್ತ್ರೀತ್ವದ ಸ್ವರೂಪವೇನು? ರಾಜಕೀಯ, ಆರ್ಥಿಕ ಸಂರಚನೆಗಳಲ್ಲಿ ಅವಳ ಪಾತ್ರವೇನು? ಎಂಬ ಪ್ರಶ್ನೆಗಳಿಗೆ ಉತ್ತರಿಸಿಕೊಳ್ಳುತ್ತ ನಡೆದರೆ ಸ್ತ್ರೀತ್ವದ ಇನ್ನೊಂದು ಆಯಾಮವು ಎದುರಾಗುತ್ತದೆ. ಇದು 'ರೂಪಗೊಂಡ' ಹೆಣ್ತನದ ಸ್ವರೂಪ. ಪತಿವ್ರತೆ, ದೇವಿ, ಗೃಹಿಣಿ, ಮಾತೆ, ಅಬಲೆ, ಚಂಚಲೆ ಇವಾವುದೂ ಅವಳ ಸ್ವಶೋಧದಲ್ಲಿ ಮೂಡಿದ ಬಿಂಬಗಳು ಅಲ್ಲವೇ ಅಲ್ಲ. ಅವು ಪಿತೃಪ್ರಧಾನ ಮನೋಭಾವವು ರೂಪಿಸಿದ ಮಾದರಿ ಅಷ್ಟೇ. ಅದು ಹೆಣ್ಣನ್ನು ಗೃಹಿಣಿ/ಸೂಳೆ, ದೇವಿ/ರಾಕ್ಷಸಿ, ಪತಿವ್ರತೆ/ಪತಿತೆ ಇಂಥ ದ್ವಂದ್ವ ಮಾದರಿಗಳಲ್ಲಿ ಗ್ರಹಿಸುತ್ತದೆ. ಈ ಎಲ್ಲ ಗ್ರಹಿಕೆಗಳ ಆಚೆ ತನ್ನನ್ನು ಕಾಣುವ ಪ್ರಯತ್ನವೇ ಸ್ತ್ರೀತ್ವದ ಶೋಧ. ಹಾಗಾದರೆ ವಚನಗಾರ್ತಿಯರು ಮಾಡಿಕೊಂಡ ಸ್ವಶೋಧ ಎಂತಹುದು? ಅದು ಹೆಣ್ಣು-ಗಂಡೆಂಬ ಉಭಯ ಸ್ಥಿತಿಯನ್ನು ಅಳಿದ ನೆಲೆಯ ಶೋಧವೇ.? ಅವರು ಆಗ ಬಯಸುವುದು ಅಲ್ಲಮನ ಬಯಲೇ? ಹೆಣ್ಣು ದೇಹವನ್ನು 'ಮಿತಿ'ಯೆಂದು ಭಾವಿಸಿ ಅವರು ಅದನ್ನು ದಾಟಲು ಬಯಸುವುದೇ ಆದರೆ ಅಲ್ಲಿ ಸ್ತ್ರೀತ್ವದ ಶೋಧವೆಂಬುದೇ ಇರಲಾರದು. ಅವರು ಹೆಣ್ತನವನ್ನು ನಿರಾಕರಿಸಲು ಹೊರಟಿದ್ದಾರೆಯೇ? ಅಥವಾ ಅದನ್ನು ಸ್ವೀಕರಿಸಲು ಹೊರಟಿದ್ದಾರೆಯೇ? ಎಂಬ ದ್ವಂದ್ವಗಳು ಎದುರಾಗುತ್ತವೆ. ದೇಹಭಾವವನ್ನು ಮೀರಬೇಕೆಂಬುದು ಸಾಧನೆಯ ಮಾತು. ಆದರೆ ದೇಹಾನುಭವಗಳನ್ನೇ ಶೋಧಿಸದೇ ಅದನ್ನು ಮೀರುವುದು ಅಮೂರ್ತ ಸಂಗತಿಯಾಗಿ ಬಿಡುತ್ತದೆ. ಇಂದಿಗೂ ದೇಹದ ಕುರಿತು ಅದರ ಸುಖದ ಕುರಿತು ಅದರ ತಳಮಳ, ತಪನೆ, ತಹತಹಗಳ ಕುರಿತು ಅವಳು ಮಾತನಾಡಲಾರಳು, ತನ್ನ ಬತ್ತಲೆಯನ್ನು ತಾನೇ ಸರಿಯಾಗಿ ನೋಡಿಕೊಳ್ಳಲಾರಳು. ಇದಕ್ಕೆಲ್ಲ 'ಲಜ್ಜೆ' ಯೆಂಬ ಮುಸುಕನ್ನು ಆಕೆ ಹೊದ್ದಿದ್ದಾಳೆ. ತನ್ನ ಇಂದ್ರಿಯಾನುಭವಕ್ಕೆ ಸೂಕ್ಷ್ಮಗೊಂಡ ಹೆಣ್ಣಿನ ರಚನೆಗಳು ಸಿದ್ಧ ಭಾಷೆಗೆ ಅದರ ಅಭಿವ್ಯಕ್ತಿಗೆ ಆಘಾತವನ್ನುಂಟು ಮಾಡುವಂಥದ್ದು. 'ಶಬ್ದಲಜ್ಜೆ' ಯುಳ್ಳ ಸಮಾಜಕ್ಕೆ ಲಜ್ಜೆಯಳಿದ ಮಾತುಗಳು ದಿಗ್ಭ್ರಮೆ ಹುಟ್ಟಿಸುತ್ತವೆ. ಲಜ್ಜೆಗೆಡುವುದು ಎಂದರೆ ಅನೈತಿಕತೆ ಎಂದು ಸಮೀಕರಿಸುವ 'ಸಭ್ಯ' ಸಮಾಜದ ಗ್ರಹಿಕೆಗಳಿಗೆ ಅಕ್ಕಮಹಾದೇವಿಯ ರಚನೆಗಳು ಹೇಗೆ ತೋರಬಹುದು? ಹೆಣ್ಣುದೇಹವನ್ನು ನೈತಿಕ-ಅನೈತಿಕವೆಂಬ ಮಾನದಂಡಗಳ ಹೊರಗಿಟ್ಟು ಸಂಭ್ರಮಿಸುವ ಆಕೆಯ ನಿಲುವು ಸ್ತ್ರೀತ್ವವನ್ನು 'ಕಾಣು'ವಿಕೆಯ ನೆಲೆಯಲ್ಲಿ ಬಹುಮುಖ್ಯ ಮೈಲಿಗಲ್ಲು. ದೈಹಿಕ ಮಿಲನದ ಸಣ್ಣ-ಸಣ್ಣ ವಿವರಗಳನ್ನು ನಿರೂಪಿಸುವ ಅಕ್ಕನ ವಚನ ಅದಕ್ಕೊಂದು ಉದಾಹರಣೆ:

ಲೇಸು ಹಾಸು, ನೋಟದಾಭರಣ, ಅಲಿಂಗನ ವಸ್ತು
ಚುಂಬನವಾರೋಗಣೆ, ಲಲ್ಲೆವಾತು ತಾಂಬೂಲ
ಲವಲವಿಕೆಯ ಅನುಲೇಪವೆನಗೆ
ಚೆನ್ನಮಲ್ಲಿಕಾರ್ಜುನನ ಕೂಟ ಪರಮಸುಖವದ್ದಾ.

(ಪು.೧೦೭, ಶಿವಶರಣೆಯರ ವಚನ ಸಂಪುಟ)

ಈ ಕೂಟ ಹಾಗೂ ಅದರ ಸುಖ ಅಲೌಕಿಕ ಮಿಲನದ ರೂಪಕವಾಗಿದೆ, 'ಶಿವ-ಶಕ್ತಿ' ಯರ ಕೂಡುವಿಕೆಯ ಯೌಗಿಕ ಸಂಜ್ಞೆಯಾಗಿದೆ ಎಂಬ ಅರಿವಿನಲ್ಲೂ ಅಕ್ಕ ದೈಹಿಕ ಕ್ರಿಯೆಯ ಹಸಿ-ಹಸಿ ವಿವರಗಳನ್ನು ಅಭಿವ್ಯಕ್ತಿಸುವ ಪರಿಯನ್ನು ಅಲ್ಲಗಳೆಯುವಂತಿಲ್ಲ. ದೇಹಾನುಭವವನ್ನು ನಿರಾಕರಿಸದೇ, ಲೌಕಿಕ-ಅಲೌಕಿಕಗಳನ್ನು ದ್ವಂದ್ವ ನೆಲೆಯಲ್ಲಿ ನಿಲ್ಲಿಸದೇ ಏಕಾನುಭವದಲ್ಲಿ ಕಾಣುವ, ಕಂಡರಿಸುವ ಪರಿ ಇಲ್ಲಿ ಬೆರಗು ಮೂಡಿಸುತ್ತದೆ.

ಅಕ್ಕಾ ಕೇಳವ್ವಾ ನಾನೊಂದು ಕನಸ ಕಂಡೆ
ಚಿಕ್ಕ ಚಿಕ್ಕ ಕೆಂಜೆಡೆಗಳ ಸುಲಿಪಲ್ಲ ಗೊರವನು
ಬೆಂದೆನ್ನ ನರೆದ ನೋಡವ್ವಾ
ಆತನನಪ್ಪಿಕೊಂಡು ತಳವೆಳಗಾದೆನು
ಚೆನ್ನಮಲ್ಲಿಕಾರ್ಜುನನ ಕಂಡು ಕಣ್ದೆರೆದೆನು

.(ಪು.೧೪೪ ಶಿವಶರಣೆಯರ ವಚನ ಸಂಪುಟ)

ಹೆಣ್ಣು ತನ್ನ ದೇಹವನ್ನು ಅರಿಯುವುದು ಹಾಗೂ ಅಭಿವ್ಯಕ್ತಿಸುವುದು ದೇಹಸ್ಫೋಟದ ಅಭಿವ್ಯಕ್ತಿಯಾಗಿ ಕಾಣುತ್ತದೆ. (ದೇಹಸ್ಫೋಟ.ಎಂಬ ಪರಿಭಾಷೆಯನ್ನು ಡಾ.ಎಂ.ಎಸ್ ಆಶಾದೇವಿಯವರು ಬಳಸುತ್ತಾರೆ.) ಇಂಥ ಅನೇಕ ಅಭಿವ್ಯಕ್ತಿಗಳು ವಚನಗಾರ್ತಿಯರಲ್ಲಿ ದೊರೆಯುತ್ತವೆ. ಇಂಥ ಅನುಭವಗಳನ್ನು ಜ್ಞಾನವಾಗಿ ಕಟ್ಟುವಾಗ/ರೂಪಾಂತರಿಸುವಾಗ ಅದೊಂದು ಹೊಸ ಮೀಮಾಂಸೆಯೇ ಆಗಲು ಸಾಧ್ಯವಿದೆ. ಅರಿವು ಎಂಬುದು ಪುರುಷನ ಕಾಣ್ಕೆ ಮಾತ್ರವಾಗಿ ಅಪೂರ್ಣವಾಗಿರುವಾಗ ಈ ಸ್ತ್ರೀದೇಹಮೀಮಾಂಸೆ ಅದನ್ನು ಪೂರ್ಣಗೊಳಿಸುತ್ತದೆ. ಆದ್ದರಿಂದ ಇದು ಹೊಸ ಅರಿವಿನ ಸ್ಫೋಟವೂ ಹೌದು.

ಸ್ತ್ರೀ ತನಗೆ ವಿಧಿಸಿದ ಪಾತ್ರವೇ ತಾನಾಗಿ ಪ್ರಕಟವಾಗುವುದು ಒಂದು ಬಗೆಯ ವಿಸ್ಮೃತಿಯ ಸ್ಥಿತಿ. ಈ ವಿಸ್ಮೃತಿಯ ಚಿಪ್ಪೊಡೆದು ಬರುವಂತಹ ವಚನಗಳು ಆಸಕ್ತಿದಾಯವಾಗಿವೆ. ಈಗಾಗಲೇ ಚರ್ಚಿಸಿರುವಂತೆ ಮಡದಿ, ಸೂಳೆ, ಪತಿವ್ರತೆ ಮಾದರಿಗಳು ಕೂಡ ಗಂಡು ಹೆಣ್ಣಿನ ಸಂಬಂಧ ವಿನ್ಯಾಸದಿಂದಲೇ ರೂಪುಗೊಂಡಿರುವಂಥವು. ಗಂಡು-ಹೆಣ್ಣಿನ ಸಂಬಂಧವು ಸಹಜವಾದುದು. ಅದು ಪ್ರಾಕೃತಿಕವಾದುದು. ಯಾವಾಗ ಆ ಸಂಬಂಧವು 'ಮದುವೆ' ಎಂಬ 'ವ್ಯವಸ್ಥೆ' ಯಾಗುತ್ತದೆಯೋ ಅಲ್ಲಿ ಅಧಿಕಾರ ಸಂಬಂಧವು ಏರ್ಪಡುತ್ತದೆ. ಮೇಲೆ-ಕೆಳಗೆ, ಪ್ರಧಾನ-ಅಧೀನ, ಶ್ರೇಷ್ಠ-ಕನಿಷ್ಠಗಳು ಅಂಟಿಕೊಳ್ಳುತ್ತವೆ ಅಕ್ಕಮಹಾದೇವಿಯ ಅನೇಕ ವಚನಗಳು ಈ ಮದುವೆಯ ಬಗ್ಗೆ ಮಾತನಾಡುತ್ತವೆ.

ಜಲದ ಮಂಟಪದ ಮೇಲೆ ಉರಿಯ ಚಪ್ಪರವನಿಕ್ಕಿ
ಅಲಿಕಲ್ಲ ಹಸೆಯ ಹಾಸಿ, ಕಾಲಿಲ್ಲದ ಹೆಂಡತಿಗೆ
ತಲೆಯಿಲ್ಲದ ಗಂಡ ಬಂದು ಮದುವೆಯಾದನು
ಎಂದೆಂದೂ ಬಿಡದ ಬಾಳುವೆಗೆ ಕೊಟ್ಟರೆನ್ನ
ಚೆನ್ನಮಲ್ಲಿಕಾರ್ಜುನನೆಂಬ ಗಂಡಂಗೆನ್ನ ಮದುವೆ ಮಾಡಿದುದು.

ಈ ವಚನದ ಮಿಸ್ಟಿಕ್ ಆದ ಆಯಾಮಗಳನ್ನು ಒಂದು ಕ್ಷಣ ಬದಿಗಿಟ್ಟು ನೋಡಿದರೆ, ಮದುವೆಯ ಅಸಂಗತತೆಯನ್ನು ಲೇವಡಿ ಮಾಡುವ ಗುಣವೊಂದು ಕಾಣಿಸುತ್ತದೆ. ಲೋಕದ ಮದುವೆಗಳೆಲ್ಲ ಮಿತಿಯಾಗಿ, ಬಂಧನವಾಗಿ ಒಳಗಿನ ಚೇತನವನ್ನು ಕಟ್ಟಿಹಾಕುವ ಚೌಕಟ್ಟುಗಳಾಗಿ ವಿಜೃಂಭಿಸುವಾಗ ಇಂಥದೊಂದು ಜೀವ ಸಖ್ಯದ ಅದಮ್ಯ ಹಂಬಲವನ್ನು ಅಕ್ಕಮಹಾದೇವಿ ಇಲ್ಲಿ ಉಸುರುತ್ತಿದ್ದಾಳೆ. ಅಂಥ ಜೀವೈಕ್ಯಕ್ಕಾಗಿ ತಪಿಸುವ ತಪ್ತ ಜೀವದ ಮೊರೆ ಅಕ್ಕಮಹಾದೇವಿಯ ಅನೇಕ ವಚನಗಳಲ್ಲಿ ಕೇಳಿಸುತ್ತದೆ. 'ಈ ಸಾವ ಕೆಡುವ ಗಂಡರನೊಯ್ದು ಒಲೆಯೊಳಗಿಕ್ಕು' ಎಂಬ ಅವಳ ಸಾತ್ವಿಕ ಸಿಟ್ಟು ಈ ಹಿನ್ನೆಲೆಯಲ್ಲಿ ಹುಟ್ಟಿಕೊಂಡಿದೆ.

ಅಕ್ಕಮಹಾದೇವಿ ಬಯಸಿದ ಆಧ್ಯಾತ್ಮಿಕ ಸ್ವಾತಂತ್ರ್ಯಕ್ಕೆ ತನ್ನ ಹೆಣ್ಣುದೇಹ ಅವಳಿಗೆ ಮಿತಿಯೆಂದು ಸೂತಕವೆಂದು ಅನಿಸಲಿಲ್ಲವೆಂಬುದೇ ತುಂಬ ಧನಾತ್ಮಕವಾದ ಅಂಶ.

ಮೊಲೆ ಮೂಡಿ ಬಂದರೆ ಹೆಣ್ಣೆಂಬರು, ಮೀಸೆ ಕಾಸೆ ಬಂದರೆ ಗಂಡೆಂಬರು, ನಡುವೆ ಸುಳಿವಾತ್ಮ ಹೆಣ್ಣು ಅಲ್ಲ ಗಂಡೂ ಅಲ್ಲ ಎಂಬ ದೇವರದಾಸಿಮಯ್ಯನ ಮಾತುಗಳೂ, ಹೆಣ್ಣು ಮಾಯೆಯಲ್ಲ, ಹೊನ್ನು ಮಾಯೆಯಲ್ಲ ಮನದ ಮುಂದಣ ಆಸೆಯೇ ಮಾಯೆ ಎಂಬ ಅಲ್ಲಮನ ನುಡಿಗಳೂ, ಅವಳ ಚೈತನ್ಯವನ್ನು ದೇಹಕ್ಕೆ ಆರೋಪಿಸಿ ಆ ದೇಹವನ್ನು 'ಸೂತಕ' ದ ಮನೆಯಾಗಿಸಿದ ಲಿಂಗಪೂರ್ವಗ್ರಹಗಳನ್ನು ಕಿತ್ತೆಸೆಯಲು ಒಂದು ನೆಲೆಗಟ್ಟನ್ನು ನೀಡಿದ್ದವು. ಆದರೆ ಅಕ್ಕಮಹಾದೇವಿ ಇನ್ನೂ ಮುಂದುವರೆದು ಆ ಚೈತನ್ಯ ದೇಹದಿಂದ ಬೇರೆಯಲ್ಲ ಎಂದು ದೇಹಮೂಲ ಅನುಭವಗಳ ನೆಲೆಯೊಂದನ್ನು ಕಟ್ಟಿಕೊಡುತ್ತಾಳೆ. ಅವಳ ಒಳಗೊಂದು ಜ್ವಲಿಸುವ ಹೆಣ್ತನವಿದೆ ಆದರೆ ಅದಕ್ಕೊಂದು ಆಯ್ಕೆ ಇದೆ. ಮದುವೆಯೊಳಗೆ ಅವಳ ಅಸೀಮ ಆಯ್ಕೆಯ ಸಾಧ್ಯತೆಗಳು ಮುಗಿದು ಹೋಗುವುದನ್ನು ಆಕೆ ವಿರೋಧಿಸುತ್ತಿದ್ದಾಳೆ. ಚೆನ್ನಮಲ್ಲಿಕಾರ್ಜುನನೆಂಬ ಆತ್ಮ ಸಖ ಅವಳ ಆಯ್ಕೆ ಆದ್ದರಿಂದ ಮಿಕ್ಕ ಗಂಡರು ಅವಳನ್ನು ಆಳುವದು ಅವಳಿಗೆ ಸಮ್ಮತವಿಲ್ಲ. ಈ ಸ್ವಾತಂತ್ರ್ಯವನ್ನು ಶೋಧಿಸಲು ಹೆಣ್ಣಿಗೆ ಮೊದಲು ದಾಟಬೇಕಾಗುವುದೇ ಕುಟುಂಬ ಎಂಬ ಹೊಸ್ತಿಲು. ಕುಟುಂಬದ ಅಧಿಕಾರ ಸಂಬಂಧವು ಬಂಧನವನ್ನೊಡ್ಡುತ್ತದೆ. (ಮುಂದುವರೆಯುವುದು)



(ತುಮಕೂರಿನ ವಿಶ್ವವಿದ್ಯಾಲಯ ಕಾಲೇಜಿನಲ್ಲಿ ಕನ್ನಡ ಸಾಹಿತ್ಯ ಬೋಧಿಸುವ ಲೇಖಕಿ ಗೀತಾ ವಸಂತ ಕವಯತ್ರಿ ಹಾಗೂ ವಿಮರ್ಶಕಿಯೂ ಹೌದು)

ಪ್ರತಿಭಾ ಕಾವ್ಯ : ಅಸೀಮ, ಅನಂತ, ಅನಿರ್ಬಂಧಿತ

–ಡಾ. ಸಬಿತಾ ಬನ್ನಾಡಿ



ಆಧುನಿಕ ಕನ್ನಡ ಕಾವ್ಯದ ವಿಶಿಷ್ಟ ಧ್ವನಿಯಾದ ಪ್ರತಿಭಾ ನಂದಕುಮಾರ್ ತಮ್ಮ ಕಾವ್ಯದುದ್ದಕ್ಕೂ ಶೋಧಿಸಿರುವುದು ಆಧುನಿಕ ಬದುಕಿನ ಮಧ್ಯದ ಹೆಣ್ಣಿನ ಇಕ್ಕಟ್ಟು-ಬಿಕ್ಕಟ್ಟು-ತಳಮಳಗಳನ್ನೇ. ಆದರೆ ನಮ್ಮ ಸಾಂಪ್ರದಾಯಿಕ ಸ್ತ್ರೀವಾದದಂತೆ ಈ ಶೋಧನೆಯಲ್ಲಿ ಅವರು ಗಂಡನ್ನು ಏಕಾಕಿಯಾಗಿ ವಿಚಾರಣೆಯ ಕಟಕಟೆಯಲ್ಲಿ ನಿಲ್ಲಿಸದಷ್ಟು ಸಂಕೀರ್ಣವಾಗಿ ಹಾಗೂ ಅಷ್ಟೇ ತೀವ್ರವಾಗಿ, ಆದರೆ ಬದುಕಿನ ಚೆಲುವಿನ ತಾಣಗಳಿಗೆ ಕುರುಡಾಗದೆ, ಆ ಮೂಲಕ ಕಾವ್ಯದ ಸ್ಪಂದನಶೀಲತೆಗೆ ಎರವಾಗದಂತೆ ತಮ್ಮ ಕಾವ್ಯವನ್ನು ಕಟ್ಟುತ್ತಾ ಬಂದಿದ್ದಾರೆ. ಇದರ ಒಂದು ವಿವೇಚನೆ ಇಲ್ಲಿದೆ-ಸಂ.

ಆಧುನಿಕ ಕನ್ನಡ ಕಾವ್ಯಲೋಕಕ್ಕೆ ಪ್ರತಿಭಾ ಪ್ರವೇಶಿಸುವ ಹೊತ್ತಿನಲ್ಲಿ ಹೆಣ್ಣುಲೋಕ ಕಣ್ಣುತೆರೆದಿತ್ತು. ಕೆಲವು ಪ್ರಶ್ನೆಗಳನ್ನು ಮೆಲ್ಲಮೆಲ್ಲನೆ ಕೇಳ ತೊಡಗಿತ್ತು. ಮೈತುಂಬಾ ಸೆರಗು ಹೊದ್ದು ಒಂದು ವಿನೀತ ಭಾವದಲ್ಲಿ, ಸಂಕೋಚದಲ್ಲಿ ಬೆಂಚಿನ ತುದಿಯಲ್ಲಿ ಜಾಗ ಮಾಡಿಕೊಂಡು ಹೆಂಗಳೆಯರು ಕುಳಿತು ಕೊಳ್ಳಹೊರಟಾಗ, ಕುದುರೆ ಜುಟ್ಟಿನ, ಚಿಮ್ಮುನಡಿಗೆಯ ಹುಡುಗಿಯೊಬ್ಬಳು ಛಂಗನೆ ಹಾರಿಕೊಂಡು ಬಂದರೆ ಒಮ್ಮೆಗೇ ಹೇಗೆ ಎಲ್ಲರೂ ಅವಳೆಡೆಗೆ ತಿರುಗಿ ನೋಡುತ್ತಾರೋ ಹಾಗೆ ಆಧುನಿಕ ಮಹಿಳಾ ಕಾವ್ಯಕ್ಕೆ ಪ್ರವೇಶ ಧಕ್ಕಿಸಿಕೊಂಡವರು ಪ್ರತಿಭಾ. ಅಚ್ಚರಿ, ಇಂದಿಗೂ ನಮ್ಮ ಕಾಲೇಜು ಹುಡುಗ ಹುಡುಗಿಯರಿಗೆ ಪ್ರತಿಭಾರ 'ನಾವು ಹುಡುಗಿಯರೇ ಹೀಗೆ' ಕವಿತೆ ಅಚ್ಚುಮೆಚ್ಚು. ಈ ಎಸ್.ಎಮ್.ಎಸ್, ವಾಟ್ಸಪ್ ಕಾಲದಲ್ಲೂ. ಅವರ ಕಣ್ಣುಗಳಲ್ಲೊಂದು ತುಂಟ ನಗು ಮೂಡಿ ಕಚಗುಳಿಯಿಡುವುದನ್ನು ನಾನು ಪ್ರತಿಬಾರಿ ಅವರೆದುರು ಕವಿತೆ ಓದಿದಾಗಲೂ ಇಣುಕಿ ನೋಡಿದ್ದೇನೆ.

ಇಂತಹ ಒಂದು ಸಂಚಲನ ಖಂಡಿತ ಪ್ರತಿ ಕಾಲದ ಅಗತ್ಯ. ಜಡ್ಡುಗಟ್ಟಿದ ಮೌಲ್ಯವ್ಯವಸ್ಥೆ ತಾನೇ ಏದುಸಿರು ಬಿಡುತ್ತಿರುವಾಗಲೂ ಅದನ್ನೇ ಗಟ್ಟಿಯಾಗಿ ಹಿಡಿದುಕೊಂಡಂತೆ, ಈ ಜಗದ ಆಗುಹೋಗುಗಳು ಶಾಸ್ತ್ರ, ಪುರಾಣ, ಸಂಸ್ಕೃತಿ, ದೇಶ ಇನ್ನೂ ಎಂತೆಂತದೋ ಹೆಸರುಗಳಲ್ಲಿ ನಮ್ಮ ಕತ್ತ ಸುತ್ತಿನ ಹೆಣಿಗೆಗಳಾಗಿರುತ್ತವೆ.

ಪ್ರತಿಭಾ ಮೊದಲ ಕವಿತೆ ಸಂಚಲನ ಹುಟ್ಟಿಸಿದ್ದು ಎರಡು ಕಾರಣಗಳಿಗಿರಬಹುದು. ಒಂದು, ಹೆಣ್ಣು ತನ್ನ ಅಂತರಾಳವನ್ನು ಬಿಡುಬೀಸಾಗಿ ತೆರೆದು ತೋರಿದ್ದಕ್ಕೆ. ಇನ್ನೊಂದು, ನೋಡಿ, ಹೆಂಗಸರಿಗೇ ತಾವು ಕಳೆದುಕೊಂಡಿದ್ದು ಏನೆಂದು ಗೊತ್ತಿಲ್ಲ ಎಂದು ಬೆರಳು ತೋರುವುದಕ್ಕೆ. ಆದರೆ ಪ್ರತಿಭಾ ದಾರಿ ಯಾವುದೆಂದರೆ, ಈ ಎರಡನ್ನೂ ತಿಳಿಯುವುದು. ಹೆಣ್ಣಿನ ಮನಸ್ಸು ಮೀನಿನ ಹೆಜ್ಜೆ ಯಾರಿಗೂ ತಿಳಿಯುವುದಿಲ್ಲ ಎಂದು ಅದುವರೆಗೂ ಗಂಡುಲೋಕ ಹೇಳಿಕೊಂಡು ತಿರುಗಾಡುತ್ತಿರುವಾಗ ಇವರು ಇದ್ದಕ್ಕಿದ್ದಂತೆ 'ನೋಡಿ ನಾವಿರುವುದೇ ಹೀಗೆ' ಎಂದು ಹೇಳಿದ್ದು ಹೆಣ್ಣಿನ ಇರುವಿಕೆಯಲ್ಲಾದ ಒಂದು ಪಲ್ಲಟದ ಮೂರ್ತರೂಪವೂ ಹೌದು. ಆದರೆ, ಹಾಗೆ ಹೇಳುವುದರ ಮೂಲಕ ಆ ಕವಿತೆ ಸೂಚಿಸುವುದು – ಹೆಣ್ಣು ಇರಬೇಕಾದ ದಾರಿ ಇದಲ್ಲ, ಬಿಡಿಸಿಕೋ ಎಂಬುದನ್ನು. ಜೊತೆ ಜೊತೆಗೇ ಅದು ಒಡೆಯುವುದು 'ಸದ್ಗೃಹಿಣಿ'ಯ ಕಟೆದು ನಿಲ್ಲಿಸಿದ ಶಿಲ್ಪವನ್ನು.

ಪ್ರತಿಭಾರ ಸಮಗ್ರ ಕಾವ್ಯದ ನಡೆಯನ್ನು ಗಮನಿಸುವಾಗ ಅವರು ಹೀಗೆ ಕಟೆದು ನಿಲ್ಲಿಸಿದ ಶಿಲ್ಪವನ್ನು ಮರುವಿನ್ಯಾಸ ಮಾಡುತ್ತಲೇ ಹೋಗುವುದನ್ನು ಕಾಣಬಹುದು. ಈ ಮರುವಿನ್ಯಾಸದ ಗುರಿ ಕೇವಲ ಹೆಣ್ಣಲ್ಲ ಎಂಬುದೂ ಗಮನಾರ್ಹ. ಅಲ್ಲಿ ಗಂಡೂ ಬದಲಾಗಲೇ ಬೇಕು. ಬದಲಾಗುವಂತೆ ನಿರಂತರ ಒತ್ತಾಯ ಅಲ್ಲಿದೆ. ಬದಲಾಗುವುದು ಅನಿವಾರ್ಯ ಎಂಬ ಎಚ್ಚರಿಕೆಯೂ ಇದೆ.

ಆಧುನಿಕ ಹೆಣ್ಣು ಎರಡು ಕೆಂಡಗಳ ನಡುವೆ ಬೇಯುವ ವಿಶಿಷ್ಟ ಖಾದ್ಯದ ರೀತಿಯಲ್ಲಿ ಬದುಕು ಎದುರಿಸಿದವಳು, ಎದುರಿಸುತ್ತಿರುವವಳು. ಹೇಗೋ ಅನುಸರಿಸಿಕೊಂಡು ಹೋಗುವ ಮುಗ್ಧತೆ ಕಳೆದುಕೊಂಡ ತಕ್ಷಣ ಅವಳಿಗೆ ಎದುರಾಗುವ ಲೋಕಸತ್ಯಗಳು ಅವಳನ್ನು ನುಂಗಿ ನೀರು ಕುಡಿಯ ಬರುತ್ತವೆ. ಅಲ್ಲಿಯ ತನಕ ಗಂಡಿನ ನೆರಳಾಗಿದ್ದವಳಿಗೆ ಈಗ ಸ್ವಪ್ರಜ್ಞೆ ಮೂಡಿ ತನಗೆ ಇದುವರೆಗೂ ಇದ್ದಿದ್ದು ನೆರಳಲ್ಲ, ಕತ್ತಲು ಎಂಬುದು ಬಯಲಾಗಿ ಬಿಡುತ್ತದೆ. ಎಲ್ಲಿಯ ತನಕ ತಾನು ಏನನ್ನೂ ಪ್ರಶ್ನಿಸಲಿಲ್ಲವೋ ಅಲ್ಲಿಯ ತನಕ ಇದ್ದ ನಿರುಮ್ಮಳತೆ ಈಗ ಸವಾಲಾಗತೊಡಗುತ್ತದೆ. 'ನಿನ್ನಂತೆ ನಾನು' ಎಂಬ ಹೆಣ್ಣಿನ ಮಾತು ಗಂಡಿಗೆ ನಂಜಾಗಿ ಕಾಣುತ್ತದೆ. ಹೀಗಲ್ಲದೇ ಹೋದರೆ 'ನೈನಾ ಸಾಹ್ನಿ' ಹುಟ್ಟಿಕೊಳ್ಳಲು ಸಾಧ್ಯವಿಲ್ಲ. ಅವಳನ್ನು ತಂದೂರಿ ಒಲೆಯಲ್ಲಿ ಬೇಯಿಸಿದ ಅವಳ ಗಂಡನ ನಿರಾಳತೆಯನ್ನು ಪ್ರತಿಭಾ ಅಷ್ಟೇ ನಿರುದ್ವಿಗ್ನ ಶೈಲಿಯಲ್ಲಿ ಬರೆಯುತ್ತಾರೆ. ಇದು 'ನಿನ್ನಂತೆ ನಾನು' ಎಂಬ ಎಲ್ಲ ಹೆಂಗಸರ ಗತಿಯೂ ಆಗಬಹುದಾದ ಕ್ರೂರ ಸ್ಥಿತಿ. ಕೆಲವೊಮ್ಮೆ ಕಾಣುವ ನಿಜದ ಒಲೆ. ಹಲವೊಮ್ಮೆ ಕಾಣದ ಒಲೆ ಅಷ್ಟೇ ವ್ಯತ್ಯಾಸ.

ಪ್ರತಿಭಾ ಆಧುನಿಕ ಹೆಣ್ಣಿನ ಈ ಇಕ್ಕಟ್ಟಿನ ಬಿಕ್ಕಟ್ಟನ್ನು ಮತ್ತೆ ಮತ್ತೆ ತಡವುತ್ತಾರೆ. ಆಕೆಗೆ ಆಧುನಿಕತೆ ಬಿಡುಗಡೆ ತಂದಿತೇ? ಹೊಸ ಉಸಿರು ನೀಡಿತೇ? ಅವಳ ಸಾಧ್ಯತೆಗಳೆಲ್ಲಾ ಅನಾವರಣಗೊಂಡಿತೇ? ಅವಳೀಗ ದುಡಿವ ಮಹಿಳೆ. ಹೊರಲೋಕದಲ್ಲಿ ಸುತ್ತಾಡುತ್ತಿದ್ದಾಳೆ. ಏನಲ್ಲದಿದ್ದರೂ ಗೃಹಿಣಿ ಎಂಬ ಪಟ್ಟ ಇದೆ. ಅವಳು ಅಕ್ಷರ ಬಲ್ಲವಳು. ಆದರೆ ಆಗಿದ್ದೇನು? ಇಲ್ಲೂ ನಿಯಾಮಕರು ಯಾರು? ನಿಯಂತ್ರಕರು ಯಾರು? ಆಧುನಿಕತೆ ಎಂಬುದು ಒಂದು ಕಡೆಯಿಂದ ಹೊಲಿಗೆ ಬಿಡಿಸುತ್ತಾ ಹೋದರೆ ಇನ್ನೊಂದು ಕಡೆಯಿಂದ ಜಿಪ್ ಎಳೆದುಕೊಳ್ಳುತ್ತಾ ಬರುವಂತದು. ಇದು ಹೆಣ್ಣಿನ ವಿಷಯಕ್ಕಷ್ಟೇ ಅಲ್ಲ. ಬದುಕಿನ ಹಲವು ಲಯಗಳಿಗೂ ಈ ಮಾತು ಸಲ್ಲುತ್ತದೆ. ಇದೊಂದು ಎಂತ ಸಂದಿಗ್ಧ ಸ್ಥಿತಿಯೆಂದರೆ ಅತ್ತ ನಿರಾಕರಿಸುವಂತೆಯೂ ಇಲ್ಲ. ಇತ್ತ ಪುರಸ್ಕರಿಸುವಂತೆಯೂ ಇಲ್ಲ. ಈ ಹುದುಲೊಳಗೆ ಸಿಲುಕಿಕೊಳ್ಳುವುದು ಎಷ್ಟೋ ಬಾರಿ ಹೆಣ್ಣಿನ ಆಯ್ಕೆಯೂ ಅಲ್ಲ. ಅವಳು ಭಾವಿಸಿದ್ದು ಎಲ್ಲ ನಿರರ್ಥಕ ಬಂಧನಗಳು ಕಳಚಿಕೊಳ್ಳುತ್ತಾವೆ ಎಂದು. ಆದರೆ, ಕೊನೆಗೆ ಆಗಿದ್ದು ಒಳ ಹೊರಗಿನ ಕತ್ತೆ ದುಡಿತದ ಬಳಿಕ ಬರಿಗೈ ಮಾತ್ರ. ಆಧುನಿಕತೆಯ ಒಂಟಿತನವೂ ಜೊತೆಗೂಡಿ ಅಸಹಾಯಳಾಗುವ ಇನ್ನೊಂದು ಒಳ ಒದೆತವನ್ನೂ ಅವಳೀಗ ಎದುರಿಸಬೇಕು. ಬದಲಾಗಿದ್ದು ಏನು? ಎಂಬ ಪ್ರಶ್ನೆ ಅಲ್ಲಿಯೇ ಉಳಿದಿದೆ.

ಮಾತು ಮಾತಿಗೆ ಹಂಗಿಸಿ
ಮಾತು ಸಾಲದಾದಾಗ
ಛಟೀರನೆ ಕೆನ್ನೆಗೆ ತಟ್ಟುವ
ಗಂಡನ ಷರಟು ಇಸ್ತ್ರಿ ಮಾಡುವ ನನಗೆ ಹೇಳಿದಳು–
ನಿನ್ನ ಜೀನ್ಸು ಪ್ಯಾಂಟು
ಒಯ್ದು ಒಲೆಯೊಳಗಿಕ್ಕು (ಅಜ್ಜಿ)

ಗಂಡಿನ ಬಗೆಗೆ ತೀವ್ರ ಸೆಳೆತ ಇರುವ ಪ್ರತಿಭಾ ಕವಿತೆಯ ನಾಯಕಿ ಈ ಎಲ್ಲ ವೈರುಧ್ಯಗಳ ನಡುವೆಯೂ ಆಸೆ ಬಿಡುವವಳಲ್ಲ. ಅವಳ ಎಂದೂ ಬಗೆಹರಿಯದ ಪ್ರಶ್ನೆಯೆಂದರೆ, ತನಗೆ ವಿಸ್ಮಯವಾಗಿ ಕಾಣುವ ಗಂಡು ಹೆಣ್ಣಿನ ಸಾಂಗತ್ಯದ ವಿಸ್ಮಯವನ್ನು ಸಹಜವಾಗಿ ಅನುಭವಿಸುವುದಿಲ್ಲ ಯಾಕೆ? ಎಂಬುದು. ಪ್ರತಿಭಾರ ಮೂಲ ತಾತ್ವಿಕತೆಯೇ ಈ ಪ್ರಶ್ನೆಯ ಮೇಲೆ ನಿಂತಿದೆ. ಅವರ ಎಲ್ಲ ಕವಿತೆಗಳ ಆಳದಲ್ಲಿ ಈ ಹೆಬ್ಬಯಕೆ ಇದೆ. ಗಂಡು ಹೆಣ್ಣಿನ ಸಹಜ ಸಾಂಗತ್ಯದ ಅದ್ಭುತ ಲೋಕವೊಂದನ್ನು ಕಟ್ಟಿಕೊಳ್ಳುವ ಜಾಗದಲ್ಲಿ ಇದ್ಯಾವ ನರಕದ ಸೃಷ್ಟಿಯಾಗುತ್ತಿದೆ ಎಂಬ ಸಂಕಟ ಅವರನ್ನು ಆಳದಲ್ಲಿ ಸದಾ ಕಲಕಿದಂತಿದೆ. ಬಡತನವನ್ನು ಪ್ರೀತಿಯಲ್ಲಿ ಹಾಡಿ ಮರೆಯುವ ಬೇಂದ್ರೆ, ರಾಜರತ್ನಂ ಒಂದು ಆದರ್ಶ ಸ್ಥಿತಿಯನ್ನು ಕವಿತೆಗಳಲ್ಲಿ ಕಟ್ಟಿಕೊಡುತ್ತಾರೆ. ಪ್ರತಿಭಾ ಹಾಗೆ ಮಾಡುವುದಿಲ್ಲ. ಈ ಆದರ್ಶ ಸ್ಥಿತಿಯು ವಾಸ್ತವವಾಗದೇ ಇರುವುದರ ಹಿಂದಿನ ಕಾರಣಗಳನ್ನು ಅನ್ವೇಷಿಸುವ ಕೆಲಸ ಮಾಡುತ್ತಾರೆ. ಅದು ಕಣ್ಣಿಗೆ ಕಾಣದ ಪಂಜರದ ಸರಳುಗಳು ಎಂಬುದನ್ನು ಕಂಡುಕೊಂಡಿರುವ ಅವರು ಪಂಜರವನೊಲ್ಲದ ನವಿಲಾಗ ಬಯಸುತ್ತಾರೆ. ಪ್ರಕೃತಿ ಸಹಜ ಒಲುಮೆ, ನಲುಮೆಗಳು ಮನುಷ್ಯನಿಗೇಕೆ ಸಾಧ್ಯವಾಗುತ್ತಿಲ್ಲ ಎಂಬ ನೋವು ಅವರದು. "ಅಚ್ಚ ಕೆಂಪು ದಾಸವಾಳ ಬಿಡಿಸು ನನ್ನ ಎದೆಯ ಮೇಲೆ" ಎಂದು ಹಂಬಲಿಸುವ ಕವಿತೆಯ ನಾಯಕಿಗೆ ಎದುರಾಗುವುದು 'ಅವರ' ತನಿಖೆ.

ನಾನು ನರ್ತಿಸದ ನರ್ತನ
ಹಾಡು ಮೂಡಿಸದ ಗಾಯಕಿ

ಆಗಿಲ್ಲದ ಗಾಯಗಳಿಗೆ
ಅದೃಶ್ಯ ಮುಲಾಮು ಹಚ್ಚುವ ದಾದಿ
ಕಂಬಿಗಳಿಲ್ಲದ ಪಂಜರದಲ್ಲಿ ಬಂದಿ
ಹಡೆಯದೆಯೇ ತಾಯಿ

ಗೋಡೆಗಳಿಲ್ಲದ ಮನೆಯಲ್ಲಿ
ಹಾರದ ಹಕ್ಕಿಗಳನ್ನೆಲ್ಲ ಅವನು
ಕಟ್ಟಿ ಹಾಕಿದ್ದಾನೆ. (ಅವರು ಪುರಾವೆಗಳನ್ನು ಕೇಳುತ್ತಿದ್ದಾರೆ)

ಗಂಡು ಹೆಣ್ಣಿನ ನಡುವೆ ಎದ್ದಿರುವ ಈ ಗೋಡೆಗಳು ಮನುಷ್ಯನ ಆಳುವ ಅಭೀಪ್ಸೆಯಿಂದ ಹುಟ್ಟಿದ್ದು. ಇದು ಕೃತಕವಾದುದು. ಹೆಣ್ಣು ಜೊತೆಗಾತಿಯಾಗುವ ಬದಲು ಗುಲಾಮಳೆಂದು ಭಾವಿಸಿದರೆ ಅದನ್ನು ಅವಳು ಅವನಿಗೆ ಅರ್ಥ ಮಾಡಿಸುವ ಮಾರ್ಗವಾದರೂ ಯಾವುದು? ಅವಳ ಪ್ರೀತಿಯ ಭಾಷೆಯೇ ಅವನಿಗೆ ಅರಿವಾಗದಿದ್ದರೆ ಇಬ್ಬರೂ ಕಳೆದುಕೊಳ್ಳುವ ಬದುಕನ್ನು ಧಕ್ಕಿಸಿಕೊಡುವುದು ಹೇಗೆ? "ನನಗೆ ಭಾಷೆಯಿಲ್ಲ/ ನಿನಗೆ ಕಿವಿಯಿಲ್ಲ/ ಮಾತನಾಡುವುದು ಹೇಗೆ? ನನಗೆ ಆಕಾರವಿಲ್ಲ/ ನಿನಗೆ ನೋಟವಿಲ್ಲ/ ಕಾಣಿಸುವುದು ಹೇಗೆ?" ಎಂದು ಆಗಲೂ ಅವಳು ದಾರಿ ಹುಡುಕ ಬಯಸುತ್ತಾಳೆ. ಹತಾಶೆಯಿಂದ ಕೈ ಚೆಲ್ಲುವ ಬದಲು ವ್ಯಂಗ್ಯದ ಮೊನಚಿನಲ್ಲಿ ನಗುತ್ತಾಳೆ.

ತೊಳೆದು ಸಿಪ್ಪೆ ಸುಲಿದು ಕತ್ತರಿಸಿ ಜಜ್ಜಿ ಕುಟ್ಟಿ
ಹುರಿದು ಅರೆದು ರುಬ್ಬಿ ನುರಿದು ಬಾಡಿಸಿ
ಬೇಯಿಸಿ ಹಿಚಿಕಿ ಮಸೆದು ಕೊಚ್ಚಿ ಕಲೆಸಿ
ಗಸಗಸನೆ ಕಡೆದು ಎತ್ತಿ ಹಾಕಿದರೆ ತಟ್ಟೆಗೆ
ರುಚಿರುಚಿ ಅಂತ ತಿನ್ನುತ್ತಾರೆ! (ಅಡಿಗೆ ಮಾಡುತ್ತಿದ್ದೇನೆ –೨)

ಪ್ರತಿಭಾ ಕವಿತೆಯ ಹೆಣ್ಣು ಎಂದಿಗೂ ಹತಾಶಳಾಗುವುದಿಲ್ಲ. ದಿಟ್ಟ ನಡೆ, ನೇರ ಪ್ರಶ್ನೆ, ಬಟಾ ಬಯಲಾಗುವ ಛಾತಿ ಅವಳಿಗೆ ಎಂದೆಂದಿಗೂ ಇದೆ. ಹೆಣ್ಣಿನ ಚೈತನ್ಯದ ಕುರಿತು ಅತೀವ ನಂಬಿಕೆ ಇರುವ ಇವಳ ಮೊದಲ ಪ್ರತಿಭಟನೆಯೇ ಅವಳ ನುಡಿಯನ್ನು ನಿಯಂತ್ರಿಸುವುದರ ಬಗೆಗೆ ಇದೆ. ಇದು ಪ್ರತಿಭಾರ ಕಾವ್ಯದ ವಿಶಿಷ್ಟ ಚೆಲುವಿಗೂ ಕಾರಣವಾಗಿದೆ. ಪ್ರತಿಭಾ ಪ್ರಾಸ ಪ್ರಿಯರಲ್ಲ. ಆದರೆ ಲಯದ ಬಗೆಗೆ ಎಚ್ಚರ ಇರುವವರು. ಹೆಣ್ಣಿನ ಮನೋಲಯ ಮಾತ್ರವಲ್ಲ ಹೆಣ್ಣಿನ ದೇಹಲಯವೂ ಅಷ್ಟೇ ಮಹತ್ವದ್ದು ಎಂಬುದನ್ನು ನಂಬಿರುವವರು. ದೇಹವನ್ನು ಕವಿತೆಯೊಳಗೆ ತರುವುದನ್ನು ಪ್ರಶ್ನಿಸುವ ಆಷಾಢಭೂತಿತನವನ್ನು ಅವರು ಅದೇ ಭಾಷೆಯಲ್ಲಿ ತುಂಡರಿಸಿ ಎಸೆಯುತ್ತಾರೆ.

ನಾವು ಕಚ ಕುಚಗಳ ಬಗ್ಗೆ ಬರೆಯಬಾರದು
ನೀವು ಅದನ್ನು ವಿರೂಪಗೊಳಿಸಬಹುದು!
ನಾವು ತೊಡೆ ಜಘನ ನಾಭಿ ಸ್ಥಳಗಳನ್ನು ಕಾಣಿಸಬಾರದು
ನೀವದನ್ನು ಅತಿಕ್ರಮಿಸಿ ಸ್ಥಾಪಿತರಾಗಬಹುದು!
ನಾವು ಯೋನಿಗೆ ಅಪಚಾರವಾಗದಂತೆ ಕಾಯ್ದಿರಿಸಿಕೊಳ್ಳಬೇಕು
ನೀವದರ ಅತ್ಯಾಚಾರಕ್ಕೆ ಸದಾ ಹಾತೊರೆಯಬಹುದು!

ಎಂದು ಜಗ್ಗಿಸಿ ಕೇಳುವ ಈ ಕವಿತೆ ಕೊನೆಯಲ್ಲಿ ಹೀಗೇ ಹೆಣ್ಣನ್ನು ನಿಯಂತ್ರಿಸುತ್ತಾ ಹೋದರೂ ಅದೆಲ್ಲವನ್ನು ದಾಟಿ ಅವಳೇನೋ ಬದುಕು ಕಟ್ಟಿಕೊಳ್ಳಬಲ್ಲಳು, ಆದರೆ ಗಂಡು ಅಸಹಾಯಕ ಎಂಬ ಎಚ್ಚರಿಕೆ ನೀಡುತ್ತದೆ. "ಸ್ರಾವ ನಿಂತರೂ ಹೆಣ್ಣು ಹೆಣ್ಣೇ/ ನಾವೇನೋ ಹೇಗೋ ಸವೆಸುವೆವು ಕಾಲ ಆದರೆ.../ ಆಪಕಾ ಕ್ಯಾ ಹೋಗಾ ಜನಾಬೇ ಅಲೀ..." ಎಂಬ ಪ್ರಶ್ನೆ ಮನುಕುಲ ಗಂಭೀರವಾಗಿ ಸ್ವೀಕರಿಸಬೇಕಾದ ಪ್ರಶ್ನೆಯೂ ಹೌದು. ಈ ಪ್ರಶ್ನೆಯ ನಿಜದ ಅರಿವಿಲ್ಲದ ಪುರುಷಾಹಂಕಾರದ ಜಗತ್ತು ಹೆಣ್ಣನ್ನು ನಿಯಂತ್ರಿಸುವ ಯಜಮಾನಿಕೆಯ ಹೊಸ ಹೊಸ ರೂಪ ಧರಿಸುತ್ತಿರುತ್ತದೆ. ಇದನ್ನು ಎದುರಿಸಲು ಹೆಣ್ಣು ಮತ್ತೆ ಮತ್ತೆ ತನ್ನ ಸ್ವಪ್ರಜ್ಞೆಯನ್ನು ಸಾಣೆಗೆ ಹಿಡಿಯುತ್ತಲೇ ಇರಬೇಕಾಗುತ್ತದೆ.

ಅವತ್ತು ಬಾಗಿಲು ತೆರೆದ ಬೆಳೆದ ಮಗ ಕೇಳಿದ
ಇದು ಬರುವ ಹೊತ್ತೇ ಈ ವಯಸ್ಸಿನಲ್ಲಿ
ಯಾರೂ ಹೀಗಿರುವುದಿಲ್ಲ ಗೊತ್ತೇ

ನಾನಂದೆ ನನ್ನ ವಯಸ್ಸನ್ನು ನಾನು ಅಲ್ಲೇ
ಬಿಟ್ಟು ಬಂದಿದ್ದೇನೆ. ಹುಶ್ ಸುಮ್ಮನಿರು (ನನ್ನ ಬಾಯಿ ಮಾತಾಡುವುದಿಲ್ಲ)

ನನಗೆ ಅರವತ್ತಾಯಿತೆಂದು ನಿರ್ಧರಿಸಬೇಕಾದವಳು ನಾನೋ ನೀವೋ? ಎಂದು ಇನ್ನೊಂದೆಡೆ ಕೇಳುವ ಪ್ರತಿಭಾ ಸ್ತ್ರೀ ಚೈತನ್ಯ ಅಸೀಮ, ಅನಂತ, ಅನಿರ್ಬಂಧಿತ ಎಂಬ ಸತ್ಯವನ್ನು ಲೋಕಕ್ಕೆ ತಿಳಿಸುವುದಕ್ಕೆ ಕಾವ್ಯವನ್ನು ಅಂಕಣವಾಗಿಸಿಕೊಂಡವರು.

ಇವಳನ್ನು ನೋಡಿ

ಇವಳೇ ಜಗದಚ್ಚರಿ.
ಸುಡುವೆನೆಂದಿರಿ ಸುಡಲಿಲ್ಲ
ಮುಳುಗೆಂದಿರಿ ಮುಳುಗಲಿಲ್ಲ
ಕಳೆದುಹೋಗಲು ಕಾಡಿಗಟ್ಟಿದಿರಿ
ಬದಲಿಗೆ ಕಂಡುಕೊಂಡಳು
ಮರೆತುಬಿಟ್ಟಿರಿ ನೀವು ಮರೆಯಲಿಲ್ಲ ಅವಳು
ತಾಕಲಿಲ್ಲ ಎದೆಗೆ ನಿಮ್ಮ
ಕುಹಕ ತಾತ್ಸಾರದ ಬಾಣ
ಕೆತ್ತಿದಷ್ಟೂ ಮೂಡಿ ಕತ್ತರಿಸಿದಷ್ಟೂ ಚಿಗುರಿ

ಅರವತ್ತಲ್ಲ ಇಂದಿಗೆ ನನಗೆ ಆರು ಸಾವಿರ ವರ್ಷ!



(ತರೀಕೆರೆಯ ಸರ್ಕಾರ ಪ್ರ.ದ. ಕಾಲೇಜಿನಲ್ಲಿ ಕನ್ನಡ ಸಾಹಿತ್ಯ ಬೋಧಿಸುವ ಸಬಿತಾ ಬನ್ನಾಡಿ ಕವಯಿತ್ರಿ ಹಾಗೂ ಸಂಸ್ಕೃತಿ ಚಿಂತಕಿ ಕೂಡ.)

೧೧ನೇ ಪುಟದಿಂದ)

ಕೆಲಸದ ಸ್ಥಳದಲ್ಲಿ ಈ ರೀತಿಯ ಸಮಸ್ಯೆಯಾದರೆ, ಈ ಮಹಿಳೆಯರ ಸಾಮಾಜಿಕ ಬದುಕು ಸಹ ಅಭದ್ರತೆಯಲ್ಲಿಯೇ ಕಳೆಯುತ್ತದೆ. ಬಹುತೇಕ ಮಹಿಳಾ ಕಾರ್ಮಿಕರ ಗಂಡಂದಿರು ಕೂಲಿಕೆಲಸ, ತರಕಾರಿ ಮಾರಾಟ, ಆಟೋಡ್ರೈವರ್ ಈ ರೀತಿಯ ಅಸಂಘಟಿತ ವಲಯದಲ್ಲಿಯೇ ದುಡಿಯುತ್ತಿದ್ದಾರೆ, ಅವರು ಕುಟುಂಬದ ಖರ್ಚಿಗೆ ನೆರವಾಗುವರೆಂಬ ನಂಬಿಕೆ ಈ ಮಹಿಳೆಯರಿಗಿಲ್ಲ, ಹೀಗಾಗಿ ಮನೆಯ ಪೂರ್ತಿ ಜವಾಬ್ದಾರಿ ಇವರದೇ, ಬರುವ ಅಲ್ಪ ಸಂಬಳದಲ್ಲಿ ಬಾಡಿಗೆ, ದಿನಸಿ, ಮಕ್ಕಳ ಶಿಕ್ಷಣ, ಆರೋಗ್ಯ, ಹಬ್ಬ, ಹೀಗೇ ಎಲ್ಲವನ್ನೂ ಪೂರೈಸಲು ಹೆಣಗಾಡಬೇಕಿದೆ.

ಗಾರ್ಮೆಂಟ್ ಅಂಡ್ ಟೆಕ್ಸ್‌ಟೈಲ್ ವರ್ಕರ್ಸ್ ಯೂನಿಯನ್ ೨೦೦೬ ರಿಂದಲೂ ಗಾರ್ಮೆಂಟ್ಸ್ ಕಾರ್ಮಿಕರನ್ನು ಸಂಘಟಿಸುತ್ತಿದೆ. ಅವರ ಕಾನೂನುಬದ್ಧ ಹಕ್ಕುಗಳ ರಕ್ಷಣೆಗಾಗಿ ಹೋರಾಡುತ್ತಿದೆ. ಸರ್ಕಾರದ ಮಟ್ಟದಲ್ಲಿ, ಸಾರ್ವಜನಿಕ ಜೀವನದಲ್ಲಿ, ರಾಷ್ಟ್ರ ಮತ್ತು ಅಂತರರಾಷ್ಟ್ರೀಯ ಮಟ್ಟದಲ್ಲಿ, ಬ್ರಾಂಡ್‌ಗಳೊಡನೆ ಈ ಕಾರ್ಮಿಕರನ್ನು ಸಮರ್ಥವಾಗಿ ಪ್ರತಿನಿಧಿಸುತ್ತಿದೆ. ಗಾರ್ಮೆಂಟ್ಸ್ ಕಾರ್ಮಿಕರ ಸಂಖ್ಯೆಗೆ ಹೋಲಿಸಿದರೆ, ಎಲ್ಲ ಕಾರ್ಮಿಕರನ್ನು ತಲುಪಲು GATWU ವಿಗೆ ಸಾಧ್ಯವಾಗಿಲ್ಲವಾದರೂ ಸಹ ಎಲ್ಲೆಲ್ಲಿ ವಿನಾ ಅಡಿಯಲ್ಲಿ ಕಾರ್ಮಿಕರು ಸಂಘಟಿತರಾಗಿದ್ದಾರೆಯೋ, ಅಲ್ಲಿ ಕಾರ್ಮಿಕರು ತಮ್ಮ ಹಕ್ಕಿಗಾಗಿ ಹೋರಾಟ ನಡೆಸುತ್ತಿದ್ದಾರೆ. ಅನ್ಯಾಯದ ವಿರುದ್ಧ ಪ್ರತಿಭಟಿಸುತ್ತಿದ್ದಾರೆ. ಕೇವಲ ಕಾರ್ಖಾನೆಗಳ ಮಾಲೀಕರಲ್ಲದೆ, ಏನೇನೂ ಶ್ರಮ ಹಾಕದೆ ಕೇವಲ ಹೆಸರಿನ ಬಲದ ಮೇಲೆ ಕೋಟಿಕೋಟಿ ಲಾಭ ಬಾಚಿಕೊಳ್ಳುವ ಅಂತಾರಾಷ್ಟ್ರೀಯ ಬ್ರಾಂಡ್‌ಗಳು ಈ ಕಾರ್ಮಿಕರ ಹೀನಾಯ ಪರಿಸ್ಥಿತಿಗೆ ಸಮಾನ ಹೊಣೆಗಾರರು ಎಂಬ ವಾದ ಈಗ ಬಲವಾಗುತ್ತಿದೆ. ದಕ್ಷಿಣ ಏಷ್ಯಾ ರಾಷ್ಟ್ರಗಳೆಲ್ಲೆಡೆ ಸಂಘಟಿತರಾಗುತ್ತಿರುವ ಗಾರ್ಮೆಂಟ್ಸ್ ಕಾರ್ಮಿಕರ ಶಕ್ತಿ ಸಂಚಯವಾಗುತ್ತಿದೆ. ಈ ಎಲ್ಲ ಸಂಘಟನೆಗಳೊಂದಿಗೆ ಸಂಪರ್ಕ ಸಾಧಿಸಿ, ಎಲ್ಲ ಆಯಾಮಗಳಲ್ಲಿಯೂ ಕಾರ್ಮಿಕರ ಹಿತಾಸಕ್ತಿಗಾಗಿ ಹೋರಾಡುತ್ತಿದೆ.

ಮಾಲೀಕರ, ಬಂಡವಾಳ ಶಾಹಿಗಳ ಶೋಷಣೆ ಮಿತಿಮೀರಿದಾಗ ಕಾರ್ಮಿಕ ವರ್ಗವು, ಹೋರಾಟ ಚಳವಳಿಗಳ ಮೂಲಕ ಪ್ರತಿಭಟಿಸಿರುವ ಶತಮಾನಗಳ ಇತಿಹಾಸ ನಮ್ಮ ಮುಂದೆ ಇದೆ. ಇದು ಕೇವಲ ಇತಿಹಾಸವಲ್ಲ, ಈಗಲೂ ಪ್ರಸ್ತುತ ಎಂದು ೨೦೧೬ರಲ್ಲಿ ಬೆಂಗಳೂರಿನಲ್ಲಿ ನಡೆದ ಗಾರ್ಮೆಂಟ್ಸ್ ಮಹಿಳೆಯರ ಪಿ.ಎಫ್ ಹೋರಾಟ ಸಾಬೀತು ಪಡಿಸಿದೆ.

(ಕಾರ್ಮಿಕಳಾಗಿ ದುಡಿದು ಈಗ ಗಾರ್ಮೆಂಟ್ಸ್ ಅಂಡ್ ಟೆಕ್ಸ್‌ಟೈಲ್ಸ್ ವರ್ಕರ್ಸ್ ಯೂನಿಯನ್‌ನ ಅಧ್ಯಕ್ಷರಾಗಿರುವ ಲೇಖಕಿ ಆರ್. ಪ್ರತಿಭಾ ವಿಜಯಪುರದ ಅಕ್ಕಮಹಾದೇವಿ ಮಹಿಳಾ ವಿಶ್ವವಿದ್ಯಾನಿಲಯದಲ್ಲಿ ಸಂಶೋಧನಾ ವಿದ್ಯಾರ್ಥಿನಿಯೂ ಹೌದು)

ರೈತ ಮುಖಂಡ ಕೆ.ಎಸ್. ಪುಟ್ಟಣ್ಣಯ್ಯ ಮತ್ತು ಹಿರಿಯ ಲೇಖಕಿ ಡಾ. ವಿಜಯ ದಬ್ಬೆ ಅವರ ನಿಧನಕ್ಕೆ 'ಹೊಸ ಮನುಷ್ಯ' ತನ್ನ ತೀವ್ರ ಸಂತಾಪವನ್ನು ವ್ಯಕ್ತಪಡಿಸುತ್ತದೆ–ಸಂ.

ಕಥೆ

ಒಡಲುಗೊಂಡವಳು

–ವಿನಯಾ



ಚಿತ್ರ : ರೂಪ ಹಾಸನ

'ಈಗೀಗ ಕುತ್ತಿಗೆಯಿಂದ ಬೆನ್ನಕೋಲಿನ ಗುಂಟ ಹರಿದಾಡುವ ನೋವಿನ ಮಾಟಕ್ಕೆ ಮಂಜುವಿನ ಬಿರುಸು ಅಂಗೈಗಳು ಬೇಕೆನಿಸುತ್ತಿತ್ತು. ಅದರಲ್ಲೂ ನನ್ನ ತಲೆಯನ್ನು ಅವಳ ಹೊಟ್ಟೆಗೆ ಆನಿಸಿಕೊಂಡು ಪಕ್ಕೆಲುಬಿನ ಅಂಚಿನಿಂದ ಹಾಗೆ ಕುತ್ತಿಗೆ ದಾಟಿ ಕಿವಿಯೋಲೆಯ ಹಿಂದುಗಡೆಯ ಗಂಟು ಒತ್ತಿ ತಲೆಯಲ್ಲಿ ಬೆರಳಾಡಿಸುವ ಆ ಮಾಯಕಕ್ಕೆ ಫಿದಾ ಆಗಿದ್ದೆ. 'ಆಂಟಿ, ಏನ್ರಿ ಇದು? ಕಿವಿಯ ಹಿಂದ ಇಕಾ ಇಲ್ಲಿ ಹಿಂಗ್ಯಾಕ ಕಲ್ಲ ಆಗೇತ್ರಿ ಆಂಟಿ, ಭಾಳ ಟೆನ್‌ಶನ್ ಮಾಡ್ಕೋತಿರೇನ್ರಿ? ನಾ ಯಾರ್ನೂ ಹಿಂಗ್ ನೋಡಿಲ್ಲ ಬಿಡ್ರಿ... ಏನ್ರೀ ಆಂಟಿ ನೀವು? ಹೀಂಗರೀss' ಅಂತ ಅಕ್ಕರತೆಯಲ್ಲಿ ಅವಳು ನೀವುತ್ತಿದ್ದರೆ, ಜನ್ಮಾಂತರದ ಬಾಂಧವ್ಯವೊಂದು ನನ್ನ ಕೊರಳಿಗೂ ಅವಳ ಬೆರಳಿಗೂ ಬೆಸೆದ ಹಾಗಿತ್ತು.'



'ಬಂದೆ ಹಾಂs ಒಂದ್ಯೆದ್ ನಿಮಿಷ' ಅಂತ ಹಾಗೇs ಬಾಗಿಲು ತೆಗೇತಿದ್ದೆ. ಇಂವ ಕಿಚಾಯಿಸಿದ 'ಮತ್ತೆ ಹೊಂಟ್ಯಾ?' ಅಲ್ಲೇ ಈ ತಿಂಗಳೇ ಹೋಗಿದ್ದೆಯಲ್ಲೆ' ಅಂತ ನಾಕು ಮನೆಗೆ ಕೇಳುವ ಅವನ ಸಹಜ ಸ್ವರದಲ್ಲಿ ತಿಂಗಳ ಆ ಲೆಕ್ಕ ಇಟ್ಟುಕೊಂಡವನು ಇದನ್ನೂ ನೆನಪಿಟ್ಟುಕೊಂಡನೇ... ಅಂತ ಗಾಬರಿಬಿದ್ದೆ. 'ಯಾಕೋ ನಿಮ್ಮಮ್ಮ ಬರ್ತಾ ಬರ್ತಾ ಬ್ಯಾರೇನೇ ಆಗ್ತಿದಾಳಲ್ರೋ...' ಅಂದಾಗಿತ್ತು. ಮಗಳು 'ಹೌದ ಬಿಡಪಾ, ನೀ ಮಾತ್ರ ಖಾಯಂ ಹೋಗ್ತಿರಬೇಕು. ಪಾಪ ಆಕೀಗಾsದ್ರ...' ಅಂತ ಅಪ್ಪನ ಬಾಯಿ ಬಂದ್ ಮಾಡಿದ್ದೂ... ನನ್ನ ಹೆಜ್ಜೆ ಸದ್ದಿನೊಂದಿಗೇ ಕೇಳುತ್ತಿತ್ತು. ಆಗಲೇ ಸಂಜೆ ೭.೩೦. ಈ ಮಾತುಗಳಿಗೆ ಉತ್ತರ ಕೊಡುತ್ತ ನಿಂತಿದ್ದರೆ, ಅಲ್ಲಿ ಮಂಜು ನನಗಾಗಿ ಕಾಯುವುದಿಲ್ಲವಲ್ಲ. ಮನೆಯಿಂದ ಇದಿರು ಓಣಿ ಹಾದು ಎರಡು ಮನೆ ದಾಟಿದರೆ ಅವಳ ಪಾರ್ಲರ್. ಮಂಜುಶ್ರೀ ಎಂಬ ಈ ಇವಳು ನಂಗೆ ಪರಿಚಯವಾದದ್ದು ಸುಮಾರು ಐದಾರು ವರ್ಷಗಳಿಂದ. ಪಾರ್ಲರ್‌ಗೆ ಹೋಗುವುದು ಶೋಕಿ ಕೆಲಸ ಎಂದೇ ಗಟ್ಟಿ ನಂಬಿಕೊಂಡ ದಿನಗಳವು. ಕಾಲ ಹಿಮ್ಮಡಿಯಲ್ಲಿ ಮಾಯಲಾರದ ಬಿರುಕು ಮೂಡಿ ಹೆಜ್ಜೆಯಿಡುವುದೂ ದುಸ್ತರವಾಗಿದ್ದಾಗ, ಪ್ರಕಾಶ ಡಾಕ್ಟ್ರ ಸ್ಪೆಕ್ಟ್ ಒಳಗಿದ್ದ ಕಣ್ಣನ್ನು ಹೊರಕ್ಕೆ ನೆಗೆಸಿ ದುರುದುರು ನೋಡ್ತಾ "ಮೇಡಂ, ಇದು ಬರೀ ಔಷಧಿಗೆ ಮಾಯೋದಿಲ್ಲ. ಪಾರ್ಲರ್‌ನಲ್ಲಿ ರೆಗ್ಯುಲರ್ ಎರಡು ಮೂರು ಸಲ ಪೆಡಿಕ್ಯುಲರ್ ಮಾಡಿಸ್ಕೊಳ್ಳಿ. ಫಾರ್ ಬೆಟರ್" ಅಂದಿದ್ದರು. ಆಗ ನನ್ನ ಮಗಳು ಶೋಧಿಸಿಕೊಟ್ಟಿದ್ದು ಈ ಮಂಜುಶ್ರೀ ಪಾರ್ಲರ್. ಸಣ್ಣದೊಂದು ಬಾಡಿಗೆ ಮನೆಯ ಹೊರಕೋಣೆಯ ತೀರಾ ಕೆಳಮಧ್ಯಮ ಹಂತದ ಗೂಡು. ಅದನ್ನು ನಡೆಸುತ್ತಿದ್ದ ಮಂಜು ಎಂಬ ಆ ಮುದ್ದು ಹುಡುಗಿ. ನೋಡ್ಲೋಕೆ ಒಂಥರಾ ಹುಡುಹುಡುಗು ಅನ್ನಿಸುವಂಥವಳು. ಅವಳ ಮಾತಿಗೆ ಜೇನುಗಂಪು. ಸಾಲದ್ದಕ್ಕೆ ಎಲ್ಲ ತಿಳಿದುಬಿಟ್ಟವಳಂತೆ ಆಡುವ ಮುದುಕಿಯ ಮಾತಿನಂಥ ಸೆಡವು. "ಅಯ್ಯ ಶಿವ್ನ ಇದೇನ ಮಾಡ್ಕಂಡ ಕುಂತೀರಿ ಆಂಟಿ? ಮೊದ್ಲೇ ಬರ್ಬೇಕಿಲ್ಲ? ಆಂ... ಕಲ್ಲಿಗೆ ತಿಕ್ಕೀರಿ? ಆಯ್ತು ಬಿಡ್ರಿ... ಯಾವ ಕಾಲ್ದಾಗದೀರಿ..." ಹಾಗೆ ಒಂದು ಕುರ್ಚಿಯ ಮೇಲೆ ಕೂಡಿಸಿ, ಉಗುರು ಬೆಚ್ಚನೆಯ ಡೆಟ್ಟಾಲ ನೀರಿನಲ್ಲಿ ಕಾಲಿಳಿಸಿ... ಅದೇನೇನೋ ಸಣ್ಣಪುಟ್ಟ ವಸ್ತುಗಳಿಂದ ಕಾಲುಜ್ಜಿ ಉಜ್ಜಿ... ಕಡೆಗೆ ಪಾದಗಳನ್ನು ತನ್ನ ತೊಡೆಯ ಮೇಲಿರಿಸಿಕೊಂಡು ಮೃದುವಾಗಿ ಒರೆಸಿ ಕ್ರೀಂ ಹಚ್ಚಿ ಕೆಳಗಿಟ್ಟಾಗ ಓಹ್ ನನ್ನ ಪಾದಗಳು ಅನುಭವಿಸಿದ್ದ ಸೌಖ್ಯವನ್ನು ಮರೆಯುವುದು ಸಾಧ್ಯವೇ ಇಲ್ಲ. ಮತ್ತದೇ ಟ್ರೀಟ್‌ಮೆಂಟ್‌ಗೆ ವಾರಕ್ಕೊಮ್ಮೆ ಹೋಗಿ ಆಯಿತು. ಅಂದಿನಿಂದ ಅದೆಷ್ಟೇ ಧೂಳು ಹೊಲಸಿನಲ್ಲಿ ತಿರುಗಿದರೂ ಪಾದಗಳಿಂದ ತಕರಾರಿಲ್ಲ.

ನನ್ನ ಮತ್ತು ಮಂಜು ಸಂಬಂಧ ಅಲ್ಲಿಗೇ ಮುಗಿತಾಯವಾಗಲಿಲ್ಲ. 'ಇದs ಮೊದಲ್ನೇ ಸಲ ಬಂದಿದ್ದು ಮಂಜು' ಅಂತ ಹೇಳಿದಾಗ, ಕೈಯಲ್ಲಿದ್ದ ಸಾಮಾನು ಕೆಳಗೆ ಇಟ್ಟು ಹೊಟ್ಟೆ ಹಿಡಿದುಕೊಂಡು ಉಳ್ಳಾಡಿ ನಕ್ಕಿದ್ದಳು ಹೆಣ್ಣು. ಕಡೆಗೆ ತನ್ನ ತಾನೇ ಸಂಭಾಳಿಸಿಕೊಂಡು 'ಛೆ, ಪಾಪ ಆಂಟಿ' ಅಂದಳು. ಆ ನಂತರದ ದಿನಗಳಲ್ಲಿ ಹೀಗೆ ತಿಂಗಳಿಗೊಮ್ಮೆ ಕತ್ತಲು ಕವಚಿದ ಸಂಜೆ 'ಬರ್ಲಾ ಮಂಜು?' ಅಂತ ಫೋನ್ ಮಾಡಿ, ಧುಡಧುಡನೇ ಓಡುತ್ತಿದ್ದೆ. ಇನ್ನೇನು ಪಾರ್ಲರ್ ಬಾಗಿಲು ಹಾಕುವ ಹೊತ್ತಲ್ಲಿ, ನಮ್ಮಿಬ್ಬರನ್ನು ಬಿಟ್ಟು ಇನ್ನೊಂದು ಹುಳವೂ ಅತ್ತ ಸುಳಿಯಬಾರದ ಹೊತ್ತಲ್ಲಿ. ಅವಳು ಆಗಾಗ 'ಆಂಟಿ, ನೀವು ಸುಮ್ನೇ ಸಂಕೋಚ ಮಾಡ್ಕೊಂತೀರಿ. ಇದ್ನ ಮಾಡಿಸ್ಕಳ್ಳಿ, ಅದ್ನ ಮಾಡಿಸ್ಕಳ್ಳಿ' ಅಂತ ರುಚಿ ಹಚ್ಚಿಸೋ ಪ್ರಯತ್ನ ಮಾಡುತ್ತಿದ್ದಳು. ನನ್ನ ಅಂಬೋಣ ನನಗೆ ಸರಿಯಿತ್ತು. 'ಬಿಡು ಮಾರಾಯ್ತಿ. ನೀ ಏನೋ ಮಾಡಿ ನನ್ನ ಗುರುತು ನನ್ನ ಗಂಡಂಗೆ ಸಿಗಲಾರದ ಹಾಂಗಾದ್ರೆ ಬಲೆ ಕಷ್ಟ ಹೆಣ್ಣೆ' ಅಂತ ಅವಳ ಮಾತನ್ನು ಅತ್ತತ್ತ ಸರಿಸಿಬಿಡುತ್ತಿದ್ದೆ. 'ಮಂಜೂs, ಐಶ್ವರ್ಯ ರೈ ನಮ್ಮೂರ ಕಡೆಯವಳೇ. ಆದ್ರೆ ನಿನ್ನ ಎಲ್ಲ ವಿದ್ಯೆ ನನ್ನ ಮೇಲೆ ಪ್ರಯೋಗಿಸಿದ್ರೂ ನಾ ಐಶ್ವರ್ಯ ರೈ ಆಗಲ್ಲ ಅಲ್ವೇನ?' ಅಂದಿದ್ದೆ. ಮಂಜು ಆ ಮೇಲಿಂದ ನಂಗೆ ಆಮಿಷ ಒಡ್ಡೋದು ಬಿಟ್ಟಿದ್ದಳು. ಆದ್ರೆ... ಹೇಳ್ದೆ ಕೇಳ್ದೆ ದೇಹದ ಯಾವ್ದೋ ಭಾಗ ನೋವು ಎತ್ತಿ ದಬಾಯಿಸಿದ ಹೊತ್ತಲ್ಲಿ ನಂಗೆ ಮಂಜು ನೆನಪಾಗ್ತಿದ್ದಳು. ಅವಳು ಪ್ಯಾರಾಚೂಟ ಕೊಬ್ಬರಿ ಎಣ್ಣೇನ ಕೈಗೆ ಸವರಿ ಮಸಾಜು ಮಾಡುವ ಥಾಟಿನಲ್ಲಿ ನೋವು ಹೆದರಿ ಓಡಬೇಕಷ್ಟೆ. ಈಗೀಗ ಕುತ್ತಿಗೆಯಿಂದ ಬೆನ್ನಕೋಲಿನ ಗುಂಟ ಹರಿದಾಡುವ ನೋವಿನ ಮಾಟಕ್ಕೆ ಮಂಜುವಿನ ಬಿರುಸು ಅಂಗೈಗಳು ಬೇಕೆನಿಸುತ್ತಿತ್ತು. ಅದರಲ್ಲೂ ನನ್ನ ತಲೆಯನ್ನು ಅವಳ ಹೊಟ್ಟೆಗೆ ಆನಿಸಿಕೊಂಡು ಪಕ್ಕೆಲುಬಿನ ಅಂಚಿನಿಂದ ಹಾಗೆ ಕುತ್ತಿಗೆ ದಾಟಿ ಕಿವಿಯೋಲೆಯ ಹಿಂದುಗಡೆಯ ಗಂಟು ಒತ್ತಿ ತಲೆಯಲ್ಲಿ ಬೆರಳಾಡಿಸುವ ಆ ಮಾಯಕಕ್ಕೆ ಫಿದಾ ಆಗಿದ್ದೆ. 'ಆಂಟಿ, ಏನ್ರಿ ಇದು? ಕಿವಿಯ ಹಿಂದ ಇಕಾ ಇಲ್ಲಿ ಹಿಂಗ್ಯಾಕ ಕಲ್ಲ ಆಗೇತ್ರಿ ಆಂಟಿ, ಭಾಳ ಟೆನ್‌ಶನ್ ಮಾಡ್ಕೋತಿರೇನ್ರಿ? ನಾ ಯಾರ್ನೂ ಹಿಂಗ್ ನೋಡಿಲ್ಲ ಬಿಡ್ರಿ... ಏನ್ರೀ ಆಂಟಿ ನೀವು? ಹೀಂಗರೀss' ಅಂತ ಅಕ್ಕರತೆಯಲ್ಲಿ ಅವಳು ನೀವುತ್ತಿದ್ದರೆ, ಜನ್ಮಾಂತರದ ಬಾಂಧವ್ಯವೊಂದು ನನ್ನ ಕೊರಳಿಗೂ ಅವಳ ಬೆರಳಿಗೂ ಬೆಸೆದ ಹಾಗಿತ್ತು. ಬಾಣಂತಿ ನೀರಿನ ದಿನಗಳಲ್ಲಿ ಸೊಂಟದ ಸೆರೆಯನ್ನು ಕಿಬ್ಬೊಟ್ಟೆಯ ಎಳೆಯನ್ನು ಒತ್ತಿ ನೀವುತ್ತಿದ್ದ ನಮ್ಮೂರಿನ ಬಿಳಿಮುಡಿಯ ಬಾಯಮ್ಮ ಈ ಲಿಪ್‌ಸ್ಟಿಕ್ ತುಟಿಯ ಲೆಗ್ಗಿನ್ಸ್ ಹುಡುಗಿಯಾಗಿ ಬಂದ ಗಮ್ಮತ್ತು ಕಂಡಂತೆ ಕಣ್ಣು ಪಿಳುಕಿಸುತ್ತಿದ್ದೆ.

ಹೀಗೆs.. ಗಡಗಡ ಸಪ್ಪಳದ ಫ್ಯಾನಿನ ಮುರುಕು ಕೋಣೆಯ ಏಕಾಂತದಲ್ಲಿ ನಂನಮ್ಮ ಬದುಕಿನ ಒಳಪುಟಗಳು ಹಾರಾಡುತ್ತಿದ್ದವು. ಕೋಣೆ ಚಂದ ಕಾಣಲು ಕಟ್ಟಿದ ಪರಪರೆಯಂತೆ. ಮಂಜುಗೆ ಮದುವೆಯಾಗಿ ಅದಾಗಲೇ ಹದಿಮೂರು ವರ್ಷ ಮುಗಿದಿತ್ತು. ಗಂಡ ರಿಕ್ಷಾ ಡ್ರೈವರ್. ಮಕ್ಕಳಿಲ್ಲ. ಮಕ್ಕಳಾಗಲು ಅವಳೀಗೀಗ ಬಹಳ ಸೀರಿಯಸ್ ಆದ ಟ್ರೀಟಮೆಂಟಗಳ ಮೊರೆ ಹೋಗಿದ್ಲು. ಈ ಮಧ್ಯೆ ನಾಲ್ಕೈದು ತಿಂಗಳು ಪಾರ್ಲರ್‌ಗೆ ಬಾಗಿಲೂ ಹಾಕಿದ್ಲು. 'ಹಿಂಗ ಟ್ರೀಟಮೆಂಟ ಚಾಲೂ ಮಾಡ್ಕೋಬೇಕಂದ್ರೆ ಕೈಯಾಗ ನಾಕ ಕಾಸು ಮಾಡ್ಕೋಬೇಕಾತ್ರೀ ಆಂಟಿ. ಹುಟ್ಟಿದ ಮನ್ಯಾಗ ದಾದ ಮಾಡ್ಲಿಲ್ಲ. ನಮ್ಮವ್ವ ಈಗ ಬಂದು ಕಣ್ಣೀರಾ ಹಾಕ್ಕೊಂದು ಕುಂದ್ರತಾಳ. ಬ್ಯಾಡ ಬಿಡಬೇ ಅಂದ್ರೂ ತಾ ಉಳಿಸಿದ ರೊಕ್ಕದಾಗ ಸಂತಿ ತರ್‍ತಾಳ. ನಾ ಸಾಲ ಮಾಡ್ಕಂಡು ಸೈಟ ತಗೊಳ್ಳು ಮುಂದ ನನ್ನ ತಮ್ಮ ಭಾಳ ಹೆಲ್ಪ ಮಾಡ್ತಾರೀ. ಇಲ್ಲಂದ್ರ, ಈ ಊರಾಗ ನಮ್ಮಂತವ್ರು ಜಾಗೆ ತಗೊಳ್ಳಾಕಾದೀತೇನ್ರೀ' ಅಂದಿದ್ದಳು.

ಅವಳ ಗಂಡನನ್ನ ನಾನು ನೋಡಿರಲಿಲ್ಲ. ಅವನಿಗೆ ಏನೂ ಚಟಗಳಿರಲಿಲ್ಲ ಅಂತಿದ್ದಳು. ಒಂದs ಒಂದು ಅಡಕಿ ಹೋಳೂ ಬಾಯಾಗ ಹಾಕವನಲ್ಲ ಎಂಬ ಶರಾ ಅವನ ಹೆಸರಿಗಿತ್ತು. ಆದ್ರೂ ಎಷ್ಟೋ ಸಲ, ಅವನ ಜೊತಿ ಫೋನಲ್ಲಿ ಜೋರು ಜಗಳಾ ನಡದಿರತಿತ್ತು. ಆಗೆಲ್ಲ ಮಂಜು ನೋವಿನ ಬರ್ಫದಲ್ಲಿ ಅದ್ದು ತೆಗೆದವಳಂತೆ ಗಾರು ಬಡಿಯುತ್ತಿದ್ದಳು. 'ಗಂಡಸರ ಸ್ವಭಾವ ಹಾಂಗೇ ಅಲ್ವಾ

ಮಂಜು? ಅಷ್ಟ್ಯಾಕ ಬೇಜಾರು ಮಾಡ್ಕೋತಿ ಬಿಡು' ಅಂದರೆ 'ಹಾಂಗಲ್ಲ ಆಂಟಿ, ಮನೀಗ ಬರಾಕs ಒಲ್ಲ ಅಂತಾನ. ಏನ ದುಡಮಿ ಇವಂದು? ಸೈಟ ತಗೊಳ್ಳು ಮುಂದ ೭೦ ಸಾವಿರ ಜೋಡಿಸಿ ಕೊಡಾಕ ಆಗಿಲ್ಲ ಇವನ ಕೈಲೆ. ತಿಂಗಳ ಖರ್ಚಿಗೆ ಅಂತ ಒಂದೀಟ ಕೊಟ್ರ ಮುಗೀತು. ಇರೋರ ಇಬ್ರು, ನಮ್ದೇನ ಖರ್ಚು?' ಅಂತ ಕಣ್ಣೊರೆಸಿಕೊಳ್ಳುತ್ತಿದ್ದಳು.

ಮಂಜು ಆಸ್ಪತ್ರೆಗೆ ಓಡಾಡಿ ಹೈರಾಣಾಗಿದ್ದ ದಿನಗಳವು. 'ಈಗ ಹ್ಯಾಂಗದ ನಿನ್ನ ಹೆಲ್ತು?' ಅಂತ ಕೇಳಿದ್ದೆ. ಗರ್ಭಕೋಶದಲ್ಲಿ ಸಿಸ್ಟ ಬೆಳೆದಿದೆ ಅಂತ ಅವಳಿಗೆ ಆಪರೇಷನ್ ಆಗಿತ್ತು. ಆರಾಂ ಆಗಿದ್ದಳು. 'ನಂಗೀಗ ಆರಾಂ ಆಗಿದೆ ಆಂಟಿ. ತಿಂಗಳ ತಿಂಗಳ ಡೇಟ ಕರಕ್ಟ ಆಗತ್ತ' ಅಂತ ಸಂಭ್ರಮಿಸಿದಳು. 'ಹೌದಾ, ಕರಕ್ಟ ಆಗ್ತಿರಲಿಲ್ವಾ?' ಅಂತ ಕೇಳಿದ್ದೆ ಸಹಜವಾಗಿ. ಆ ದಿನ ಮಂಜು ನನ್ನ ಹಿಂದೆ ನಿಂತು ಹಣೆ ನೀವುತ್ತಿದ್ದಳು. ಅವಳೆದೆಯ ಲಬ್‌ಡಬ್ ನನ್ನ ಕಿವಿಗೆ ಹತ್ತಿದಂತಿತ್ತು. ಎಂಥದೋ ಹೊರಳಾಟ ಅವಳೊಳಗೆ ನಡೆದಂತೆ... ಅದು ನನ್ನ ತಟ್ಟಿದಂತೆ. 'ಸರಿಗೇನು ಆಂಟಿ ಆಗ್ತಿರಾಕೆ ಇಲ್ಲ. ಆಗಿದ್ದೇ ಇಲ್ಲ. ನಮ್ಮವ್ವ ಆವಾಗ ಡಾಕ್ಟರ ಹಂತ್ಯಾಕ ಕರಕೊಂಡು ಹೋಗೀರಾಕಿಲ್ಲ. ನಂಗೇನೋ ಐಬ ಐತಿ ಅಂತ ಆಕೀsನ ತೀರ್ಮಾನ ಮಾಡಿ, ಇನ್ನ ಸಣ್ಣಾಕಿ ಇದ್ದೆನಾ. ಈ ಮೂಳಗ ಕಟ್ಟಿ ಕುಂತ್ಲು. ನಮ್ಮಪ್ಪ ಮಾಸ್ತರ ಇದ್ದ. ಹಂತಾ ಬಡತನಾ ಏನೂ ಇರಾಕಿಲ್ಲ ಮನ್ಯಾಗ. ನಾ ಒಬ್ಬಾಕೀನs ಮಗಳು. ಆದ್ರೂ ಹಿಂಗ ಮಾಡಿಟ್ಲು. ಲಗ್ನಾ ಆಗಿ ಹತ್ತೊರ್ಸ ಆದ ಮ್ಯಾಲ ನನ್ನ ಗೆಳತೇರೆಲ್ಲಾ ಹೋಗಿ ತೋರ್ಸಕಂಬರಾಣ ನಡಿ ಅಂದ ಮ್ಯಾಲೆ, ನಾ ಪಾರ್ಲರ್ ಕೆಲ್ಸ ಕಲ್ತು ದುಡಿಮಿ ಮಾಡಕಂಡ ಮ್ಯಾಲೆ... ನಾನ... ನಾನs ಹೋಗಿ... ಇಷ್ಟನ್ನುದರೊಳಗೆ ಮಂಜು ಗಂಟಲ ಸೆರೆ ಉಬ್ಬಿತ್ತು... ಅವಳಿಗೆ ಮುಂದೆ ಮಾತಾಡುವ ತ್ರಾಣ ಹೋಗಿತ್ತು. ನನ್ನಂಥವರ ದೇಹದ ಬಿಗಿದ ನರಗಳಿಗೆ ನೇವರಿಕೆಯ ಮದ್ದು ಲೇಪಿಸಿ ಮತ್ತೆ ದಿನದ ಬಾಳಾಟಕ್ಕೆ ಸಜ್ಜುಗೊಳಿಸುತ್ತಿದ್ದವಳ ಕಾಡಿಗೆ ಕಣ್ಣು, ಕೆಂಪಿನ ತುಟಿಯೊಳಗೆ ಇಂತಹ ಹೊಯ್ದಾಡುವ ಲಾವಾರಸ ಇತ್ತೇ?

'ಮಂಜೂ' ಎಂದು ಅವಳ ಕೈ ಅದುಮಿದೆ. ಎಲ್ಲಾ ಹುಡ್ಗೀರಿಗೆ ಆಗ ಆಗೂದು ನಂಗ ಈಗ ಆಗಾಕ ಹತ್ತೇತ್ರಿ ಆಂಟಿ. ತ್ರಾಸಾಗ್ತದ. 'ಜರಾ ತ್ರಾಸಾಗ್ತದ, ಹೊಟ್ಟಿ ಅದುಮಿದಾಂಗ ಆಗ್ತದ. ಸಂಭಾಳಿಸಗೋಬೇಕು ಅಂದಾರ ಡಾಕ್ಟರು' ಅಂದಳು. 'ಆಯ್ತು ಬಿಡು ಮಾರಾಯಳ, ಅಂತೂ ಗೆದ್ಯಲ್ಲ. ಮಕ್ಕಳಿಲ್ಲ ಅನ್ನೋ ನೋವಿಗೊಂದು ಮುಕ್ತಾಯ ಆದ್ರ ಸಾಕು' ಅಂದೆ. 'ಹೂಂ' ಅಂದಳು ಬಲು ಭಾರವಾಗಿ. ಅವಳ ಭಾರದ ಅಂದಾಜು ನನಗೆ ಇರಲಿಲ್ಲ. ನಂನಮ್ಮ ಭಾರವೇ ಬಲವತ್ತರವಾಗಿ ಕಾಲು ನಡುಗುತ್ತಿರುವಾಗ ಇನ್ನೊಂದು ಹೆಗಲ ಹೊರೆಗೆ ತಲೆಕೊಡುವ ಪುರುಸೊತ್ತಾದರೂ ಎಲ್ಲಿ?

ಆವತ್ತೊಂದಿನ ನಾನು ಒಳ ಹೋಗುವುದಕ್ಕೂ, ಮಂಜು ಧುಮುಗುಡುತ್ತ ಫೋನ್ ಕುಕ್ಕುವುದಕ್ಕೂ ಸರಿಯಾಗಿತ್ತು. ಅವಳಿಗೆ ನಾನೇನೂ ಕೇಳುವುದೇ ಬೇಕಿರಲಿಲ್ಲ. 'ಮುಂಜಾನಿಂದ ಕೆಲ್ಸ ಮಾಡಿ ಮಾಡಿ ದಣದೇನಿ, ಕಾಲು ನೋಯ್ತದಾವು. ಮತ್ತ ಒಳಗ ಹೋಗಿ ಏನಾರ ಮಾಡ್ಕಂಡು ತಿನ್ನಾಕ ಒಲ್ಲೆ ಅನ್ಸೇತಿ. ಬರೂ ಮುಂದ ಎರಡು ಎಗ್ಗ ಬಿರಯಾನಿ ತಗಂಬಾ ಬೇಕಂದ್ರ ನಾನs ರೊಕ್ಕ ಕೊಡ್ತೀನಿ ಅಂದ್ರನೂ ತಯಾರಿಲ್ಲ. ಏನಾರ ಉಪ್ಪಿಟ್ಟ ಮಾಡ್ಕಂಡು ತಿನ್ನು ಅಂತಾನ. ಅಂವಗ ಈ ನೆವದಾಗ ಮನಿಗಿ ಬರ್ಬೇಕಾಗ್ತದಲ್ಲ ಅನ್ನೋ ಸಂಕಟ. ಈಗೀಗಂತೂ ರಾತ್ರಿ ಮನಿಗ ಬರಾಕ ಒಲ್ಲ ಅಂತಾನ. ಸ್ಟೇಷನ್‌ದಾಗ ಗಾಡಿ ಇಟ್ಕೊಂಡು ಜಾಗರಣೆ ಮಾಡ್ತಾನ. ಹಗಲ ಹೊತ್ತನಾಗ ನಾ ಪಾರ್ಲರ್ ಕೆಲ್ಸದಾಗಿರೂ ಮುಂದ ಮನಿಗ ಬರ್ತಾನ. ರಾತ್ರನ ರಾತ್ರಿ ನಾ ಒಬ್ಬಾಕೀsನ ಬಿದ್ದಿರಬೇಕು. ಮಾಳಿಗಿಯಾಗಿನ ಬೆಕ್ಕಗೋಳ ಕಾದಾಟಕ್ಕ ಅಂಜಕೋತ. ರಾತ್ರಿ ಮನಿ ಬ್ಯಾಡ, ಹೆಂಡ್ತಿ ಬ್ಯಾಡ ಅಂದರss ಯಾಕ ಮದ್ವಿ ಮಾಡ್ಕೋಬೇಕಿತ್ತು? ನಂಗಿಂತ ಹದಿನೈದ ವರ್ಷ ದೊಡ್ಡಂವದಾನ. ಇಕಾ ನೋಡ್ರಿಲ್ಲೆ...' ಅಂತ ತನ್ನ ಮೊಬೈಲಿನಿಂದ ಅವಳ ಗಂಡನ ಫೋಟೋ ತೋರಿಸಿದಳು. ಒಳ್ಳೆ ಕಟ್ಟುಮಸ್ತಾದ ಆಳು. ಅವನ ಪಕ್ಕ ಇವಳು ಮಗಳ ಥರಾ ಕಾಣ್ತಿದ್ದಳು. ಆವತ್ತು ಮಂಜು ದಿಕ್ಕೆಟ್ಟ ಹಾಗಿದ್ದಳು. 'ಮಂದಿ, ಮಕ್ಳ ಆಗಿಲ್ಲ ಅಂತ ನನ್ನ ಅಣಕಸ್ತಾರ. ಮಕ್ಕಳೇನ ಹಂಗs ಆಗ್ತಾವಾs?' ಅಂದಳು. ತನ್ನ ಮೈಯಿಂದ ತಾನೇ ಹೊರನಿಂತು ಮರುಪರಕಿಸುವ ಮೋಡಿಗೆ ಸಿಕ್ಕಂತೆ. ಇದು ಹೀಗೇ ಒರಟೊರಟಾಗಿ ಎಂಬ ಹಟಕ್ಕೆ ಬಿದ್ದವಳಂತೆ.

ನನಗ್ಯಾಕೋ ಅವಳ ಕಣ್ಣುಗಳಲ್ಲಿ ಇಣುಕುವ ಧೈರ್ಯ ಬರಲಿಲ್ಲ. ಕೋಣೆಯಿಡೀ ಅವಳ ಉಸಿರ ಉಬ್ಬಸವಿತ್ತು. ಪಾರ್ಲರ್ ಗೋಡೆಯ ಸಿಮೆಂಟಿನ ಬಿರುಕುಗಳನ್ನು ಮರೆಮಾಡುವಂತೆ ಮುದ್ದು ಮುದ್ದು ಮಕ್ಕಳ ಪೋಸ್ಟರ್‌ಗಳನ್ನು ಹಚ್ಚಿದ್ದಳು. ಮಂಜು ಕೂಡ ಬದಲಾಗುತ್ತಿದ್ದಾಳೆ ಅನ್ನಿಸಿತ್ತು. ಅವಳ ಸಪಾಟು ಎದೆಯೀಗ ಆಡಿನ ಮರಿ ಬಾಯಿ ಹಚ್ಚಲಿ ಅಂತ ಗಲ್ಲಿಸಿದ ಗಿಡದ ಹಾಗೆ ತುಂಬಿಕೊಳ್ಳುತ್ತಿದ್ದ ಹಾಗಿತ್ತು. 'ನಿನ್ನ ಗಂಡನನ್ನ ಆಸ್ಪತ್ರೆಗೆ ಕರೆದುಕೊಂಡು ಹೋಗಿದ್ಯಾ ಮಂಜು? ಇಂತಹ ಸಮಸ್ಯೆಗೆ ಇಬ್ರೂ ತಪಾಸು ಮಾಡಿಸ್ಕೋಬೇಕಲ್ವಾ?' ಅಂತ ನಾ ಕೇಳಿದ ಸುಮಾರು ಅರ್ಧ ತಾಸಿನ ನಂತರ, "ಬರಾಂಗಿಲ್ಲ ಆಂಟಿ ನನ್ನ ಮಾತು ಕೇಳಾಂಗಿಲ್ಲ. ಕೈ ಕಾಲಿಗ್ ಬಿದ್ದೆ. ಅವ್ನ ಕಟ್ಕಂಡು ದೇವ್ರ ದೇವ್ರ ತಿರಗ್ದೆ. ಯಾರ ಯಾರ ಕೈಯಿಂದ ಹೇಳಿಸ್ದೆ. ಊಹೂಂ ನಾ ಬರಾಂಗಿಲ್ಲ. ಬಂದ್ರೂ ಏನೂ ಪ್ರಯೋಜನ ಇಲ್ಲ' ಅಂತ ಮೊಂಡು ಮಾಡ್ತಾನ" ಅಂದಳು. ಮಂಜು ದನಿ ಭಾಳ ಬೀಳಾಗಿತ್ತು. ಖಾಲಿ ಹಗೇವಿನಲ್ಲಿ ಉಳಿದುಬಿಟ್ಟ ಒಂಟಿ ಕಾಳಿನಂತೆ. ನನ್ನೊಳಗೆ, ಶ್ರಾವಣದ ಶುಕ್ರಗೌರಿ ಪೂಜೆಗೆ ದೀಪಾವಳಿಯ ತುಳಸಿ ಲಗ್ನಕ್ಕೆ ಚಂದ ಸಿಂಗರಿಸಿಕೊಂಡು ಗುಲುಗುಲು ಓಡಾಡುತ್ತಿದ್ದ ಹೆಣ್ಣು ಇವಳೇನಾ ಎಂದು ಗಾಬರಿಯಾಯಿತು. ಒಳಗಿನ ತುಮುಲವನ್ನು ಬಚ್ಚಿಟ್ಟು ಹೊರಗೆ ನಗೆಯಾಡುವ ಛಾತಿ ಈ ಜೀವಕ್ಕೆ ಅದೆಲ್ಲಿಂದ ಬಂತೋ... 'ಹೋಗಲಿ ಬಿಡು ಮಂಜು, ಗಂಡಸರಿಗೆ ಇಂಥ ಬರೇ ಧಿಮಾಕ ಬಾಳ. ನೀನs ಅವನ ಜತಿ ಸೂಕ್ಷ್ಮ ನಡಕೊ. ನೀವಿಬ್ರೂ ಹೊಂದಿಕೊಂಡಿದ್ರ ಅನಾಥ ಕೂಸು ತಂದು ಸಾಕಿಕೋಬಹುದು. ಎಷ್ಟ ಮಂದಿ ಹಾಂಗ ಮಾಡಿಲ್ಲ ಹೇಳು? ಮಕ್ಕಳಿಗೆ ಅವ್ವ-ಅಪ್ಪನಿಂದ ಹುಟ್ಟುತ್ಲೇ ಸಂಸ್ಕಾರ ಬಂದಿರಾಂಗಿಲ್ಲ' ಗೊತ್ತ. ಬಂದಿದ್ರ ದೇಹದ ಆಕಾರ ಹೆಚ್ಚಂದ್ರ ಕಾಯಿಲೆ ಕಸಾಲೆ ಬಂದಿರ್ತಾವ' ಅಂತ ಏನೇನೋ ಉದಾಹರಣೆ ಕೊಟ್ಟು ಬಂದೆ. ಮಂಜು ಎಲ್ಲವನ್ನೂ ತುಟಿಬಿಗಿದು ಹೂಂಗುಟ್ಟಿದ್ದಳು. ಹೈಸ್ಕೂಲೂ ಪೂರಾ ಕಲಿಯದ ಹುಡುಗಿಗೆ ನಂಗೆ ತಿಳಿದ ಅರೆಬರೆ ವಿಜ್ಞಾನದ ಅದ್ಯಾವ ಮಾತಾಡಿ ಅವಳನ್ನ ಹಗೂರಗೊಳಿಸಿದೆನೇ ಇನ್ನಷ್ಟು ಗೊಂದಲಕ್ಕೆ ದೂಡಿದ್ದೆನೇ ತಿಳಿಯಲಿಲ್ಲ.

ಒಂದೆರಡು ತಿಂಗಳೇ ಆಗಿಹೋಯ್ತು. ಕುತ್ತಿಗೆ ನರ ಬಿಗಿತ ಹೆಚ್ಚುತ್ತಿತ್ತು. ಮಂಜು ನೆನಪಾಗುತ್ತಲೇ ಇದ್ದಳು. ಅದ್ಯಾವ ಶಾಪವೋ, ಬದುಕು ಹೆದ್ದಾರಿ ಬದಿಯ ಮರದ ಹಾಗೆ ಹಗಲು-ರಾತ್ರಿ ಬೇಧ ತಿಳಿಯದೆ, ಸದಾ ರೊಂಯ್ಯ ಎಂದೋಡುವ ಗಾಡಿಗಳಿಗೆ ನಲುಗುತ್ತ ನಿಂತುಬಿಟ್ಟ ಹಾಗೆ ವಿರಾಮವಿಲ್ಲದೆ ಉರುಳುತ್ತಿತ್ತು. ನಾನೀಗ ಮಂಜು ಎದುರಿದ್ದೆ. ನನ್ನ ಬೆನ್ನ ನರ ಅವಳ ಅಂಗೈ ಸ್ಪರ್ಶಕ್ಕೆ ಹಪಹಪಿಸಿತ್ತು. ಸಮಸ್ಯೆ ಸ್ವಲ್ಪ ತಣ್ಣಗಾಯ್ತಾ? ಎಂದೆ ಮೃದುವಾಗಿ. ತಣ್ಣಗ ಮಾಡೂದು, ಮತ್ ಬೂದಿ ಕೆದರೂದು ಬ್ಯಾಡ ಅಂತ ಒಲೀನ ತಗದೀನ್ರಿ ಅಂದಳು. ನಂಗೆ ತಿಳೀಲಿಲ್ಲ. ಡೈವೊರ್ಸ್‌ಗೆ ಅಪ್ಲೈ ಮಾಡಿ ಆತ್ರಿ. ಅಂವ ಈಗ ಮನಿಗ ಬರಾಂಗಿಲ್ಲ' ಕೋರ್ಟನಾಗ ಇದ್ನ ಸ್ಪೇಶಲ್ ಕೇಸ ಅಂತ ಕನ್ಸಿಡರ್ ಮಾಡ್ಯಾರ. ಐದಾರು ತಿಂಗಳೊಳಗ ಡೈವೊರ್ಸ ಕೊಡಸ್ತಾರಂತ ಅಂದಳು. ಹೌದಾ? ಅಂದೆ. ನಂಗೆ ಮತ್ತೇನೂ ಹೊಳೆಯಲಿಲ್ಲ.

ಸ್ವಲ್ಪ ಹೊತ್ತು ಹಾಗೇ ಉರುಳಿತು. ಮಂಜು ಹೇಳಿದಳು– ಅವಳ ಗಂಡ ಡೈವೊರ್ಸಿಗೆ ಒಪ್ಪಿಗೆ ಕೊಟ್ಟಿದ್ದಾನಂತೆ. ಅವನಿಗೆ ಹೆಣ್ಣಿನ ಬಗ್ಗೆ ಆಸಕ್ತಿಯಿಲ್ಲ. ಆತ ಎಂದೂ ಇವಳನ್ನಲ್ಲ ಯಾವ ಹೆಣ್ಣನ್ನೂ ಒಪ್ಪಿಕೊಳ್ಳಲಾರ. ತಾನು ಮದುವೆ ಮಾಡಿಕೊಂಡು ತಪ್ಪು ಮಾಡಿದ್ದೇನೆ ಎಂದು ಗೊತ್ತಿದೆ. ಆದರೆ ಹಾಗಂತ, ಜೀವನಪೂರ್ತಿ ಇವಳೊಂದಿಗೆ ಸುಮ್ಮನೆ ಸುತ್ತಾಡಿಕೊಂಡೂ, ಸ್ನೇಹಿತನಂತೆಯೂ ಇರಲಾರ. 'ನಿಂಗೆ ಮಗು ಬೇಕಂದ್ರ, ನೀ ಯಾರ ಸಂಗಾಟದ್ರೂ ಪಡ್ಕೊ. ನಾ ಬ್ಯಾಡ ಅನ್ನಾಂಗಿಲ್ಲ' ಅಂದಿದ್ದನಂತೆ. 'ನಿನ್ನ ತಾಳಿ ಕೊಳ್ಳಾಗಿಟಕೊಂಡು ಅಂಥಾದನ್ನ ನಾ ಯಾಕ ಮಾಡ್ಲಿ?' ಅಂತ ಇವಳ ಪ್ರಶ್ನೆ. ಇತ್ತಿತ್ತಲಾಗಿ, ಮಂಜು ತಾನಾಗಿಯೇ ಅವನ ಬಳಿ ಹೋದರೆ ಅವನಿಂದ ಸಿಡುಕು ಬೈಗಳ. ಕುದ್ದು ಹೋಗಿದ್ದ ಹೆಣ್ಣು. ಇದ್ದುಬಿಡಲೇ ಹೀಗೆ ಸುಮ್ಮನೆ? ಎಂದು ಕೋಟಿ ಸಲ ಕೇಳಿಕೊಂಡರೂ ಏನೆಲ್ಲ ಮರ್ಯಾದೆಯ ಹೊದಿಕೆ ಹೊಚ್ಚಿದರೂ... ಸಂಭಾಳಿಕೆ ಆಗಿಲ್ಲ. ಕಡೆಗೆ, ತಾಯಿಯನ್ನು ಬಳಗವನ್ನು ಕೂಡಿಸಿ ಹೇಳಿ ಕೇಳಿ ಕೂಗಾಡಿ ರಂಪಾಟ ಮಾಡಿಯೇ ಜೀವ ಜೋಲಿ ಹಿಡಿದಿದೆ.

ಕಥೆ ಅಲ್ಲಿಗೂ ಮುಗಿದಿಲ್ಲ. ಇವಳ ತಾಯಿಗಿದು ಮನೆತನದ ಮರ್ಯಾದೆಯ ಪ್ರಶ್ನೆ. ಮಗಳು ಗಂಡ ಬಿಟ್ಟವಳಾದರೆ... ಇಷ್ಟೊರ್ಷ ಇಲ್ಲದ್ದು ಈಗ ಯಾಕ ಅಂತ ಮಂದಿ ಆಡಿಕೊಂಡರೆ... ಹೀಗೆ. "ನಂಗ ಕೇಳಾಕಿತ್ರಿ ಆಂಟಿ. ಜನ್ಮ ಪೂರಾ ನೀ ಹೀಂಗs ಇರ್ಬೇಕಿತ್ತು. ನೀ ನಾಕ ಮಕ್ಕಳ ತಾಯಾದಿಯಲ್ಲ, ಹ್ಯಾಂಗಾದಿ? ಒಮ್ಮಿಯಾರ ಕೇಳಿದ್ಯಾ? ಮಕ್ಳ ಆಗಿಲ್ಲ, ನಿಂಗ ಮೈಮ್ಯಾಲ ಹೋಗಂಗಿಲ್ಲ ಹ್ಯಾಂಗದಿ ಮಗಳೇ ಅಂತ... ನಾ ಆರಾಂ ಮಾಡ್ಕಂಡ ಮ್ಯಾಲ ನಂಗೆ ಕುಂತೀ ಕಥಿ ಹೇಳಾಕ ಬರ್ತಾಳ. ಕುಂತೀ ಕಥಿ. ನಾ ಯಾಕ ಹಾಂಗ ಬದಕ್ಲೀ? ನನ್ನ ಇದೀಯಾ ಸತ್ತೀಯಾ ಅಂತ ಕೇಳದವನ ಕೂಟಾಗ, ಹೀಂಗ ತನ್ನ ಕೈಲೆ ನನ್ನ ಮೈ ಒಮ್ಮಿನೂ ಮುಟ್ಟದವನ ಕೂಟಾಗ ಹ್ಯಾಂಗ ಬದಕ್ಲೀ, ಉಸಿರುಗಟ್ಟತೈತಿ ನಂಗ. ಈಕಿಗಿಯೇನ ನಾ ಉರಲ ಹಾಕ್ಕೊಳ್ಳಿ ಕುಂತ ಅಳಾಕಾತು ಅಂತ ಕಾಯ್ಕೊಂಡ ಕುಂತಾಕಿ ಅದಾಳ...' ಅಂದಳು.

(೨೧ನೇ ಪುಟಕ್ಕೆ



ವೈದೇಹಿಯವರ ಕಥೆಗಳಲ್ಲಿ ಸ್ತ್ರೀತ್ವದ ನೆಲೆಗಳು : ಒಂದು ನೋಟ

–ಆರ್ ತಾರಿಣಿ ಶುಭದಾಯಿನಿ



ಸ್ತ್ರೀಯಾಗಿ ಬರೆಯುವುದೇ ಸ್ತ್ರೀತ್ವದ ಅನಾವರಣವೆಂದು ಬಗೆದು ಯಾವುದೇ ತಾತ್ವಿಕ ಹೊರೆಗಳಿಲ್ಲದೆ ಸಹಜವಾಗಿ ಬರೆಯುವ ವೈದೇಹಿಯವರು ಸೃಷ್ಟಿಸುವ ವೈವಿಧ್ಯಮಯ ಪಾತ್ರಗಳು ಅವರದ್ದೇ ಎನ್ನಬಹುದಾದ ಸ್ತ್ರೀತ್ವದ ಮೀಮಾಂಸೆಯನ್ನು ಕಟ್ಟಿದೆ. ಅಲ್ಲದೆ ಸ್ಥಾಪಿತ ಸ್ತ್ರೀತ್ವದ ಮೀಮಾಂಸೆಯ ಗ್ರಹಿಕೆಗಳುಮತ್ತು ತತ್ವಗಳ ಸರಳೀಕೃತ ರೂಪಗಳನ್ನು ಬಯಲಿಗೆಳೆಯಬಲ್ಲುದಾಗಿದೆ. ಇದರ ಒಂದು ವಿಶ್ಲೇಷಣೆ ಇಲ್ಲಿದೆ-ಸಂ.

'ಮಲೆಗಳಲ್ಲಿ ಮದುಮಗಳು' ಕಾದಂಬರಿಯ ಕೊನೆಯಲ್ಲಿ ಮುಟ್ಟಿನ ಬಿಡುವಿನ ಸುಖವನ್ನು ಅನುಭವಿಸುತ್ತಾ ಇದ್ದ ಚಿನ್ನಮ್ಮ ಮತ್ತು ಪೀಂಚಲು ಅವರ ಮೂಲಕ ಕುವೆಂಪು ಮಲೆನಾಡಿನ ಹೆಣ್ಣುಮಕ್ಕಳಿಗೆ ಆಗಲ್ಲದೆ ಇನ್ನಾವಾಗಲೂ ಸಿಗದ ವಿರಾಮವನ್ನು ಸಣ್ಣಗೆ ಸೂಚಿಸಿ, ಅವರ ಒಳಬಾಳುಗಳ ಬಗೆಗೆ ಬೆಳಕು ಚೆಲ್ಲುತ್ತಾರೆ. ಕುವೆಂಪು ಕೆದಕಿದ ಈ ಸಣ್ಣ ಜಗತ್ತುಗಳ ಒಳಗಿನ ಸುಖ, ಜಗಳ, ಕರಕರೆಗಳನ್ನು ಅಂತವೇ ಸೂಕ್ಷ್ಮದನಿಗಳಲ್ಲಿ ಶಕ್ತವಾಗಿ ಹಿಡಿದಿಟ್ಟು ಮುಂದುವರಿಸಿದವರು ವೈದೇಹಿ.ಹೆಣ್ಣಿನ ಜಗತ್ತುಗಳ ಕೆಳದನಿಗಳ (undertones) ಮೂಲಕ ತಾವು ಕೆದಕುತ್ತಿರುವ ಭೂಮದ ಅರಿವೇ ಇಲ್ಲದಷ್ಟು ಸಹಜತೆಯನ್ನು ತಮ್ಮ ಬರವಣಿಗೆಯಲ್ಲಿ ತಂದುಕೊಂಡಿರುವ ವೈದೇಹಿ ಅವರ ಕಥನಗಳು ಹೆಣ್ಣೋಟದ ಒಂದು ಹೊಸ ಬಗೆಯನ್ನೇ ನಿರ್ಮಾಣ ಮಾಡಿವೆ. ಒಳಬಾಳುಗಳ ಬಗೆಗೆ ಇರುವ ಕುತೂಹಲ ಮತ್ತು ಅವುಗಳನ್ನು ಕಲೆಯಾಗಿಸುವ ಶ್ರದ್ಧೆಗಳು ವೈದೇಹಿಯವರಲ್ಲಿ ವಿಶಿಷ್ಟವಾಗಿ ಕಾಣುವುದಕ್ಕೆ ಅವರು ಕಾಣಿಸುವ ಜಗತ್ತುಗಳು ಇದುವರೆಗು ಅನಾವರಣಗೊಳ್ಳದ ಸಾಮಾನ್ಯರ ಲೋಕವಷ್ಟೆ ಅಲ್ಲ ಅದು ಯಾರೂ ಪೂರ್ತಿಯಾಗಿ ಅರಿಯದ ಸ್ತ್ರೀಲೋಕ. ಅವರ ಮೂಲಕ ಜಗತ್ತನ್ನು ನೋಡುವ ಹೆಣ್ಣೋಟವು ಲೋಕದೃಷ್ಟಿಯನ್ನೆ ಬದಲಾಯಿಸುವಂತವು. ಈ ಕಾರಣಕ್ಕಾಗಿಯೇ ಹತ್ತಿರ ಹತ್ತಿರ ನಾಲ್ಕು ದಶಕಗಳಿಂದ ಸಾಹಿತ್ಯ ರಚನೆಯಲ್ಲಿ ತೊಡಗಿಕೊಂಡಿರುವ ವೈದೇಹಿ ಕನ್ನಡದ ಬಹುಮುಖ್ಯ ಹಾಗು ಬಹುಸೂಕ್ಷ್ಮ ದನಿಯಾಗಿ ನಿಲ್ಲುತ್ತಾರೆ.

ದಶಕಗಳಿಂದ ಕಥೆಗಳನ್ನು ಹೇಳುತ್ತಾ ಬಂದಿರುವ ವೈದೇಹಿಯವರ ಬರಹಗಳ ಅನನ್ಯತೆ ಇರುವುದು ಇನ್ನೊಂದು ಬದಿಯ ಜಗತ್ತನ್ನು ಕಾಣುವ ಕುತೂಹಲದಲ್ಲಿ. ಸಾಮಾನ್ಯೀಕರಣದ ಹೊದಿಕೆಯಲ್ಲಿ ಅಡಗಿರುವ ಅನೇಕ ಜಗತ್ತುಗಳು ಅಸಾಧಾರಣವೆಂಬಂತೆ ಕಾಣಲಾರವು. ಆದರೆ ಅವುಗಳೊಳಗೆ ಇರುವ ಜಡತೆಯನ್ನು ತೊಡೆದು ದೈನಿಕಗಳಲ್ಲಿ ಇರುವ ಹೊಳಹುಗಳನ್ನು ಕಾಣುವುದು ಸೃಜನಶೀಲತೆಯ ಕಣ್ಣು. ಇಂತಹ ಕಣ್ಣು ಖಂಡಿತವಾಗಿಯೂ ವೈದೇಹಿಯವರಲ್ಲಿ ಇದೆ.

ವೈದೇಹಿಯವರ ಕಥಾಜಗತ್ತು ಒಂದು ಸ್ತ್ರೀಗೋಲವನ್ನು ತೋರಿಸುವಂತದ್ದು. ಈ ತರಹದ ಬರವಣಿಗೆಗಳು ಸುಲಭವಾಗಿ ಸೀಮಿತ ಎನ್ನಿಸುವ ವಲಯಕ್ಕೆ ಸೇರುವಂತವು. ಸಾಧಾರಣವಾಗಿ ಲೇಖಕಿಯರು ಬರೆಯುವುದು ಸ್ತ್ರೀಲೋಕಗಳ ಅನುಭವಗಳಾದ್ದರಿಂದ ಅವು ನಿರ್ದಿಷ್ಟವಾಗಿ ಒಂದು ವರ್ಗದ ಅನುಭವಗಳನ್ನು ಸೂಚಿಸುತ್ತಿರುತ್ತವೆ ಎನ್ನುವ ಪೂರ್ವಾಗ್ರಹ ಆ ಬರಹಗಳ ಸುತ್ತ ಕವಿದಿರುತ್ತದೆ. ಹೆಚ್ಚೆಂದರೆ ಬದಲಾವಣೆ ಎನ್ನುವುದು ಇಲ್ಲಿ ಚಹಾ ಕಪ್ಪಿನೊಳಗಿನ ಅಲೆಗಳಂತೆ ಎನ್ನುವ ಧೋರಣೆಯು ಸರ್ವೇಸಾಮಾನ್ಯವಾಗಿರುವುದರಿಂದ ಸೂಕ್ಷ್ಮತೆಗಳು ಮರೆಯಾಗಿಬಿಡುತ್ತವೆ. ವೈದೇಹಿಯವರು ತಮ್ಮ ಬರವಣಿಯ ಮೂಲಕ ಸಣ್ಣಲೋಕಗಳ ಗ್ರಹಿಕೆಗಳನ್ನೇ ಸನ್ನೆಗೋಲುಗಳಂತೆ ಬಳಸಿ ಅಪಾರ ಅನುಭವಗಳನ್ನು ಮೀಟುತ್ತಾರೆ. ಹೆಣ್ಣಿನ ಅನುಭವ ಜಗತ್ತುಗಳಲ್ಲಿ ಇರುವ ಅನುಭವವು ಒಂದು ಹಂತದ ತನಕ ಪ್ರಮಾಣವಾಗಿ ನಿಂತು ಲೋಕದ ಅನುಭವಗಳನ್ನು ಶೋಧಿಸಿಕೊಳ್ಳಲು ಅನುವು ಮಾಡಿಕೊಡುತ್ತದೆ ಎನ್ನುವುದನ್ನು ವೈದೇಹಿ ತೋರಿಸಿಕೊಡುತ್ತಾರೆ.

ಕನ್ನಡದ ವಿಶಿಷ್ಟ ಬರಹಗಾರ್ತಿಯಾದ ವೈದೇಹಿಯವರಲ್ಲಿ ಸ್ತ್ರೀತ್ವ ಒಂದು ಮೂಲಧಾತು. ಆ ಸತ್ವದಿಂದ ಅವರು ಜಗತ್ತನ್ನು ನೋಡಬಲ್ಲರು. ಅದೊಂದು ವಿಶ್ವಕಾಣ್ಕೆ ಎಂಬಂತೆ ಭ್ರಮಿಸದಂತೆ ತಾವು ಕಂಡ ಜಗತ್ತನಲ್ಲಿಯೇ ಹೊಳೆಯುವ ಸತ್ಯಗಳನ್ನು ಅಷ್ಟೇ ಸೂಕ್ಷ್ಮದನಿಗಳಲ್ಲಿ ಕೇಳಿಸಬಲ್ಲರು. ಸ್ತ್ರೀವಾದವನ್ನು ಒಂದು ಪ್ರತ್ಯಯವಾಗಿ ಭಾವಿಸದೆ ಸ್ತ್ರೀತ್ವದ ಅನೇಕ ಶಕ್ತಿಗಳನ್ನು ಹೇಳುವುದು ಲೋಕದೃಷ್ಟಿಯೂ ಹೌದು ತಮ್ಮ ನಿಶ್ಚಿತತೆಗಳನ್ನು ಬಿಟ್ಟುಕೊಡದೆ ಇರುವ ಉಪಾಯವೂ ಹೌದು. ವೈದೇಹಿಯವರ ಸ್ತ್ರೀತ್ವದ ಗ್ರಹಿಕೆ ವಿಶಿಷ್ಟವಾದುದು. ಅಪರೂಪವಾದದ್ದೇನೊ ಸ್ತ್ರೀತ್ವದಲ್ಲಿದೆ ಎನ್ನುವುದನ್ನು ಕಾಣಿಸುವಂತೆ ಅವರು ಬರೆಯುತ್ತಾರೆ.

ಸ್ತ್ರೀತ್ವದ ಬಗೆಗಿನ ಈ ನಂಬಿಕೆ ಮಹತ್ವದ್ದು. ಏಕೆಂದರೆ ಒಂದು ಕಡೆಯಿಂದ ಸ್ತ್ರೀತ್ವ ಎನ್ನುವುದು ಗೋಳಿನ ಕಥನವಾಗಿ ಶೋಷಣೆಯ ಅವತರಣಿಕೆಗಳಾಗಿ ಗಂಡು ಹೆಣ್ಣುಗಳ ನಡುವಿನ ಸಂಘರ್ಷಗಳ ಹಿಂಸಾತ್ಮಕತೆಗೆ ಇನ್ನೊಂದು ಹೆಸರಾಗಿ ಕಾಣುತ್ತಿರುವ ನೋಟ. ಇನ್ನೊಂದೆಡೆ ದೇವಿಯಾಗಿ ಸ್ತ್ರೀತ್ವದ ದಶಾಂಗುಲ ಉತ್ಪ್ರೇಕ್ಷೆಯ ಚಿತ್ರಣ. ಇವೆರೆಡರ ನಡುವೆ ಒಂದು ಸಹಜತೆ ಎನ್ನುವುದು ಹೆಣ್ತನಕ್ಕೆ ಇದೆ ಎನ್ನುವ ನಂಬಿಕೆ ಕಳೆದು ಹೋದಂತೆ ಇದೆ. ಹೀಗೆ ಸೃಷ್ಟಿಯಾದ ಅನೇಕ ಬಗೆಯ ಅಚ್ಚುಗಳಲ್ಲಿ ಬರೆಯಲ್ಪಡುತ್ತಿರುವ ಹೆಣ್ಣಿನ ಕಥನಗಳು ಈಗಾಗಲೇ ನಮ್ಮ ಓದುಗಳಲ್ಲಿ ಒಂದು ಕ್ಲೀಷೆಯ ಚೌಕಟ್ಟನ್ನು ನಿರ್ಮಿಸಿಬಿಟ್ಟಿವೆ. ವಾದಗಳ ಕಿಲಾಡಿತನ, ತರ್ಕದ ಪರಾಕಾಷ್ಠೆಯಲ್ಲಿ ಕಪ್ಪು ಬಿಳುಪಾಗಿ ತೋರುವ ಸತ್ಯ, ಕರಿಕೋಟಿನ ಗೆಲುವು ತಂದು ಕೊಡುವ ನಿರುಂಬಳತೆ ಇವು ಸ್ತ್ರೀಲೋಕದ ಬಗೆಗೆ ಒಂದು ಆಂಟಿಸೆಪ್ಟಿಕ್ ಆದ ಧೋರಣೆಯನ್ನು ತಳೆಯುವಂತೆ ಮಾಡುತ್ತವೆ. ಸ್ತ್ರೀಪರಿಧಿಯಲ್ಲಿ ನಿಂತುಕೊಂಡು ಬರೆಯುವ ಲೇಖಕರಿಗೆ ತೊಡಕಾಗುವ ಇಂತಹ ಉಪಾಧಿಗಳಿಂದ ವೈದೇಹಿಯಂತಹ ಲೇಖಕಿಯರು ತಾವು ಸ್ತ್ರೀಯರಾಗಿ ಉಳಿಯುವ ಮೂಲಕವೇ ಸಾಧಿಸಬಹುದಾದ ಕೆಲವು ಉಪಾಯಗಳನ್ನು ಶೋಧಿಸಿಕೊಳ್ಳುತ್ತಿರುತ್ತಾರೆ. ಸ್ತ್ರೀಲೋಕಗಳ ಗ್ರಹಿಕೆಗಳ ಮೂಲಕವೇ ಒಂದು ಲೋಕದೃಷ್ಟಿಯಾಗಿಸಬಹುದು ಎನ್ನುವುದನ್ನು ನಿರೂಪಿಸುವಂತೆ ಅವರು ಬರೆಯುತ್ತಾರೆ. ಹೆಣ್ತನವೆಂದರೆ ಲಾವಣ್ಯ, ಸೌಂದರ್ಯ, ಮಾಂಸಲ ಚಹರೆ ಎಂದು ಭಾವಿಸಿರುವ ಲೋಕಕ್ಕೆ ಸವಾಲು ಹಾಕುವಂತಹ ಹೆಣ್ಣುಗಳು ಇರುವುದನ್ನು ವೈದೇಹಿಯವರ ಕತೆಗಳು ತೋರಿಸಿಕೊಟ್ಟಿವೆ. ಅಂತೆಯೇ ಕಂಬಗಳ ಹಿಂದೆ ನಿಂತು, ಗಂಡಸಿನ ಪ್ರಮುಖ ಸ್ಥಳಗಳಾದ ನಡುಮನೆ, ಪಡಸಾಲೆಗಳ ಅಧಿಕಾರ ದರ್ಪಗಳನ್ನು ವೀಕ್ಷಿಸುತ್ತಲೇ ಬೆಳೆದ ಬದುಕುಗಳ ಕಥನಗಳೂ ಅವರಲ್ಲಿದೆ. ಅಜ್ಜಿ, ಅಮ್ಮನಿಂದ ಹಿಡಿದು ನಿನ್ನೆ ಮೊನ್ನೆ ತಲೆಯೆತ್ತಿದ ಸಮಾಜಶಾಸ್ತ್ರಜ್ಞೆಯವರೆಗೆ ಅನೇಕ ತಲೆಮಾರುಗಳಲ್ಲಿ ಈ ವಿನ್ಯಾಸಗಳು ಬಗೆಬಗೆಯಾಗಿ ಕಾಣಸಿಗುತ್ತವೆ. ದಶಕಗಳಲ್ಲಿ ಸಾಗಿಭಂದ ಹೆಣ್ಣಿನ ಆಖ್ಯಾನಗಳನ್ನು ಹೇಳುತ್ತಾ ಬಂದಿರುವ ವೈದೇಹಿಯವರಲ್ಲಿ ಅವು ಹೇಳಿ ಮುಗಿಯುವ ಕಥೆಗಳಾಗಿಲ್ಲ. ಬದಲಾಗಿ ಇನ್ನೂ ಮೊಗೆದುಕೊಳ್ಳಲು ಇರುವ ಜಿನುಗುಹಳ್ಳಗಳಾಗಿಯೇ ಉಳಿದಿವೆ.

ವೈದೇಹಿಯವರ ಕಥನಗಳು ಕನ್ನಡದಲ್ಲಿಯೇ ಅಪರೂಪವೆನ್ನಿಸುವ ಸ್ತ್ರೀಸಂವೇದನೆಯನ್ನು ರೂಢಿಸಿಕೊಂಡಿವೆ. ಗಟ್ಟಿದನಿಯಲ್ಲಿ ತಮ್ಮತನದ ಬಗೆಗೆ ಮಾತನಾಡದೆಯೂ ಅವು ತಮ್ಮ ಅಸ್ತಿತ್ವದ ಬಗೆಗೆ ದೃಢವಾದ ಭಾವವನ್ನು ಹೊಂದಿರಬಹುದು ಎನ್ನುವುದನ್ನು ಅವು ತೋರಿಸಿಕೊಡುತ್ತವೆ. ಪ್ರತಿಭಟನೆಯನ್ನು ಅತ್ಯಂತ ಸಹಜವಾಗಿ ಎನ್ನುವಂತೆ ಮೂಡಿಸುವ ಕೌಶಲವನ್ನು ಅವು ತೋರಿಸಿಕೊಡುತ್ತವೆ. ತತ್ವದ ಹಿನ್ನೆಲೆಯಲ್ಲಿ ಓದುವಾಗ ಪಿತೃಪ್ರಧಾನತೆ, ಅಧಿಕಾರ ಕೇಂದ್ರಗಳೆಂಬ ಪರಿಭಾಷೆಯ ಪದಗಳು ಅಸಹಜವೆನ್ನುವ ಹಾಗೆ ಹೊಸ್ತಿಲಿನ ಆಚೆಕಡೆಯೇ ನಿಂತುಬಿಡುತ್ತವೆ. ಆದರೆ ವೈದೇಹಿಯವರು ಇವುಗಳನ್ನು ನಡುಮನೆಗೆ ತರುತ್ತಾರೆ ಪರಿಭಾಷೆಗಳ ವಾಸನೆಯೇ ತಮ್ಮೆಡೆಗೆ ಸುಳಿಯದಂತೆ! ಸಾಮಾನ್ಯ ಮನುಷ್ಯರಾಗಿ ಬದುಕುವವರಿಗೆ ಕಾಡುವ ಸಾಮಾಜಿಕ ಬಾಧೆಗಳನ್ನೇ ಅನುಭವಿಸುವ ಹೆಂಗಸರು ತಾವು ಹೆಣ್ಣಾಗಿ ಹುಟ್ಟಿದ ಕಾರಣದಿಂದ ಅದೇ ಬಾಧೆಗಳನ್ನು ನೋಡುವ ರೀತಿ ಮತ್ತು ನಿರ್ವಹಿಸುವ ರೀತಿ ಎರಡೂ ವೈದೇಹಿಯವರಲ್ಲಿ ಸೂಕ್ಷ್ಮವಾಗಿ ವ್ಯಕ್ತಗೊಳ್ಳುವಂತವು.

'ಅಕ್ಕು' ಕಥೆಯ ನಾಯಕಿ ಅಕ್ಕು ತನ್ನ 'ಪಿರ್ಕಿತನ'ದಿಂದ ಕಾಣಿಸುವ ಸತ್ಯಗಳು ಲೋಕದ ಪೊಳ್ಳುತನಗಳನ್ನು ಬಯಲಿಗೆಳೆಯುತ್ತಾಳಲ್ಲದೆ ತನಗರಿವಿಲ್ಲದೆ ಅಧಿಕಾರಗಳನ್ನು ಪ್ರಶ್ನೆ ಮಾಡುವ ಧೈರ್ಯವನ್ನು ತೋರುತ್ತಾಳೆ. ಹೆಣ್ಣಿನ ಕಾಲಿನಂತಹ ಸುಂದರ ಕಾಲುಗಳನ್ನು ಹೊಂದಿರದ ವಾಣಿಮಾಯಿ ತನ್ನ ಮೆಟ್ಟು ಮೆಟ್ಟುವ

ಬಯಕೆಯಿಂದಲೇ ಬಜಾರಿ ಎಂದು ಗುರುತಿಸಿಕೊಂಡವಳು. ಸಾಯುವ ಹಾಸಿಗೆಯಲ್ಲಿದ್ದರೂ ಅದೇ ಕಾಲಿನಿಂದಲೇ ತನ್ನ ಹೀಗೆಳೆಯುವ ಗಂಡಸನ್ನು ಒದ್ದು ಓಡಿಸುವವಳು. ಆದರೆ ಅದೇ 'ಆರತಿ ತಟ್ಟೆ'ಯ ಮೀನಾಕ್ಷತ್ತೆ ಗಂಡಿನ ಅಧಿಕಾರದ ಒಳಗೆ ಇದ್ದುಕೊಂಡೇ ತನ್ನ ಅಧಿಕಾರಗಳನ್ನು ಬಳಸಬಲ್ಲ ಚಾಣಾಕ್ಷತನ ಹೊಂದಿದವಳು. ವೈದೇಹಿಯವರ ಕಥನಗಳಲ್ಲಿ ಅಂತಹ ಎಷ್ಟೊ ಹೆಣ್ಣುಗಳು ತಮ್ಮ ಪ್ರತಿಭಟನೆಯ ರೀತಿಗಳನ್ನು ಬಿಟ್ಟುಕೊಡುವುದೇ ಇಲ್ಲ; ಆದರೆ ಸಾಧಿಸಿ ತೋರಿಸುತ್ತಾರೆ. ಇಂತಹ ಅನೇಕ ಪ್ರತಿಭಟನೆಯ ಸೊಲ್ಲುಗಳು, ಕ್ರಿಯೆಗಳು ತುಂಬ ಸಹಜವಾಗಿ ಬರುತ್ತವೆ. ಆದರೆ ಅವು ಹೆಣ್ತನದ ಮೀಮಾಂಸೆಯನ್ನು ಮಂಡಿಸುವ ವಿಧಾನಗಳು ಎಲ್ಲಿಯೂ ಬದುಕಿನ ಚೌಕಟ್ಟನ್ನು ಬಿಟ್ಟು ಬಯಲಿಗೆ ಬರುವುದೇ ಇಲ್ಲ. ಇದು ಶುದ್ಧ ಅಹಿಂಸಾಮಾರ್ಗದ ಪ್ರತಿಭಟನೆಯಂತೆ ಕಂಡರೂ ಈ ಪ್ರತಿಭಟನೆಗಳು ತಾಗಿಕೊಳ್ಳುತ್ತಿರುವುದು ಹಿಂಸಾತ್ಮಕವಾದ ಜಗತ್ತಿನೊಂದಿಗೇ ಎನ್ನುವುದನ್ನು ಗಮನಿಸಬೇಕು. ಆದುದರಿಂದ ಕಥನದೊಳಗೆ ಒಂದು ಪ್ರತಿಭಟನೆಯನ್ನು ದಾಖಲಿಸುವ ಮೂಲಕ ಒಂದು ಉಪಾಯವನ್ನೂ ಸೂಚಿಸುವ ಅಪಾಯವನ್ನು ವೈದೇಹಿ ಕಥನಕಾರ್ತಿಯಾಗಿ ಬಲ್ಲರು. ಪ್ರತಿರೋಧದ ದನಿಯು ಅಂತರಂಗದಲ್ಲಿ ಅಳು, ವಿಷಾದ ಮೂಕ ಅಭಿವ್ಯಕ್ತಿಗಳ ದೊಡ್ಡ ಗಂಟನ್ನೇ ಹೊಂದಿರುತ್ತದೆ. ಪ್ರತಿಭಟನೆ ಎನ್ನುವುದು ಈ ಎಲ್ಲ ಲಯಗಳನ್ನು ಹೊಂದಿರುವಂತೆ ಮಾಡುವುದೇ ವೈದೇಹಿಯವರ ಕಥನಗಳ ಗುಣ.

ವೈದೇಹಿಯರುವ ಹೆಣ್ಣಿನ typeಗಳನ್ನು ಸೃಷ್ಟಿಸುವುದಕ್ಕಿಂತ tropeಗಳನ್ನು ಸೃಷ್ಟಿಸುವುದಕ್ಕೆ ಆಸಕ್ತಿ ಹೊಂದಿರುವವರು. ಅವರಲ್ಲಿ ಒಂದು ಸ್ತ್ರೀತ್ವದ ಮೇರು ವ್ಯಕ್ತಿತ್ವ ಎನ್ನುವುದಿಲ್ಲ, ಬದಲಾಗಿ ಅವರಲ್ಲಿ ಅನೇಕ ಬಗೆಯ ವ್ಯಕ್ತಿ ವಿಶಿಷ್ಟತೆಗಳನ್ನು ಹೊಂದಿದ ಮಹಿಳೆಯರಿದ್ದಾರೆ. ವೈದೇಹಿಯವರ ಕತೆಗಳ ಯಾನದಲ್ಲಿ ಸ್ತ್ರೀವಿಶಿಷ್ಟತೆಯೇ ಮೂಲ; ಆದರೆ ಅವುಗಳು ತಳೆಯುವ ಆಕಾರಗಳು ಮಾತ್ರ ಬಹುವಿಧವಾದವು. ವೈದೇಹಿಯವರಲ್ಲಿ ಸ್ತ್ರೀಲೇಖದ ಅನೇಕ ಪದರಗಳಿವೆ. ಅವುಗಳ ಆಳಕ್ಕೆ ಇಳಿದಂತೆ ಒಂದೊಂದು ಬಗೆಯ ಸ್ತ್ರೀಲೋಕವನ್ನು ತೆರೆದಿಡುತ್ತವೆ. ಎಂಬತ್ತರ ದಶಕದಲ್ಲಿ ಸ್ತ್ರೀವಾದವು ಮೇಲೆತ್ತಿ ಹಿಡಿದ ಸ್ತ್ರೀ ಲೈಂಗಿಕ ಬಯಕೆಗಳ ಅಭಿವ್ಯಕ್ತಿ ಮತ್ತು ಸ್ತ್ರೀ ಸ್ವಾತಂತ್ರ್ಯದ ವಿಷಯಗಳು ವೈದೇಹಿಯವರಲ್ಲಿಯೂ ಬಂದಿವೆ. ಆದರೆ ಅವು ಈ ಸಿದ್ಧ ಮಾದರಿಗಳನ್ನು ದುಡಿಸಿಕೊಳ್ಳುವ ರೀತಿಯಲ್ಲಿ ವೈದೇಹಿ ಅವರು ಭಿನ್ನವಾಗುತ್ತಾರೆ. ಉದಾಹರಣೆಗೆ ಲೈಂಗಿಕ ಅನುಭವದ ಆಶೆಯಿಂದ ಯಾರನ್ನೋ ಕಾಯುವ ಸೌಗಂಧಿ ತನ್ನ ಸ್ವಗತಗಳಲ್ಲಿ ತನ್ನ ಬಯಕೆಗಳನ್ನು ಸಣ್ಣದಾಗಿಯೇ ಹೊರಹಾಕುತ್ತಾಳೆ. ಆದರೆ ವಾಸ್ತವದಲ್ಲಿ ಆಕೆ ತನ್ನ ಸ್ವಗತಗಳಿಂದ ಹೊರಬರಲಾದರೆ ಉಳಿಯುತ್ತಾಳಾದ್ದರಿಂದ ಅವಳು ಒಂದು ಸಾಮಾಜಿಕ ಸಂದರ್ಭವನ್ನು ಮೀರಲಾರದ ಅಸಹಾಯಕತೆಯನ್ನು ಇಟ್ಟುಕೊಂಡಿದ್ದಾಳೆ. ಅವಳು ಬಲವಂತವಾಗಿ ಕ್ರಾಂತಿಕಾರಿಯಾಗುವುದಿಲ್ಲ. ಮನೆಯಲ್ಲಿಯೇ ಇರುವ ಮಾಲತಿ('ಗೂಡಿನೊಳಗೊಂದು ಹಕ್ಕಿ' ಕಥೆಯ ನಾಯಕಿ) ತನಗೆ ಹೊರ ಪ್ರಪಂಚದಿಂದ ಸ್ವಾತಂತ್ರ್ಯ ಬೇಕು ಎಂದು ತಾನು ಒಳಗೆ ಉಳಿದು ತಾನೇ ಗಂಡನಿಂದ ಹೊರಗೆ ಬೀಗ ಹಾಕಿಸಿಕೊಳ್ಳುತ್ತಾಳೆ. ಇಡೀ ಕಥೆ ಬಿಡುಗಡೆ ಮತ್ತು ಬಂಧನದ ಅಸಂಗತತೆಗಳನ್ನು ತಾಳೆ ಹಾಕುತ್ತದೆ. ಸ್ವಾತಂತ್ರ್ಯವೆಂದರೆ ಬಂಧನವೇ ಎನ್ನುವ ಮಟ್ಟಿಗೆ ಅದು ಬದಲಾಗುತ್ತದೆ. ಒಬ್ಬಳೇ ಇರುವಾಗಿನ ಅವಳ ಬೆತ್ತಲೆ ಅವಳಿಗೇ ಅಸಹ್ಯ ತರುತ್ತದೆ. ಈ ಎರಡು ಕಥೆಗಳನ್ನು ಇಲ್ಲಿ ಉಲ್ಲೇಖಿಸಿದುದಕ್ಕೆ ಕಾರಣ, ಅವುಗಳು ಒಂದು ವಾದವನ್ನು, ಒಂದು ಒಪ್ಪಿತ ಸತ್ಯವನ್ನು ಹಾಗೆಯೇ ಸ್ವೀಕರಿಸುವುದಿರುವುದಕ್ಕೆ ಹಾಗೆಯೇ ಅವು ತರ್ಕಿಸುವ ರೀತಿಯಲ್ಲಿಯೂ ಅವು ತಮ್ಮ ಕಥನದ ಮನೋರಂಜನಾತ್ಮಕತೆಯನ್ನು ಬಿಟ್ಟುಕೊಡದೇ ಇರುವುದಕ್ಕೆ.

ವೈದೇಹಿಯವರ ಕತೆಗಳು ಹೆಣ್ಣಿನ ಜಗತ್ತಿನೊಂದಿಗೇ ಆಧುನಿಕತೆ ಮತ್ತು ಸಂಪ್ರದಾಯಿಕತೆಗಳ ಪಲ್ಲಟಗಳನ್ನು ಸೂಚಿಸುತ್ತವೆ. ಕನ್ನಡದ ಸಣ್ಣಕತೆಗಳು ಆಧುನಿಕತೆಯನ್ನು ಪರಿಭಾವಿಸಿದ ರೀತಿಯಲ್ಲಿ ಇರುವ ಒಂದು ಸಂವಾದಿ ಗುಣವನ್ನು ವೈದೇಹಿಯವರ ಕಥೆಗಳು ಸಹ ಹೊಂದಿವೆ. 'ಗುಲಾಬಿ ಟಾಕೀಸಿ'ನಿಂದ ಹಿಡಿದು 'ಮನೆಯವರೆಗಿನ ಹಾದಿ' ತನಕ ಆಧುನಿಕತೆಯ ಸೂಕ್ಷ್ಮ ಚರ್ಚೆ ಇರುವುದನ್ನು ಗಮನಿಸಬಹುದು. ಹೀಗೆ ಸಾಮಾಜಿಕ ಸಂಗತಿಗಳನ್ನು ನಿರ್ವಹಿಸುವ ತುಡಿತ ಅವರ ಇತ್ತೀಚಿನ ಕತೆಗಳಲ್ಲಿ ಇನ್ನೂ ಹೆಚ್ಚಿನದಾಗಿಯೇ ಕಾಣುತ್ತಿದೆ. 'ಕ್ರೌಂಚ ಪಕ್ಷಿಗಳು' ಕಥಾ ಸಂಕಲನದ ನಂತರ ವೈದೇಹಿಯವರ ಧಾಟಿ ಬದಲಾಗುತ್ತ ಬಂದಿರುವುದನ್ನು ಗಮನಿಸಬಹುದು. ಇಲ್ಲಿ ಹೆಣ್ತನ ಎನ್ನುವುದು ಮಾನವತೆಯಾಗಿ ವಿಸ್ತರಣೆಗೊಳ್ಳುವುದನ್ನು ಗಮನಿಸಬಹುದು. ಅವರು ಪ್ರಜ್ಞಾಪೂರ್ವಕವಾಗಿ ಕತೆ ಹೇಳುತ್ತಿದ್ದಾರೆ ಎನ್ನುವಷ್ಟರ ಮಟ್ಟಿಗೆ ಅವರ ಕತೆಗಳ ಧಾಟಿ ಬದಲಾಗುತ್ತ ಬಂದಿರುವುದನ್ನು ಗಮನಿಸಬಹುದು.



(ಚಿತ್ರದುರ್ಗದ ಬಳಿಯ ಜವನಗೊಂಡನಹಳ್ಳಿ ಪ್ರ.ದ. ಕಾಲೇಜಿನಲ್ಲಿ ಇಂಗ್ಲಿಷ್ ಅಧ್ಯಾಪಕಿಯಾಗಿರುವ ಲೇಖಕಿ ತಾರಿಣಿ ಶುಭದಾಯಿನಿ ಕವಯತ್ರಿ ಮತ್ತು ವಿಮರ್ಶಕಿಯೂ ಆಗಿ ಹೆಸರು ಮಾಡಿದವರು)

ನಿಮ್ಮ ಪತ್ರ

ಪ್ರಿಯ ಸಂಪಾದಕರೇ,

ನಿಮ್ಮ ಪತ್ರಿಕೆ ಒಂದು ಸಾಂಸ್ಕೃತಿಕ ಕಿರುಪತ್ರಿಕೆ ಮಾಡಬೇಕಾದ ಎಲ್ಲ ಕೆಲಸವನ್ನೂ ಮಾಡುತ್ತಿದೆ. ಕಿರು ಪತ್ರಿಕೆಗಳು ಸಂಶೋಧಾನತ್ಮಕ-ಅಕಾಡೆಮಿಕ್ ಲೇಖನಗಳನ್ನು ಪ್ರಕಟಿಸಬಾರದೆಂದಿಲ್ಲ. ಕಿರು ಪತ್ರಿಕೆಗಳಲ್ಲಿ ಇರಲೇಬೇಕಾದ ಒಂದು ಸ್ತರದ ಸಾಂಸ್ಕೃತಿಕ ಸದ್ಯತನ ಮತ್ತು ತುರ್ತು ಎರಡೂ ನಿಮ್ಮ ಪತ್ರಿಕೆಯಲ್ಲಿ ಇದೆ. ಸಾಹಿತ್ಯ ಮತ್ತು ಕೃತಿ ವಿಮರ್ಶೆಗೆ ಇನ್ನೊಂದಿಷ್ಟು ಪುಟಗಳು ಬೇಕೆಂದು ಬರಹಗಾರರಿಗೆ ಅನಿಸಿದರೂ ಇದೇನೂ ಸಾಹಿತ್ಯ ಪತ್ರಿಕೆ ಮಾತ್ರವಲ್ಲವಲ್ಲ?

–ಕೆ. ಸತ್ಯನಾರಾಯಣ, ಬೆಂಗಳೂರು

ಫೆಬ್ರುವರಿ ತಿಂಗಳ ಸಂಚಿಕೆಯಲ್ಲಿನ ಓಎಲ್ಲೆನ್ ಹಾಗೂ ರಾಜೇಂದ್ರ ಚೆನ್ನಿಯವರ ಬರಹಗಳು ತುಂಬಾ ಹಿಡಿಸಿದವು. ಓಎಲ್ಲೆನ್ ಅವರು ವಚನಗಳ ಉಲ್ಲೇಖಗಳ ಮೂಲಕ ಸ್ಥಾಪಿಸಬಯಸುವ ವಿಷಯ–"ನಮ್ಮ ಇಂದಿನ ಬದುಕಿಗೆ ಅಗತ್ಯವಾದ ತತ್ವಗಳನ್ನು ವಚನಗಳಲ್ಲಿ ಕಂಡು ನಮಗೆ ನಮ್ಮ ಸುತ್ತಲ ಬದುಕಿಗೆ ಅನ್ವಯಿಸಿಕೊಂಡು ಜಾರಿಗೆ ತಂದುಕೊಳ್ಳುವುದು ಒಬ್ಬೊಬ್ಬರ ಬದುಕಿಗೆ ಅನ್ವಯಿಸಿಕೊಂಡು ಜಾರಿಗೆ ತಂದುಕೊಳ್ಳುವುದು ಒಬ್ಬೊಬ್ಬರೂ ಮಾಡಬಹುದಾದ ಕೆಲಸ"– ಎಂದು ಹೇಳುತ್ತಾ, ಇದನ್ನು ಬಿಟ್ಟು "ಕುರುಹಿನ ಮತಧರ್ಮವಾಗಿಸಿ ಹಾಳುಮಾಡಿಕೊಳ್ಳುತ್ತಿದ್ದೇವೆ" ಎಂಬ "ದುರಂತ"ದತ್ತ ಬೆರಳು ತೋರಿದ್ದರೆ, ಚೆನ್ನಿಯವರು ಯಾವುದೇ ವಚನದ ಉಲ್ಲೇಖವಿಲ್ಲದೇ ಕೂಡ ಹೆಚ್ಚು ಕಡಿಮೆ ಇದೇ ಆಶಯದತ್ತ ಸೂಚನೆ ನೀಡಿ, ವೀರಶೈವ–ಲಿಂಗಾಯತದ ಈಗಿನ ಸಾಮಾಜಿಕ ನಡಾವಳಿ ಹೇಗೆ "ವಚನ ಚಳುವಳಿಯ ಸಮಾನತೆಯ ಮೌಲ್ಯಗಳನ್ನು ಮರೆತುಬಿಟ್ಟಿ"ದ್ದಾರೆ ಎಂದು ಹೇಳುತ್ತಾ ಈಗಿನ ಪರಿಸ್ಥಿತಿ ಹೇಗೆ ಅಪಹಾಸ್ಯಕ್ಕೆ ಕಾರಣವಾಗಿದೆ ಎಂಬ ನಿಜದೆಡೆಗೆ ಬೆರಳು ತೋರಿದ್ದಾರೆ. ಇಬ್ಬರೂ ವಚನಗಳ ಕುರಿತು, ವಚನ ಕಾಲದ ಸಾಮಾಜಿಕ ಜೀವನದ ಆಳದ ಅರಿವುಳ್ಳವರೇ ಆಗಿದ್ದು ಈಗಿನ ಪರಿಸ್ಥಿತಿ ಯನ್ನು ನಿರ್ಮಮವಾಗಿ ವಿಶ್ಲೇಷಿಸಿರುವುದು ನನಗೆ ಮುಖ್ಯವಾಗಿ ಕಂಡಿದೆ.

–ಕೆ. ಲಕ್ಷ್ಮೀನರಸಿಂಹ, ಬೆಂಗಳೂರು

ಕಳೆದ ಸಂಚಿಕೆ ಕೆಲವೇ ಲೇಖನಗಳನ್ನು ಹೊತ್ತು ಹೊತ್ತು ಬಂದಿದ್ದರೂ, ಅವೆಲ್ಲವೂ ಮೌಲಿಕ ಲೇಖನಗಳೇ ಆಗಿವೆ. ಮೊದಲ ಪುಟದಿಂದ ಆರಂಭವಾಗುವ ನಿಮ್ಮ ಸಂಪಾದಕೀಯ ಟಿಪ್ಪಣಿಗಳಿಂದ ಹಿಡಿದು ದೇವನೂರರ ಜೊತೆ ಮಾತುಕತೆ, ವೀರಶೈವ-ಲಿಂಗಾಯುತ ವಿವಾದದ ಎರಡು ನೋಟಗಳನ್ನು ಕೊಡುವಂತಿರುವವಿದ್ವಾಂಸ ಓಎಲ್ಲೆನ್ ಮತ್ತು ವಿಮರ್ಶಕ ಚೆನ್ನಿವರ ಲೇಖನಗಳು ಮತ್ತು 'ದ ವೈರ್' ಪತ್ರಿಕೆಯಿಂದ ಅನುವಾದವಾದ ಬಾಬ್ರಿ ಮಸೀದಿಯ ದುಷ್ಟಾಂತ್ಯ ಲೇಖನಗಳವರೆಗೆ ಎಲ್ಲ ಲೇಖನಗಳೂ ನನಗೆ ತುಂಬ ಮೆಚ್ಚುಗೆಯಾದವು.

–ನಾಗಭೂಷಣ ಪಟೇಲ್, ಬೆಂಗಳೂರು

ಕಳೆದ ಸಂಚಿಕೆಯಲ್ಲಿನ ದೇವನೂರ ಮಹಾದೇವ ಅವರೊಡನೆಯ ಸಂದರ್ಶನ ನಿರಾಶೆ ಹುಟ್ಟಿಸಿತು. 'ಸರ್ವೋದಯ ಕರ್ನಾಟಕ'ವನ್ನು ಕಟ್ಟಲಾಗದ ಅವರು ಅದನ್ನು ಈಗ ಸ್ವರಾಜ್ ಇಂಡಿಯಾದಲ್ಲಿ ವಿಲೀನಗೊಳಿಸಿದ್ದೇನೆ ಎಂದು ಹೇಳುವ ಮೂಲಕ ತಮ್ಮ ನಿಷ್ಕ್ರಿಯತೆ ಮತ್ತು ಬೇಜವಾಬ್ದಾರಿತನವನ್ನು ಮರೆಮಾಚಿಕೊಳ್ಳಲೆತ್ನಿಸಿದ್ದಾರಷ್ಟೆ. ಜಾಣಮಾತುಗಳು ಹೆಚ್ಚು ಕಾಲ ನಡೆಯುವುದಿಲ್ಲ.

–ಎಂ.ಎಚ್. ರಾಜಶೇಖರ, ಶಿವಮೊಗ್ಗ

ಬಹಳ ದಿನಗಳ ನಂತರ ನಿಮ್ಮ ಪತ್ರಿಕೆಯಲ್ಲಾದರೂ 'ನವಿಲು ಗರಿ'ಯಲ್ಲಿ ಹಿರಿಯ ಖ್ಯಾತ ಕವಿ ಸಿದ್ದಲಿಂಗಯ್ಯ ಅವರ ಕವನ ಓದಿ ಧನ್ಯನಾದೆ. " ಕಂಡರೂ ಕಾಣದಂತಿರಬೇಡ ಭ್ರಮೆಯಲ್ಲಿ/ ನಿಜದ ಬೆಳಕೇ ನಿನಗೆ ದಾರಿದೀಪ" ಅವರ ಕವನದ ಈ ಸಾಲುಗಳು ನನ್ನ ಮನಸ್ಸಿನಲ್ಲಿ ಇನ್ನೂ ಅನುರಣಿಸುತ್ತಿವೆ.

–ಡಾ. ಎಂ. ಈ. ಶಿವಕುಮಾರ್ ಹೊನ್ನಾಳಿ, ರಾಣಿಬೆನ್ನೂರು

ಪುಸ್ತಕಾವಲೋಕನ



ಪು : ಕಪಿಲೆ ಹರಿದಳು ಕಡಲಿಗೆ (ಕಾದಂಬರಿ) ಲೇ: ಮಲೆಯೂರು ಗುರುಸ್ವಾಮಿ
ಪ್ರ: ಸಂವಹನ ಪ್ರಕಾಶನ, ಮೈಸೂರು ಪು: ೩೮೦ ಬೆಲೆ : ರೂ.೩೦೦/-

ತ್ಯಾಗರತ್ನರಾದ ನಾಗರತ್ನಮ್ಮನವರ ರೋಚಕ ಕಥೆ



'ಕಪಿಲೆ ಹರಿದಳು ಕಡಲಿಗೆ' ಕವಿತೆಯೊಂದರ ಸುಂದರ ಸಾಲಿನಂತೆ ತೋರುವ ಹೆಸರಿನ ಈ ಕೃತಿ ನಮ್ಮ ಕಾಲದಲ್ಲೇ ಬದುಕಿ ಬಾಳಿದ ಸಂಗೀತ-ನೃತ್ಯ ಕ್ಷೇತ್ರದ ಅಪ್ರತಿಮ ಕಲಾವಿದೆಯೊಬ್ಬರ ಜೀವನವನ್ನು ಆಧರಿಸಿದ ಜೀವನ ಚರಿತ್ರೆಯೇ, ಅವರ ಯಶೋಗಾಥೆಯನ್ನು ಹೇಳುವ ಕಾಲ್ಪನಿಕ ಚಿತ್ರಣವೇ? ಎಂಬ ಪ್ರಶ್ನೆಗಳನ್ನು ಹುಟ್ಟು ಹಾಕುತ್ತಾ ರೋಚಕವಾಗಿ ಓದಿಸಿಕೊಂಡು ಹೋಗುವ ಒಂದು ಕಾದಂಬರಿಯಾಗಿದೆ. ಇದಿಷ್ಟೇ ಆಗಿದ್ದರೆ ಇದಕ್ಕೆ ವಿಶಿಷ್ಟ ಮಹತ್ವ ಇರುತ್ತಿರಲಿಲ್ಲ. ನಮ್ಮ ಸಮಾಜವನ್ನು ಕಾಡಿದ, ಕಾಡುತ್ತಿರುವ ಕೆಲವಾರು ಅನಿಷ್ಟಗಳ ಕುರಿತು ಬೆಳಕು ಬೀರುವ ಕೃತಿಯಾಗಿಯೂ ಇದು ಲಕ್ಷ್ಯ ಸೆಳೆಯುತ್ತದೆ.

ಮಲೆಯೂರು ಗುರುಸ್ವಾಮಿ ತಾವು ಈ ಕೃತಿಯನ್ನು ರಚಿಸಲು ಪ್ರೇರಣೆಯ ಬಗ್ಗೆ ಬರೆಯುತ್ತಾ, ಎರಡೂವರೆ ದಶಕಗಳ ಕಾಲ ನಂಜನಗೂಡಿನಲ್ಲಿ ಅವರು ಪ್ರಾಧ್ಯಾಪಕರಾಗಿ ಕರ್ತವ್ಯ ನಿರ್ವಹಿಸುತ್ತಿದ್ದಾಗ ಬೆಂಗಳೂರು ನಾಗರತ್ನಮ್ಮನವರ ಬಗ್ಗೆ ಕಿವಿಗೆ ಬಿದ್ದ ವಿಚಾರಗಳ ಬೆಂಬತ್ತಿ ಎರಡು ವರ್ಷಗಳ ಹುಡುಕಾಟದ ನಂತರ ಈ ಕೃತಿ ರೂಪ ತಾಳಿದೆ ಎಂದಿದ್ದಾರೆ ಹಾಗಾಗಿ ಕಾದಂಬರಿಯಲ್ಲಿ ತುಂಬಿರುವ ಮಾಹಿತಿಗಳಿಗೆ ಒಂದು ಅಧಿಕೃತತೆ ಬಂದಿದೆ. ಇದು ಕಲಾವಿದೆಯೊಬ್ಬಳ ಜೀವನಗಾಥೆ, ಕಲ್ಪನೆಯ ಮೂಸೆಯಲ್ಲಿ ಒಂದು ಸುಂದರ ಆಕಾರ ತಾಳಿ ಕಾದಂಬರಿಯಾಗಿ ಅರಳಿದೆ.

ಕಪಿಲೆಯ ಮಡಿಲಾದ ನಂಜನಗೂಡಿನಲ್ಲಿ ನೆಲೆಸಿದ್ದ ದೇವದಾಸಿ ಸಮುದಾಯದ ಕಲಾವಿದೆ ಪುಟ್ಟಲಕ್ಷ್ಮಮ್ಮನವರ ಪುತ್ರಿ ನಾಗರತ್ನ. ಅಲ್ಲಿ ಪ್ರಸಿದ್ಧ ವಕೀಲರಾಗಿದ್ದ ಸುಬ್ಬರಾಯರು ಪುಟ್ಟಲಕ್ಷ್ಮಮ್ಮನ ಸಂಗೀತಕ್ಕೆ ಮರುಳಾಗಿ ಅವಳಿಗೆ ಆಶ್ರಯ ಕಲ್ಪಿಸಿಕೊಟ್ಟು ಉಪಪತ್ನಿಯನ್ನಾಗಿ ಸ್ವೀಕರಿಸಿದ್ದರೆನ್ನುತ್ತದೆ ಕಾದಂಬರಿ. ಇದಕ್ಕೆ ಸುಬ್ಬರಾಯರು ತಮ್ಮ ಧರ್ಮಪತ್ನಿಯ ಅನುಮತಿ ಪಡೆದಿದ್ದರು ಎಂಬ ಇಲ್ಲಿನ ಮಾತು ಚರ್ಚಾರ್ಹವೇ ಸರಿ.

ಕಳೆದ ಶತಮಾನದಲ್ಲಿ ದೇವಸ್ಥಾನಗಳಲ್ಲಿ ಅಷ್ಟಾವಧಾನ ಸೇವೆಯಲ್ಲಿ ಸಂಗೀತ-ನೃತ್ಯ ಒಂದು ಧಾರ್ಮಿಕ ವಿಧಿಯಾಗಿತ್ತು. ಇದರ ಫಲವಾಗಿ ದೇವರಿಗೇ ತಮ್ಮನ್ನು ಮುಡಿಪಿಟ್ಟ ದೇವದಾಸಿಯರ ಒಂದು ಸಮೂಹವೇ ಸೃಷ್ಟಿಯಾಗಿತ್ತು. ಈ ವರ್ಗಕ್ಕೆ ಸೇರಿದ ಮಹಿಳೆಯರು ಪರಮ ಸೌಂದರ್ಯವತಿಯರು, ನೃತ್ಯ ಸಂಗೀತದಲ್ಲಿ ಜನ್ಮಜಾತವಾಗಿ ಪ್ರತಿಭೆ ಹೊಂದಿದವರೂ ಆಗಿದ್ದರು. ಅವರ ಕಲೆಗೆ ದೇವಸ್ಥಾನಗಳು, ರಾಜ-ಮಹಾರಾಜರು, ಶ್ರೀಮಂತರು ಪ್ರೋತ್ಸಾಹ ಕೊಡುತ್ತಿದ್ದರು, ರಸಿಕರಾಗಿ ಸಂಗೀತ-ನೃತ್ಯವನ್ನು ಉಳಿಸಿದರು, ಬೆಳೆಸಿದರು.

ಆದರೆ, ಈ ದೇವದಾಸಿಯರು ಆಶ್ರಯದಾತರ ಭೋಗ ವಸ್ತುಗಳೂ ಆಗಿದ್ದರು. ಹಾಗಾಗಿ, ದೇವದಾಸಿಯರ ಸಂಗೀತ-ನೃತ್ಯವನ್ನು ಆರಾಧಿಸುತ್ತಿದ್ದರೂ ಅವರನ್ನು ಸಮಾಜ ಕಳಂಕಿತರಂತೆ ಕಾಣುತ್ತಿತ್ತು. ಇಂಥ ಕಾಲದಲ್ಲಿಯೇ ನಂಜನಗೂಡಿನ ನಾಗರತ್ನ ಎಂಬ ವಿಶಿಷ್ಟ ಪ್ರತಿಭೆಯ ಜೀವನ ಸಾಗುವುದು. ಒಂದು ಕಡೆ ದೇವದಾಸಿ ಕುಲದವಳೆಂಬ ತಿರಸ್ಕಾರ, ಇನ್ನೊಂದು ಕಡೆ ಬಾಲೆಯ ಅಸಾಧಾರಣ ಧಾರಣ ಶಕ್ತಿಯನ್ನು ನೋಡಿ ನೃತ್ಯ-ಸಂಗೀತದ ಜೊತೆ ಸಂಸ್ಕೃತ ಅಭ್ಯಾಸವನ್ನು ಮಾಡಿಸುವ ಉದಾರ ಮನದ ಚಿಕ್ಕಲಿಂಗಯ್ಯ ಮೇಷ್ಟ್ರು. ಈ ದ್ವಂದ್ವಗಳ ಮಧ್ಯೆಯೇ ಕಪಿಲಾ ನದಿ ಕಾವೇರಿಯಲ್ಲಿ ಬೆರೆಯಬೇಕು, ಕಾವೇರಿ ಕಡಲಿಗೆ ಸೇರಿ ದೊಡ್ಡದಾಗಬೇಕು ಎಂಬ ಗುರುವಿನ ಮಾರ್ಗದರ್ಶನ ನಾಗರತ್ನಳ ಮೇಲೆ ಅಗಾಧ ಪರಿಣಾಮ ಬೀರುತ್ತದೆ.

ವಕೀಲ ಸುಬ್ಬಾರಾಯರ ಇಟ್ಟುಕೊಂಡವಳ ಮಗಳು ಎಂಬ ಅಪವಾದ-ಅವಮಾನಗಳಲ್ಲಿ ಬೇಯುವಾಗಲೇ ಸುಬ್ಬಾರಾಯರು ತಾಯಿ-ಮಗಳನ್ನು ಮೈಸೂರಿಗೆ ಕಳಿಸಿ ಅಲ್ಲಿ ಅವರ ಜೀವನಕ್ಕೆ ಮತ್ತು ನಾಗರತ್ನಳ ನೃತ್ಯ-ಸಂಗೀತದ ಅಭ್ಯಾಸಕ್ಕೆ ಅವಕಾಶ ಕಲ್ಪಿಸುತ್ತಾರೆ. ಅಲ್ಲಿ ಗಿರಿಭಟ್ಟ ತಮ್ಮಯ್ಯನವರ ಶಿಷ್ಯೆಯಾಗಿ ನಾಗರತ್ನಳ ಪ್ರತಿಭೆ ಅರಳಿ ಮೈಸೂರಿನಲ್ಲಿ ತನ್ನ ಸೌರಭ ಪಸರಿಸತೊಡಗುತ್ತದೆ. ಮೈಸೂರು ಮಹಾರಾಜರು, ಬಿಡಾರ ಕೃಷ್ಣಪ್ಪ, ಬಸಪ್ಪ ಶಾಸ್ತ್ರಿಗಳು, ಪಿಟೀಲು ಚೌಡಯ್ಯ, ವೀಣೆ ಶೇಷಣ್ಣ ಮುಂತಾದವರ ಸಾನಿಧ್ಯದಲ್ಲಿ ನಾಗರತ್ನಳ ವ್ಯಕ್ತಿತ್ವ ವಿಕಸನಗೊಳ್ಳ ತೊಡಗುತ್ತದೆ.

ಯಾವ ಕಾಲದಲ್ಲೂ ಇರುವಂತೆ ಸಂಗೀತ-ನೃತ್ಯ ಕ್ಷೇತ್ರದ ಸ್ಪರ್ಧೆಗಳು, ಮತ್ಸರ, ಗುಂಪುಗಾರಿಕೆ-ತಂತ್ರಗಾರಿಕೆ, ವಿದ್ವಾಂಸರ ಸ್ವಾರ್ಥಪರತೆ ನಾಗರತ್ನ ಮೈಸೂರು ತೊರೆಯುವಂತೆ ಮಾಡುವ ಘಟನೆಗಳೆಲ್ಲ ಕಾದಂಬರಿಯಲ್ಲಿ ಕುತೂಹಲಹುಟ್ಟಿಸುತ್ತಾ ಕಾದಂಬರಿಯನ್ನು ಪರಿಣಾಮಕಾರಿಯಾಗಿ ಬೆಳೆಸಿವೆ. ಬೆಂಗಳೂರಿನಲ್ಲಿ ನಾಗರತ್ನ-ನಾಗರತ್ನಮ್ಮ ಆದದ್ದು, ಅವರ ಜೀವನ ಮಟ್ಟ ಪ್ರತಿಷ್ಠಿತರ ಆಶ್ರಯದಿಂದ ಸುಧಾರಿಸಿದ್ದು, ಸಂಗೀತ ರಸಯಾತ್ರೆ ಏರುಗತಿಯಲ್ಲಿ ಸಾಗುವುದು ರೋಚಕವಾಗಿ ಚಿತ್ರಿತವಾಗಿದೆ.

ನಾಗರತ್ನಮ್ಮನವರ ಶರೀರ-ಶಾರೀರಕ್ಕೆ ಸಂಪೂರ್ಣವಾಗಿ ಮನಸೋತ ನ್ಯಾಯಾಧೀಶರಾದ ನರಹರಿರಾಯರು, ನಾಗರತ್ನಮ್ಮನವರಿಗೆ ಆಶ್ರಯದಾತರಾದರು. ನಾಗರತ್ನಮ್ಮನವರು ಸಂಪೂರ್ಣವಾಗಿ ನರಹರಿರಾಯರ ಪ್ರೇಮ(ಬಂಧನ)ದಲ್ಲಿ ಸಿಕ್ಕಿಬಿಟ್ಟರು. ಕೆಲವು ವರ್ಷಗಳ ನಂತರ ಮದ್ರಾಸ್‌ಗೆ ಹೋಗಿ ರಾಜರತ್ನಂ ಮೊದಲಿಯಾರ್ ಅವರ ಆಶ್ರಯ ಸೇರುವಂತೆ ನರಹರಿರಾಯರೇ ಸೂಚಿಸುತ್ತಾರೆ. ಮದ್ರಾಸ್‌ನ ಸಂಗೀತ ಸಾಗರದಲ್ಲೂ ತಮ್ಮ ಪ್ರತಿಭೆ-ವಿದ್ವತ್‌ನಿಂದ ಮಿಂಚುತ್ತಾ ನಾಗರತ್ನಮ್ಮಾಳ್ ಆಗುವುದು ಒಂದು ರೋಚಕ ಕಥೆಯೇ! ಜೀವನದ ಕೊನೆಯಲ್ಲಿ ಎಲ್ಲ ರಾಗಗಳಿಂದ ವಿರಾಗದತ್ತ ತಿರುಗಿ, ಸಂಪೂರ್ಣವಾಗಿ ತ್ಯಾಗರಾಜರ ಆರಾಧಕರಾಗಿ, ಅವರ ಸಮಾಧಿ ಸ್ಥಳವನ್ನು ಉದ್ಧರಿಸಲು ತನ್ನ ತನು-ಮನ-ಧನ-ಸಂಗೀತವನ್ನು ಮುಡಿಪಾಗಿಟ್ಟು ಅದರಲ್ಲಿ ಜಯಶೀಲರಾಗುತ್ತಾರೆ ನಾಗರತ್ನಮ್ಮಾಳ್. ತಮ್ಮ ಮರಣಾನಂತರ ತ್ಯಾಗರಾಜರ ಸಮಾಧಿ ಎದುರಿಗೇ ಅವರ ಸಮಾಧಿ ನಿರ್ಮಾಣವಾಗಿ, ಸಂತತನದ ವ್ಯಕ್ತಿಯೊಬ್ಬರಿಂದ ನಾಗರತ್ನಮ್ಮನವರ ಶಿಲಾ ವಿಗ್ರಹ ಸ್ಥಾಪನೆಯಾಗಿ, ಅವರ ಜೀವನವೇ ಒಂದು ಅದ್ಭುತ ಘಟನಾವಳಿಯಾಗಿ ಪರಿವರ್ತಿತವಾಗುತ್ತದೆ.

ಇದು ದೇವದಾಸಿ ಕುಲದ ಕಲಾವಿದೆಯೊಬ್ಬಳ ಕತೆ! ಅದರ ಮಧ್ಯೆ, ಮಧ್ಯೆ ಬರುವ ರೋಚಕ ಘಟನೆಗಳು, ಕಥಾನಕದ ಒಳಸುಳಿಗಳು, ತಾತ್ವಿಕ ಚರ್ಚೆಗಳು, ಓದುಗರನ್ನು ಹಲವು ದಿಕ್ಕುಗಳಲ್ಲಿ ಚಿಂತನೆಗೆ ಹಚ್ಚುತ್ತವೆ. ಆಧ್ಯಾತ್ಮಿಕ ಜಿಜ್ಞಾಸೆಗಳೂ ಬೌದ್ಧಿಕ ಚರ್ಚೆಗಳೂ ಕಾದಂಬರಿಯಲ್ಲಿ ಕಾಣಸಿಗುತ್ತವೆ. ದೇವದಾಸಿ ಪದ್ಧತಿ ಕೀಳಲ್ಲ, ಅದಕ್ಕೂ ಘನತೆ-ಗೌರವವಿದೆ, ಸಾಮಾನ್ಯ ಮಾನವರ ಆಳಾಗಿ ಬದುಕುವುದಕ್ಕಿಂತ ದೇವರ ದಾಸಿಯರಾಗಿ ಬದುಕುವುದು ಲೇಸು ಎಂದು ವಾದಿಸುವ ನಾಗರತ್ನಮ್ಮಾಳ್ ಮತ್ತು ಸ್ನೇಹಿತೆಯರು ಒಂದು ಕಡೆ, ದೇವದಾಸಿ ಪದ್ಧತಿ ಸಮಾಜವನ್ನು ಕಾಡುವ ಅನಿಷ್ಟ, ಅದನ್ನು ನಿಷೇಧಿಸಲೇಬೇಕು ಎಂದು ವಾದಿಸುವ ಡಾ॥ ಮುತ್ತುಲಕ್ಷ್ಮಿ (ದೇವಾದಾಸಿ ಕುಲದ ಪ್ರಥಮ ವೈದ್ಯೆ!), ರಾಮಕೃಷ್ಣ ಆಶ್ರಮದವರು ಕ್ರಿಶ್ಚಿಯನ್ ಮಿಷನರಿಗಳು ಇನ್ನೊಂದು ಕಡೆ.ಹೀಗೆ ಎರಡು ವಾದ, ಸಮಸ್ಯೆಯ ಮುಖಗಳನ್ನು ಇಲ್ಲಿ ಕಾಣಬಹುದು.

ಕಾದಂಬರಿ ಓದಿ ಮುಗಿಸಿದಾಗ ವಿಚಾರವಂತ ಓದುಗರನ್ನು ಕಾಡುವ ಪ್ರಶ್ನೆಗಳು ನಾಲ್ಕಾರು. ಸುಂದರಿಯರಾದ ದೇವದಾಸಿಯರಿಗೆ, ಆಶ್ರಯ ಕಲ್ಪಿಸಿ ಕೊಡುತ್ತ, ಸಂಗೀತ-ನೃತ್ಯ ಕಲೆಯನ್ನು ಪೋಷಿಸುವ ಈ ಪುರುಷ ಪ್ರತಿಷ್ಠಿತರು ಅವರನ್ನೇ ಮದುವೆಯಾಗಿ ಗೌರವಯುತ ಬಾಳನ್ನು ನೀಡಬೇಕಾಗಿತ್ತು. ಹಾಗೆಯೇ ಈ ಕಲಾಪೋಷಕರ ಹೆಂಡತಿ-ಮಕ್ಕಳು ಇದನ್ನೆಲ್ಲ ಉದಾರತೆಯಿಂದ ಸ್ವೀಕರಿಸಿದಂತೆ ಚಿತ್ರಿತವಾಗಿದ್ದರೂ, ಅದು ಅವರ ಅಸಹಾಯಕತೆ ಅಷ್ಟೇ! ಪುರುಷ ಪ್ರಧಾನ ಸಮಾಜದಿಂದಾಗಿ ಕಟ್ಟಿಕೊಂಡವರು, ಇಟ್ಟುಕೊಂಡವರು ನರಳುವಂತೆ ಮಾಡುವುದರ ಬಗ್ಗೆ ಕಾದಂಬರಿ ಇನ್ನಷ್ಟು ಆಳವಾಗಿ ಚಿಂತಿಸಬೇಕಿತ್ತು ಎನ್ನಿಸದಿರದು..

ಏನೇ ಇದ್ದರೂ ದೇವದಾಸಿ ಕುಲದ ಕಲಾವಿದೆಯ ಬಗ್ಗೆ, ಎಲ್ಲಿಯೂ ಅವರ ಗೌರವಕ್ಕೆ ಚ್ಯುತಿ ಬಾರದಂತೆ ಸಂಯಮದಿಂದ ಕಾದಂಬರಿ ಬರೆದಿರುವ ಪ್ರೊ. ಮಲೆಯೂರು ಗುರುಸ್ವಾಮಿ ಅಭಿನಂದನಾರ್ಹರು.

-ವಿಜಯಾ ಶ್ರೀಧರ್

ಪು: ನೀಲಿ ಮೂಗಿನ ನತ್ತು (ಪ್ರಬಂಧಗಳು) ಲೇ: ಎಚ್.ಆರ್. ಸುಜಾತಾ ಪ್ರ: ನವಕರ್ನಾಟಕ ಪಬ್ಲಿಕೇಷನ್ಸ್, ಬೆಂಗಳೂರು ಪು: ೨೧೨ ಬೆಲೆ: ರೂ. ೧೯೦/-

ಭಾಷೆಯ ಸೊಗಡಿನಲ್ಲಿ ಮೂಡಿದ ಬೆಡಗಿನ ಚಿತ್ರಗಳು



ಈ ಪ್ರಬಂಧ ಸಂಕಲನದ ಬಗ್ಗೆ ಮೊದಲಿಗೇ ಹೇಳಬಹುದಾದ ಒಂದು ಮಾತೆಂದರೆ, ಇದನ್ನು ಓದಿದ ಯಾರಾದರೂ ಒಂದು ವಿಶೇಷ ಅನುಭವಕ್ಕೆ ಒಳಗಾಗುವುದು ಖಂಡಿತ. ಪ್ರಬಂಧಕ್ಕೆ ಆಯ್ಕೆ ಮಾಡಿಕೊಂಡಿರುವ ವಸ್ತುಗಳಿಗಿಂತಲೂ ಅವನ್ನು ನಿರೂಪಿಸಿರುವ ಶೈಲಿ, ಭಾಷೆ ವಿಶೇಷವಾಗಿ ಓದುಗರ ಗಮನ ಸೆಳೆಯುತ್ತವೆ. 24 ಪ್ರಬಂಧಗಳನ್ನು ಒಳಗೊಂಡ ಈ ಕೃತಿಯಲ್ಲಿ ನಾವು ಕಳೆದುಕೊಳ್ಳುತ್ತಿರುವ ಗ್ರಾಮೀಣ ಪರಿಸರ ಮೌಲ್ಯಗಳನ್ನು ಬಿತ್ತಿ ಬೆಳೆಸಲಾಗಿದೆ. 'ಸಂಯುಕ್ತ ಕರ್ನಾಟಕ' ಪತ್ರಿಕೆಯಲ್ಲಿ ಅಂಕಣ ಹಾಗೂ ಅವಧಿ ಬ್ಲಾಗ್‌ಗಳನ್ನು ಬರೆಯುತ್ತಿದ್ದ ಸುಜಾತಾ ಅವನ್ನೆಲ್ಲ ಸಂಗ್ರಹಿಸಿ ಈ ಸಂಕಲನವನ್ನು ತಂದಿದ್ದಾರೆ. ಸಿದ್ಧ ಮಾದರಿಯ ಭಾಷೆ, ವಸ್ತುಗಳನ್ನು ಬಿಟ್ಟು ತನ್ನದೇ ಶೈಲಿಯ ಭಾಷೆಯ ಹುಡುಕಾಟದಲ್ಲಿ ತೊಡಗಿರುವ ಸೃಜನಶೀಲ ಕೃತಿಗಳು ಈ ಎರಡು ಮೂರು ದಶಕಗಳಲ್ಲಿ ಕನ್ನಡ ಸಾಹಿತ್ಯದಲ್ಲಿ ವಿಫುಲವಾಗಿ ಬಂದಿವೆ. ತಮ್ಮತನವನ್ನು ಬಿಟ್ಟುಕೊಡದ ಇಂತಹ ಕೃತಿಗಳು ಸಾಹಿತ್ಯ ಲೋಕದಲ್ಲಿ ತಮ್ಮದೇ ಛಾಪು ಮೂಡಿಸಿವೆ, ಹೊಸ ಓದುಗರನ್ನು ಬರಹಗಾರರನ್ನು ಸೃಷ್ಟಿಸಿವೆ. ದೇವನೂರರ 'ಕುಸುಮಬಾಲೆ'ಯಿಂದ ಹಿಡಿದು ಕುಸುಮಾ ಅಯರಹಳ್ಳಿ ತನಕ ಹತ್ತಾರು ಲೇಖಕರು ತಮ್ಮ ಗ್ರಾಮೀಣ ಪರಿಸರದಲ್ಲಿ ಆಡುವ ಭಾಷೆಯಲ್ಲಿ ಬರೆಯುತ್ತಾರೆ. ಕಣ್ಮರೆಯಾಗುತ್ತಿರುವ ಜೀವನಶೈಲಿ, ಕಳೆದು ಹೋಗುತ್ತಿರುವ ಭಾಷೆ ನಮ್ಮ ರುಚಿಯನ್ನು ಕಳೆದುಕೊಳ್ಳುತ್ತಿರುವ ನಾಲಗೆ ಕರ್ಣಪಟಲದಿಂದ ದೂರವಾಗುತ್ತಿರುವ ಭಾಷೆಯನ್ನು ದಾಖಲಿಸುವ ಪ್ರಯತ್ನವೂ ಇದಾಗಿದೆ ಎಂದರೆ ತಪ್ಪಾಗಲಾರದು.

ಈ ಸಂಕಲನದ ಪ್ರಬಂಧಗಳನ್ನು ಓದುತ್ತಾ ಹೋದಂತೆ ನಾವು ಮೊದಲಿಗೆ ಮೋಹಕ್ಕೊಳಗಾಗುವುದು ಭಾಷೆಗೆ. ಇಲ್ಲಿ ಭಾಷೆ ಕುಣಿಯುತ್ತದೆ, ಅರಳುತ್ತದೆ, ಮಾತನಾಡುತ್ತದೆ, ಕಣ್ಣಿಗೆ ಕಟ್ಟುತ್ತದೆ, ನಮ್ಮೆದುರಿಗೆ ಜೀವಂತಿಕೆ ಹೊಂದಿ ವ್ಯಕ್ತಿಯಾಗಿಬಿಡುತ್ತದೆ. ಲೇಖಕಿಯ ಚಿತ್ರಕ ಶಕ್ತಿ ಶಬ್ದಚಿತ್ರವಾಗಿ ಕಣ್ಣೆದುರು ಅನಾವರಣಗೊಳ್ಳುತ್ತದೆ. ವಿಚಾರಗಳು ತಲೆಯೊಳಗೆ ಇಳಿಯುವ ಬದಲು, ಇದನ್ನು ಓದುತ್ತಿಲ್ಲ ಕೇಳಿಸಿಕೊಳ್ಳುತ್ತಿದ್ದೇವೆ ಎನಿಸುತ್ತದೆ. ಕೈಯಲ್ಲಿ ಪುಸ್ತಕ ಹಿಡಿಯದೆ ಕಿವಿಯಲ್ಲಿ ಕೇಳಿಸಿಕೊಳ್ಳುತ್ತಿದೇವೆ ಅನ್ನಿಸುವ ವಿಚಿತ್ರ ವಿಶೇಷ ಅನುಭವಕ್ಕೆ ನಾನು ಪಕ್ಕಾದೆ.

ನಿರೂಪಕಿಗಿರುವ ಬಾಲ್ಯದ ದಟ್ಟವಾದ ಗ್ರಾಮೀಣ ಅನುಭವಗಳು, ಅಲ್ಲಿ ಬರುವ ವ್ಯಕ್ತಿ, ಪರಿಸರ, ಪ್ರಾಣಿ, ಪಕ್ಷಿಗಳ ವಿಶೇಷ ಆವರಣಗಳಲ್ಲಿ ಅನಾವರಣಗೊಳ್ಳುತ್ತದೆ. ಅವರ ಬಾಲ್ಯದ ಚಿಕಿತ್ಸಕ ನೋಟಕ್ಕೆ ನಾವೂ ಬೆರಗಾಗುತ್ತೇವೆ. "ಮಣ್ಣನ್ನು ನಂಬಿ ಬದುಕು ಮಾಡುತ್ತಿದ್ದ ರೈತ ಸಂಕುಲದ ಮಗಳು ಎನ್ನುವ ಹೆಮ್ಮೆ ಹಾಗೂ ವಿನಯ ಎರಡೂ ನನ್ನದು, ನನ್ನ ಕಣ್ಣಳತೆಯಲ್ಲಿ ದಾಖಲಿಸುವ ಪ್ರಯತ್ನಕ್ಕೆ ನನ್ನ ಬರವಣಿಗೆ" ಎಂದು ಹೇಳುತ್ತಾರೆ ಸುಜಾತಾ. ಹಾಸನ ಜಿಲ್ಲೆಯ ಆಲೂರು ಹತ್ತಿರದ ಪರಿಸರ ಈ ಪ್ರಬಂಧಗಳ ಪ್ರದೇಶ. ಅಲ್ಲಿನ ನೆಲದ ಬದುಕು ಭ್ರಮೆ, ಭಾಷೆ ಮತ್ತು ಬೆರಗು ಸುಜಾತಾರವರ ಬರವಣಿಗೆಗೆ ಪ್ರೇರಣೆಯಾಗಿವೆ.

ಕೆಂಪು ಗಾರೆಯ ನೆಲದ ಮೇಲೆ ಕುಳಿತು ಇಡೀ ಬಾಲ್ಯಕ್ಕೆ ಜಾರುವ ನೆನಪುಗಳು, ತನ್ನ ಊರು ಕಂಡ ಅಭಿವೃದ್ಧಿ ಹೇಗೆ ಸಣ್ಣಪುಟ್ಟ ಸುಖಗಳನ್ನು ಹಾಳು ಮಾಡಿದೆ ಎಂಬುದನ್ನು ಸೂಚಿಸುತ್ತಾ ಆಧುನಿಕತೆಗೆ ಹೊರಳುತ್ತಿರುವ ನಮ್ಮ ಬದುಕಿನ ಸಂಕಟಗಳನ್ನು ದಾಖಲಿಸುತ್ತಾರೆ. ಇಲ್ಲಿನ ಜನಗಳ ಒಳ್ಳೆಯತನ, ಯಾವುದೇ ಹೊಗಳಿಕೆ ತೆಗಳಿಕೆಗೆ ಬಗ್ಗದೆ ಸಹಾಯ ಹಸ್ತ ಚಾಚುವ ವ್ಯಕ್ತಿಗಳು, ಹೆರಿಗೆ ಮಾಡಿಸುವ, ಅಕ್ಕಿ ಹಸನು ಮಾಡುವ ಮುಂತಾದ ಕೆಲಸ ಕಾರ್ಯಗಳಲ್ಲಿ ಕೌಶಲ ಹೊಂದಿರುವ ವಿಶೇಷ ವ್ಯಕ್ತಿಗಳು, ಆಲೂಗೆಡ್ಡೆಯನ್ನು ಮೊಟ್ಟಮೊದಲಿಗೆ ಬೆಳೆದು ಕೌತುಕ ಮೂಡಿಸುವ ಪಟೇಲರು, ವಿಶಿಷ್ಟ ಗುಣದ ಅಂಬತ್ತೆ ಮುಂತಾದ ಹತ್ತು ಹಲವು ವ್ಯಕ್ತಿಗಳು, ಅಲ್ಲಿಯ ನಂಬಿಕೆಗಳು, ಜೀವನ ಶೈಲಿ, ಮಡಿ ಮೈಲಿಗೆ, ಜಾತ್ರೆ, ಕೋಳಿ, ಹಕ್ಕಿ ಹೂವು ಸಕಲೆಂಟು ಜೀವಿಗಳನ್ನು ಒಳಗೊಂಡು ಒಂದಾಗಿ ಬದುಕುವ ಪರಿಸರದ ನಿರುಪಣೆ 'ಸಾಕು ಬೇಕುಗಳ ನಡುವೆ' ಎಂಬ ಪ್ರಬಂಧದಲ್ಲಿ ನಗರದ ಆಸ್ಪತ್ರೆಯೊಂದರಲ್ಲಿ ನಡೆಯುವ ಹೆರಿಗೆಯ ಚಿತ್ರಣದೊಂದಿಗೆ ಆರಂಭವಾಗಿ ಬದುಕಿನ ಅನೇಕ ಚಿತ್ರಗಳ ಮೂಲಕ ಮನುಷ್ಯರ ಸಣ್ಣತನ, ಧಾರಾಳತನ, ಬೇಕು ಬೇಡಗಳನ್ನು ಹೇಳುತ್ತಾ ಒಂದು ತಾತ್ವಿಕ ನೆಲೆಗಟ್ಟಿಗೆ ಬಂದು ನಿಲ್ಲುತ್ತದೆ.

ಈ ಪ್ರಬಂಧಗಳಲ್ಲಿ ಚಿತ್ರಿತವಾಗಿರುವ ಮಹಿಳೆಯರ ಪ್ರಪಂಚವೇ ಕುತೂಹಲಕರ. ನಮ್ಮೂರೋಬವ್ವ ಸುಳ್ಳಕ್ಕಿ ಹೊನ್ನಳ್ಳಿ ಶಿವಮ್ಮನಂತಹ ಗಟ್ಟಿಗಿತ್ತಿ ಹೆಂಗಸರು, ಅವರು ಮಾಡುವ ಕಾಯಕವನ್ನು ತನ್ಮಯತೆಯಿಂದ ಗಮನಿಸುತ್ತಾ ಅವರ ಧ್ಯಾನದಂತಹ ಕಾರ್ಯಗಳನ್ನು ದಾಖಲಿಸುತ್ತಾರೆ. ನನ್ನ ವಿಶೇಷಗಮನ ಸೆಳೆದದ್ದು ನಕ್ಷತ್ರ, ಮರ. ಗಿಡ ಹೂವು ಸೂರ್ಯ ಮಡಕೆಯಂತಹ ಚರಾಚರ ವಸ್ತುಗಳಿಗೆ ವಿಶಿಷ್ಟ ಭಾಷೆಯ ಮೂಲಕ ತಂದಿರುವ ಜೀವಂತಿಕೆ. ಉದಾಹರಣೆಗೆ, 'ಅಯ್ಯೋ ಪ್ಯಾಟಲಿತಿರ್ಕಿ ಷೋಕಿ ಮಾಡಕಂದು ತಿರ್ಗ್ಗಾದೊ ಮುಕ್ಕಗಳಾ, ಬೆಂಗ್ಳೂರಲ್ಲಿ ತಲೆಮ್ಯಾಕೆ ತಲೆ ಎತ್ತಿ ನೋಡ್ಡದಂಗೆ ಗೇಯ್ತೀರಲ್ಲಾ....ಅಲ್ಲೇನು ರಸಾನ್ನ ಉಂಡೀರಾ ಅನಕಂಡು ಚಂದ್ರ ಆಡಕಂಡು ಸಣ್ಣಗೆ ಸಂದೀಲಿ ನಗಾಡಂಗೆ ಆಯ್ತು' ಅನ್ನುವ ಮಾತಿನಲ್ಲಿ ಅವರ ಆಡುಮಾತಿನ ಸೊಗಡಿನ ಬೆಡಗಿನ ಶೈಲಿಯನ್ನು ಗಮನಿಸಬಹುದು. ಹಾಗೇ, 'ಒಂದು ಬೆಣ್ಣೆ ಮದ್ದೆ ಕೊಡ ಬಿಸ್ಲು ಕಾವಿಗೆ ನಿನ್ನ ಕೈಗೆ ಸಿಗದೇ ಹೊಗ್ತಿನ್ ನೋಡು' ಎನ್ನುವ ಪ್ರಯೋಗ! ಸಕಲ ಜೀವಿಗಳೊಳಗೆ ಪರಕಾಯ ಮಾಡುವ ನಿರೂಪಕಿ ತಮ್ಮ ಅಪಾರವಾದ ಗಾದೆ, ಒಗಟು ಶಬ್ದ ಸಂಪತ್ತಿನಿಂದ ಗ್ರಾಮೀಣ ಜನರ ನಂಬಿಕೆ ಜೀವನ ಕ್ರಮಗಳಿಂದ ತುಂಬಿ ಕಟ್ಟಿರುವ ಪ್ರಬಂದಗಳು ಓದುಗರಿಗೆ ಅನನ್ಯ ಅನುಭವ ನೀಡುತ್ತದೆ.

–ಕೆ. ಮಂಜುಳಾ ರಾಜು

೧೭ನೇ ಪುಟದಿಂದ)

ಅದು ಮುನಿಸಿನ ಬಡಬಡಿಕೆ ಆಗಿರಲಿಲ್ಲ. ನೋವು ಕುದ್ದು ಕುದ್ದು ಅಂಟು ಅಂಟಾಗಿತ್ತು. ಈ ಜಗತ್ತಿನ ಯಾವ ಜಲದಿಂದ ತೊಳೆದರೂ ಜಿಗುಟು ಹೋಗದ ಅಂಟು. ಮಂಜು ಫೋನು ರಿಂಗಾಯಿತು. ಅವಳು ಗಂಟಲು ಸರಿಮಾಡಿಕೊಂಡಳು. ಮೃದುವಾಗಿ ತೀರಾ ಮೃದುವಾಗಿ ಮಾತಾಡಿದಳು. 'ಪಾರ್ಲರದಾಗದೀನಿ. ಹೂಂ. ಊಟ ಇನ್‌ಮ್ಯಾಲ ನಿಂದು?... ಹೂಂ ಇರ್ತಿನಿ. ಒಬ್ಬಾಕಿ ಇರೂದು ಅಭ್ಯಾಸ ಆಗೇತೇಳು. ಹೂಂ... ವಿಚಾರ ಮಾಡೇನಿ. ಮತ್ತ ಮತ್ತ ನನ್ನ ಕಾಡಬ್ಯಾಡ...' ಮಾತಾಡುವಾಗಲೇ ಫೋನು ಅವಳ ಗಂಡನಾಗಿದ್ದವನೆಂದು ತಿಳೀತಿತ್ತು. ಅವಳ ಮುಖ ಹುಣ್ಣಾದ ಹಾಗಿತ್ತು. ದಟ್ಟ ವಿಷಣ್ಣತೆಯದು. 'ಈಗ ಕೇಳ್ತಾನ ಆಂಟಿ ಒಬ್ಬಾಕಿ ಇರ್ತೀಯಾ ಅಂತ. ಇಷ್ಟೂರ್ಷ ಮನಿಗ ಬಾ ಅಂತ ಕಾಲಿಗ ಬಿದ್ರೂ ನನ್ನ ನಾಯಿ ಮಾಡಿದಾಂಗ ಮಾಡಿದ...' ಅಂದಳು. ಡೈವೋರ್ಸ ಆಗುವವರೆಗೂ ಅವನ ಮಾತಿಗೆ ಸಮಾಧಾನದಿಂದ ಉತ್ತರ ಕೊಡು ಅಂತ ವಕೀಲರು ಹೇಳಿದ್ದಾರಂತೆ.

ನನ್ನಲ್ಲಿ ಮಾತು ಕಳೆದಿತ್ತು. ಹೆಚ್ಚು ಕಲಿಯದ, ತಿಳಿಯದ ಹುಡುಗಿ ಅವಳು. ಎರಡೂ ಕೈಯಲ್ಲಿ ನೀರು ಬಡಿಯುತ್ತ ಬದುಕಿಗೊಂದು ತೃಪ್ತಿಯ ನಿಲ್ದಾಣವನ್ನು ಅರಸುತ್ತಿದ್ದಳು. ಇನ್ನು ಎಷ್ಟು ದೂರವೋ... ಅವಳು ದಣಿದಿದ್ದಳು, ಸೋತಿರಲಿಲ್ಲ. ಅವಳೊಳಗವಳು ನಿಚ್ಚಳವಿದ್ದಳು. ತನಗೇನು ಬೇಕು ಎನ್ನುವುದರ ಬಗ್ಗೆ, ಮುಂದೇನು ಎನ್ನುವುದರ ಬಗ್ಗೆ... ರೆಕ್ಕೆ ನಂಬಿ ಆಗಸಕೆ ನೆಗೆವ ಪುಟ್ಟ ಹಕ್ಕಿಯಂತೆ. 'ಒಳ್ಳೇದಾಗಲಿ ಮಂಜು, ಇನ್ನು ಮೇಲಾದರೂ' ಎಂದೆ. ಆಂಟಿ, ಯಾರಿಗೂ ಹೇಳ್ಬೇಡಿ, ಗಂಡಸರ ಪ್ರಪಂಚದಾಗ ಏಗಬೇಕಾಗೇತಿ ನಾನು. ಮಡಿಲಾಗೊಂದು ಮಗು ಬೇಕಂತ ಎಂತೆಂಥವ್ರ ಕೂಡ ಹೊಂದಾಣಿಕೆ ಮಾಡ್ಕೊಳ್ಳಾಕ ನಾ ತಯಾರಿಲ್ಲ. ನೋಡೂಣ. ಮುಂದೇನಾಕ್ಕೇತೋ– ಎಂದಳು. ಹೌದು ನಕ್ಕಳು ಮಂಜು, ಬಲು ಮೆಲುವಾಗಿ. ತೇವಗೊಂಡಿತ್ತು ಮನಸ್ಸು.ನಿಧಾನ ಮನೆ ಬಾಗಿಲಿಗೆ ಬಂದೆ. ಇಕಿಯೇನೀಕಿ, ಗೋಣ ಮಸಾಜ್ ಮಾಡಸ್ಕೊಂತೀನಿ ಅಂತ ಹೋಗಿ ಗೋಣ ಮುರ್‍ಸಕೊಂಡು ಬಂದಾಂಗ ಬಂದಾಳಲ್ಲ– ಅಂತ ಇವ ಚಟಾಕಿ ಹಾರಿಸಿದ. ಮಗಳು ನಕ್ಕಳು. ನಾ ಒಳಹೋದೆ.

(ದಾಂಡೇಲಿಯ ಸರ್ಕಾರಿ ಪ್ರ. ದ. ಕಾಲೇಜಿನಲ್ಲಿ ಕನ್ನಡ ಅಧ್ಯಾಪಕಿಯಾಗಿರುವ ಕಥೆಗಾರ್ತಿ ಡಾ. ವಿನಯಾ ಹಿರಿಯ ಕವಯತ್ರಿ ಮತ್ತು ವಿಮರ್ಶಕಿಯೂ ಆಗಿದ್ದಾರೆ)

'ಮಹಿಳಾ ವಿಶೇಷಾಂಕ-೨೦೧೮ ಕ್ಕೆ
ಹಾರ್ದಿಕ ಶುಭಾಶಯಗಳು




ಎಂ. ಚಂದ್ರಶೇಖರ್ ಪ್ರತಿಷ್ಠಾನ
'ಸರ್ವೋದಯ', ನಂ.೭೨,
ಪ್ರೊ.ಡಾ. ಎ.ಆರ್. ಕೃಷ್ಣಶಾಸ್ತ್ರಿ ರಸ್ತೆ,ಬಸವನಗುಡಿ,
ಬೆಂಗಳೂರು-೫೬೦ ೦೦೪

ಹೊಸ ಮನುಷ್ಯ'ದ ಮಹಿಳಾ ಓದುಗರೆಲ್ಲರಿಗೂ
ಮಹಿಳಾ ದಿನಾಚರಣೆಯ ಹಾರ್ದಿಕ ಶುಭಾಶಯಗಳು



ಜನತಾ ಮಾಧ್ಯಮ
ಹಾಸನ ಜಿಲ್ಲೆಯ ದಿನಪತ್ರಿಕೆ
ಆರ್.ಸಿ. ರಸ್ತೆ, ಹಾಸನ
ದೂ ೦೮೧೭೨-:೨೬೮೪೯೪

ತಿಂಗಳ ಸಾಲುಗಳು...



ಪತಿವ್ರತಾ ಶಕ್ತಿಯ ಸಂಕೇತವಾದ ಸಾವಿತ್ರಿಯ ಜಾಗದಲ್ಲಿ ದ್ರೌಪದಿಯನ್ನು ಕೂರಿಸಲು ಪುರುಷ ಪ್ರಧಾನ ಸಮಾಜ ಹೆದರಿದೆ. ಆದರೆ ಸಾವಿತ್ರಿಯ ಪತಿವ್ರತಾ ಶಕ್ತಿಗೆ ಮಹತ್ವ ನೀಡಿರುವುದು ಗಂಡಿನ ಪ್ರಭುತ್ವವನ್ನು ಪೋಷಿಸುವ ಉದ್ದೇಶದಿಂದಲೇ ಎಂಬುದನ್ನು ನಾವು ಗಮನಿಸದಿರಲಾಗದು.

-ರಾಮಮನೋಹರ ಲೋಹಿಯಾ

HOSA MANUSHYA, a kannada Socialist monthly solely owned, edited, published and printed by D.S. Nagabhushana, at HIG-5,Kallahally Extn.,Vinoba Nagara, SHIVAMOGGA-577204. Printed at Replica Offset Printers, No.14/1, 1st Main, Industrial Town, Rajaji Nagara, Bengaluru-560 044 Ph: 08023357963

Regd. News Paper RNI No. KARKAN/2012/47568
Rgd No. KA/SK/SMG-1209/2016-18
ಇವರಿಗೆ \ To

If undelivered, please return to D.S. Nagabhushana, Editor,
'Hosa Manushya', 'HIG-5, 'Nudi', Kallahalli Extension,
Vinoba Nagara, Shivamogga -577204(Karnataka)